

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 23 ಸೋಮವಾರ 2024

ಸಂಪುಟ: 45 | ಸಂಚಿಕೆ: 158 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ತಿರುಪತಿ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆ ಪ್ರತಿಧ್ವನಿ


ಸರ್ಕಾರದ ಸ್ವಾಧೀನದಿಂದ ದೇಗುಲ ಮುಕ್ತಗೊಳಿಸಲು ಮಠಮಾನ್ಯಗಳ ಆಗ್ರಹ

- ಹಿಂದೂ ಸಮಾಜಕ್ಕೆ ಬಗೆದಿರುವ ದೊಡ್ಡ ಅಪಚಾರ, ಸರ್ಕಾರವೇ ಈ ಕೃತ್ಯ ನಡೆಸಿರುವುದು ಖಂಡನಾರ್ಹ
- ದೇವಾಲಯಗಳು ಭಕ್ತರಿಂದ ನಡೆಯಬೇಕೇ ಹೊರತು ಸರ್ಕಾರದ ಆಡಳಿತದಿಂದಲ್ಲ
- ದೇವಾಲಯದ ನಿರ್ವಹಣೆಯನ್ನು ಧಾರ್ಮಿಕ ಮುಖಂಡರು, ಭಕ್ತರಿಗೆ ವಹಿಸಿಕೊಡುವ ಸಮಯ ಬಂದಿದೆ

ಅಯೋಧ್ಯೆ/ಉಡುಪಿ: ತಿರುಮಲ ತಿರುಪತಿ ಪ್ರಸಾದ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ದೇವ ಸ್ಥಾನಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸಿ ಹಿಂದೂ ಸಮಾಜದ ವಶಕ್ಕೆ ನೀಡಬೇಕು ಎಂಬ ಕೂಗು ಮಠಮಾನ್ಯರಿಂದ ಬಲವಾಗಿ ಕೇಳಿಬಂದಿದೆ.

ಈ ಸಂಬಂಧ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿಗಳು, ಈಶಾ ಫೌಂಡೇಶನ್ ಸಂಸ್ಥಾಪಕ, ಆಧ್ಯಾತ್ಮಿಕ ಗುರು ಜಗ್ಗಿ ವಾಸುದೇವ್, ಆಧ್ಯಾತ್ಮಿಕ ಗುರು ಶ್ರೀ ರವಿಶಂಕರ ಗುರೂಜಿ ಅವರು ಪ್ರತ್ಯೇಕ ಹೇಳಿಕೆ ನೀಡಿದ್ದು, ಹಿಂದೂ ದೇವಾಲಯಗಳು ಹಾಗೂ ಧಾರ್ಮಿಕ ಶ್ರದ್ಧಾ ಕೇಂದ್ರಗಳನ್ನು ಸರ್ಕಾರ ನಡೆಸಬಾರದು. ಈ ಕೇಂದ್ರಗಳನ್ನು ಹಿಂದೂ ಸಮಾಜ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಸಂಬಂಧ ಅಯೋಧ್ಯೆಯಲ್ಲಿ ಮಾತನಾಡಿದ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿಯವರು, ಧಾರ್ಮಿಕ ಶ್ರದ್ಧಾ ಕೇಂದ್ರಗಳು, ಸರ್ಕಾರದ ಹಿಡಿತದಲ್ಲಿ ಇರಬಾರದು. ಶ್ರದ್ಧಾ ಕೇಂದ್ರಗಳು ಹಿಂದೂ ಸಮಾಜದ ಕೈಯಲ್ಲಿ ರಬೇಕು. ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೀಗೆ ಹೇಳಿದೆ. ತಡ ಮಾಡದೆ ಸರ್ಕಾರದ ಸ್ವಾಧೀನದಿಂದ ದೇಗುಲ ಮುಕ್ತಗೊಳಿಸಿ. ಹಿಂದೂಗಳ ಸಂಸ್ಥೆಗೆ ತಿರುಪತಿ ದೇವಾಲಯದ ಆಡಳಿತ ನೀಡಿ. ಇನ್ನು ಮುಂದೆ ಇಂತಹ ಘಟನೆ ಮರುಕಳಿಸಬಾರದು ಎಂದು ಆಗ್ರಹಿಸಿದರು.


ವಿಶ್ವಪ್ರಸನ್ನ ಸ್ವಾಮೀಜಿ


ಜಗ್ಗಿ ವಾಸುದೇವ


ರವಿಶಂಕರ ಗುರೂಜಿ

ಲಡ್ಡು ಪ್ರಸಾದಕ್ಕೆ ಹಸುವಿನ ತುಪ್ಪದ ಬದಲು ಕಲಬೆರಕೆ ತುಪ್ಪ ಹಾಕಿದ್ದಾರೆ. ಅದನ್ನು ತುಪ್ಪ ಎಂದು ಕರೆಯಲು ಸಾಧ್ಯವಿಲ್ಲ. ಪ್ರಾಣಿಯ ಕೊಬ್ಬಿನ ಮಿಶ್ರಣದಿಂದ ಪ್ರಸಾದ ತಯಾರಿಸಿದ್ದಾರೆ. ಈ ಬೆಳವಣಿಗೆಯಿಂದ ಖೇದವಾಗಿದೆ ಎಂದು ಅವರು ಹೇಳಿದರು. ಪ್ರಸಾದದಲ್ಲಿ ಮೀನಿನ ಎಣ್ಣೆ ಹಂದಿಯ ಕೊಬ್ಬು, ಹಸುವಿನ ಕೊಬ್ಬು ಬಳಸಿದ್ದಾರೆ. ಇದು ಹಿಂದೂ ಸಮಾಜಕ್ಕೆ ಬಗೆದಿರುವ ದೊಡ್ಡ ಅಪಚಾರ. ಇದು ದೇವರಿಗೆ ಬಗೆದಿರುವ ಅಪಚಾರ. ಸರ್ಕಾರವೇ ಈ ಕೃತ್ಯ ನಡೆಸಿರುವುದು ಖಂಡನಾರ್ಹ ಎಂದು ಕಿಡಿಕಾರಿದರು. ತಿರುಪತಿಯ ಶ್ರೀನಿವಾಸ ದೇವರು, ಗೋವಿನ ರಕ್ಷಣೆಗೆ ಅವತರಿಸಿದವ. ಕ್ಷೇತ್ರದಲ್ಲಿ ಹಸು ಹತ್ತಕ್ಕೆ

■9ನೇ ಪುಟಕ್ಕೆ

ಸಿಎಂ ಕಚೇರಿಯಲ್ಲಿ ಅನಗತ್ಯ ಸಿಬ್ಬಂದಿಗೆ ಗೇಟ್‌ಪಾಸ್ ಕೊಡಲು ಸರ್ಕಾರ ಚಿಂತನೆ

ಬೆಂಗಳೂರು: ಆಡಳಿತ ಯಂತ್ರದ ಮೇಲೆ ಹದ್ದಿನ ಕಣ್ಣಿಟ್ಟಿರುವ ಸರ್ಕಾರ ಹೊಸ ಸುಧಾರಣೆ ತರಲು ಯೋಜಿಸಿದೆ ಎಂದು ಉನ್ನತ ಮೂಲಗಳಿಂದ ತಿಳಿದುಬಂದಿದೆ.

ಅದಕ್ಕಾಗಿ ಸಿಎಂ, ಸಚಿವರ ಕಚೇರಿಯಲ್ಲಿ ಬೇಕಾಬಿಟ್ಟಿ ಸಿಬ್ಬಂದಿ ಇದ್ದರೆ ಅವರನ್ನು ಮನೆಗೆ ಕಳುಹಿಸಲು ನಿರ್ಧಾರ ಕೈಗೊಳ್ಳುವ ಪ್ಲ್ಯಾನ್ ಮಾಡಿದೆ. ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ಅನಗತ್ಯವಾಗಿರುವ ಸಿಬ್ಬಂದಿಯ ಬಗ್ಗೆ ವರದಿ ನೀಡಲು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ಮೂಲಗಳು ತಿಳಿಸಿವೆ. ಕಡತಗಳ ಸೋರಿಕೆಗೂ ಬ್ರೇಕ್ ಹಾಕುವ ಉದ್ದೇಶದಿಂದ ಮೊದಲು

■9ನೇ ಪುಟಕ್ಕೆ

ಅನುರಾ ಡಿಸಾನಾಯಕೆ ಶ್ರೀಲಂಕಾ ಅಧ್ಯಕ್ಷ

ಕೊಲಂಬೊ, ಸೆ.22– 2024 ರ ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಜನತಾ ವಿಮುಕ್ತಿ ಪೆರಮುನ (ಜೆವಿಪಿ)ಯ ಎಡಪಂಥೀಯ ನಾಯಕ ಅನುರ ಕುಮಾರ ಡಿಸಾನಾಯಕೆ ಗೆಲುವು ಸಾಧಿಸಿದ್ದಾರೆ. ಅವರು ಹಾಲಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಅವರನ್ನು ಸೋಲಿಸಿದರು ಮತ್ತು ದ್ವೀಪ ರಾಷ್ಟ್ರದ ಒಂಬತ್ತನೇ ಕಾರ್ಯಕಾರಿ ಅಧ್ಯಕ್ಷರಾಗಲಿದ್ದಾರೆ ಎಂದು ಶ್ರೀಲಂಕಾದ ಚುನಾವಣಾ ಆಯೋಗವು ಭಾನುವಾರ ಘೋಷಿಸಿತು. ಅಧಿಕೃತ ಅಂಕಿ ಅಂಶಗಳ ಪ್ರಕಾರ, 55 ವರ್ಷದ ಮಾರ್ಕ್ಸ್‌ವಾದಿ ನಾಯಕ 56.34 ಲಕ್ಷ ಮತಗಳನ್ನು ಪಡೆದುಕೊಂಡಿದ್ದಾರೆ. ಪ್ರತಿಪಕ್ಷದ ನಾಯಕ ಸಜಿತ್ ಪ್ರೇಮದಾಸ 43.63 ಲಕ್ಷ ಮತಗಳೊಂದಿಗೆ



■9ನೇ ಪುಟಕ್ಕೆ

ಒಳಪುಟಗಳಲ್ಲಿ...








ಮೈಸೂರು ಮಿತ್ರ

ಸೋಮವಾರ 23 ಸೆಪ್ಟೆಂಬರ್ 2024

ಮಕ್ಕಳ ದಸರಾ ಉದ್ಘಾಟನಾ ಸಮಾರಂಭದಲ್ಲಿ ವಿಶೇಷ ಬಾಲ ಪ್ರತಿಭೆಯಾಗಿ ಮಾಸ್ಟರ್ ಎಚ್.ಎಸ್.ಮಹೇಶ್‌ಕುಮಾರ್ ಆಯ್ಕೆ



ಮೈಸೂರು,ಸೆ.22(ಎಸ್‌ಪಿಎನ್)– ಈ ಬಾರಿ ಮಕ್ಕಳ ದಸರಾ –2024ರ ಉದ್ಘಾಟನಾ ಸಮಾರಂಭದಲ್ಲಿ ವಿಶೇಷ ಬಾಲ ಪ್ರತಿಭೆಯಾಗಿ ಪಾಲ್ಗೊಳ್ಳಲು ಪೂರ್ಣ ಚೇತನ ವಿದ್ಯಾಸಂಸ್ಥೆಯ ಏಳನೇ ತರಗತಿ ವಿದ್ಯಾರ್ಥಿ, ಮಾಸ್ಟರ್ ಎಚ್.ಎಸ್. ಮಹೇಶ್‌ಕುಮಾರ್ ಆಯ್ಕೆಯಾಗಿದ್ದಾನೆ.

ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಿವಿಧ ದಸರಾ ಉಪಸಮಿತಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದ್ದು, ಈ ಸಭೆಯ ನಿರ್ದೇಶನದಂತೆ ಅ.6ರಂದು ಬೆಳಗ್ಗೆ ಕಲಾಮಂದಿರದಲ್ಲಿ ನಡೆಯುವ ಮಕ್ಕಳ ದಸರಾದ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಕ್ಕಳ ದಸರಾ ಉಪ ಸಮಿತಿ ಸೆ.20ರಂದು ಅಧಿಕೃತ ಆಹ್ವಾನ ನೀಡಿದೆ.

ಈ ಸಮಾರಂಭದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಸೇರಿದಂತೆ ಇತರೆ ಗಣ್ಯರು ಉಪಸ್ಥಿತರಿರುತ್ತಾರೆ.

ಪ್ರಸ್ತುತ ಪೂರ್ಣಚೇತನ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಚ್.ಎಸ್. ಮಹೇಶ್‌ಕುಮಾರ್, ಜುಲೈ 27ರಂದು ಎಲೈಟ್ ವರ್ಲ್ಡ್ ರೆಕಾರ್ಡ್ ಅಕಾಡೆಮಿ, ಏಷ್ಯನ್ ಅಕಾಡೆಮಿ, ಇಂಡಿಯಾ ರೆಕಾರ್ಡ್ಸ್ ಸಂಸ್ಥೆ ನಡೆಸಿದಂತಹ ವಿಶ್ವ ದಾಖಲೆ ಸ್ಪರ್ಧೆಯಲ್ಲಿ ವೈಯಕ್ತಿಕ ವಿಭಾಗದಲ್ಲಿ ಭಾಗವಹಿಸಿ ಸ್ವಾಮಿ ವಿವೇಕಾನಂದರ ಹುಟ್ಟು ಬೆಳವಣಿಗೆ, ಜೀವನ ಮತ್ತು ಅವರ ಆಧ್ಯಾತ್ಮಿಕ ಸಾಧನೆ ಕುರಿತು ಸತತ 14 ಗಂಟೆ 2 ನಿಮಿಷಗಳ ಕಾಲ ಮಾತನಾಡಿ ವಿಶ್ವ ದಾಖಲೆ ಮಾಡಿದ್ದಾನೆ.

ಈ ವಿದ್ಯಾರ್ಥಿ ಮೂಲತಃ ಮೈಸೂರು ಜಿಲ್ಲೆಯ ಬನ್ನೂರು ಬಳಿ ಇರುವ ಹನುಮನಾಳು ಗ್ರಾಮದ ರೈತ ದಂಪತಿ ಸೋಮಶೇಖರ ಮತ್ತು ತಾಯಮ್ಮ ಪುತ್ರ. ಈತ 1ರಿಂದ 5ನೇ ತರಗತಿವರೆಗೆ ಹನುಮನಾಳಿನಲ್ಲಿ ವ್ಯಾಸಂಗ ಮಾಡಿದ್ದಾನೆ. ಬಾಲ್ಯದಲ್ಲಿ ಅಪಾರ ಜ್ಞಾನಾರ್ಜನೆ ತುಡಿತ ಹೊಂದಿದ್ದ. ಈತನಿಗೆ ಎಳೆ ವಯಸಲ್ಲೇ ಭಾಷಣ ಕಲೆ ಸಿದ್ಧಿಸಿತ್ತು. ಆತನ ಪ್ರತಿಭೆಗೆ ನೀರೆರೆದು ಪೋಷಿಸಿದ್ದು ಮೊದಲಿಗೆ ಆತನ ಪ್ರಾಥಮಿಕ ಶಾಲಾ ಶಿಕ್ಷಕಿ ತನುಜಾ. ಆತನ ಪ್ರತಿಭೆ ಗಮನಿಸಿದ, ಪೂರ್ಣಚೇತನ ಶಾಲೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕ ವೃಂದ ಬೆಂಬಲ ನೀಡಿದ್ದಾರೆ.

ಕಾಳಿದಾಸ ರಸ್ತೆಯ 10 ಎಕರೆ ಜಮೀನು ಪೌತಿ ಖಾತೆ ಕಾನೂನುಬದ್ಧ

ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲ ಓ ಶ್ಯಾಂ ಭಟ್ ಪ್ರತಿಪಾದನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲ ಓ ಶ್ಯಾಂ ಭಟ್ ಮಾತನಾಡಿದರು.

ಮೈಸೂರು, ಸೆ.22(ಜಿಎ)–ಮೈಸೂರಿನ ಜಯಲಕ್ಷ್ಮೀಪುರಂ ವ್ಯಾಪ್ತಿಯ ಕಾಳಿದಾಸ ರಸ್ತೆಯಲ್ಲಿರುವ ಸರ್ವೆ ನಂ.155ರ 10 ಎಕರೆ ಜಮೀನನ್ನು ಕಾನೂನಿನ ಪ್ರಕಾರವೇ ಪೌತಿ ಖಾತೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಮಾಡಿರುವ ಆರೋಪಗಳು ಆಧಾರರಹಿತವಾಗಿದೆ ಎಂದು ಹಿರಿಯ ವಕೀಲ ಓ ಶ್ಯಾಂ ಭಟ್ ಪ್ರತಿಪಾದಿಸಿದ್ದಾರೆ.

ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ ರಾಮಯ್ಯ ಹಾಗೂ ಅವರ ದಾಯಾದಿ ಸಹೋದರರಾದ ಪಿ.ತಿಮ್ಮಯ್ಯ ಎಂಬುವರಿಗೆ 3–2–1963ರಂದು ಮೈಸೂರು ತಾಲೂಕಿನ ಹಿನಕಲ್ ಗ್ರಾಮದ ಸರ್ವೆ ನಂ.155ರಲ್ಲಿ 10 ಎಕರೆ 3 ಗುಂಟೆ ಜಾಗವನ್ನು ತಹಶೀಲ್ದಾರರು ದರಖಾಸ್ತು ಮೂಲಕ ಮಂಜೂರಾತಿ ಪತ್ರ ನೀಡಿದ್ದಾರೆ.

ನಂತರ ರಾಮಯ್ಯ ಅವರ ಅರ್ಜಿಯ ಮೇರೆಗೆ 20–8–1963ರಂದು ಸರ್ವೆ ನಂ.55ರ ಉಳಿಕೆ ಜಮೀನನ್ನು ಮಂಜೂರು ಮಾಡಿದ್ದಾರೆ. ತದನಂತರ ಸರ್ವೆ ನಂ.155ರಲ್ಲಿ ತಿಮ್ಮಯ್ಯ ಅವರಿಗೆ ಮಂಜೂರು ಆದ ಜಮೀನಿಗೆ ಪ್ರತ್ಯೇಕ ಪೋಡಿಯಾಗಿ ಸರ್ವೆ ನಂ.155/ಎ ಎಂದು 10 ಎಕರೆ 3 ಗುಂಟೆ ಪ್ರದೇಶಕ್ಕೆ ತಹಶೀಲ್ದಾರ್ ಆದೇಶ ಮಾಡಿದ್ದಾರೆ. ತಿಮ್ಮಯ್ಯ ಅವರಿಗೆ ಮಂಜೂರು ಆಗಿರುವ 10 ಎಕರೆ 3 ಗುಂಟೆ ಪ್ರದೇಶವನ್ನು ಬಿಟ್ಟು ಉಳಿಕೆ ಸ್ವತ್ತು ರಾಮಯ್ಯ ಅವರಿಗೆ ಮಂಜೂರು ಆಗಿದೆ ಎಂದರು.

ತದನಂತರ ತಿಮ್ಮಯ್ಯ ಸರ್ವೆ ನಂ. 155/ಎ ನಂಬರ್‌ಗೆ ಪ್ರಾರಂಭದಲ್ಲಿ ರೆವಿನ್ಯೂ ಖಾತೆ ಮಾಡಿಸಿರುತ್ತಾರೆ. ರೆವಿನ್ಯೂ ದಾಖಲೆಗಳಾದ ಇಂಡೆಕ್ಸ್ ಆಫ್ ಲ್ಯಾಂಡ್, ರೆಕಾರ್ಡ್ಸ್ ಆಫ್ ರೈಟ್ ಮತ್ತು ಆರ್‌ಟಿಸಿಯಲ್ಲಿ ದಾಖಲಾಗಿದೆ. ಅದೇ ರೀತಿ ರಾಮಯ್ಯ ಹೆಸರಿಗೂ ಆರ್‌ಟಿಸಿ ಆಗಿದೆ. ಸ್ಕೆಚ್‌ಗಳಲ್ಲಿ ರಾಮಯ್ಯ ಹೆಸರಿಗೆ 10 ಎಕರೆ ಮತ್ತು ತಿಮ್ಮಯ್ಯ ಹೆಸರಿಗೆ 10 ಎಕರೆ 3 ಗುಂಟೆ ಎಂದು ನಮೂದಿಸಲಾಗಿದೆ. ರಾಮಯ್ಯ, ತಿಮ್ಮಯ್ಯ ಅವರಿಗೆ ಮಂಜೂರು ಆಗಿರುವ ಜಮೀನಗಳನ್ನು ಭೂ ಪರಿವರ್ತನೆ ಮಾಡಿಸಿಕೊಂಡಿದ್ದಾರೆ. ಹಿನಕಲ್ ಮಂಡಲ ಪಂಚಾಯಿತಿ ಇಬ್ಬರ ಹೆಸರಿಗೂ ಪ್ರತ್ಯೇಕ ಖಾತೆಗಳನ್ನು ಮಾಡಿದ್ದಾರೆ ಎಂದು ತಿಳಿಸಿದರು.

ಹಿನಕಲ್‌ನ ಸರ್ವೆ ನಂ.155 ಜಮೀನು ಮೈಸೂರು ನಗರಪಾಲಿಕೆ ವ್ಯಾಪ್ತಿಗೆ ಬಂದ ನಂತರ ತಿಮ್ಮಯ್ಯ ಪ್ರತ್ಯೇಕ ಖಾತೆಯನ್ನು ಮಾಡಿಸಿಕೊಂಡಿದ್ದಾರೆ. ಅದೇ ರೀತಿ ರಾಮಯ್ಯ ಅವರಿಗೂ 1988ರಲ್ಲಿ ಖಾತೆ ಆಗಿದೆ. ನಂತರ ಇಬ್ಬರು ನಗರಪಾಲಿಕೆಗೆ ಕಂದಾಯವನ್ನು ಪಾವತಿಸಲು ಆರಂಭಿಸಿದ್ದಾರೆ. ಆದರೆ, ತೀವ್ರ ಅನಾರೋಗ್ಯದಿಂದ ರಾಮಯ್ಯ ಅವರು 2000ನೇ ಇಸವಿಯಲ್ಲಿ ಮರಣ ಹೊಂದಿದ್ದು, ಕುಟುಂಬಸ್ಥರು ಕಂದಾಯವನ್ನು ಕಟ್ಟುತ್ತಾ ಬಂದಿದ್ದಾರೆ.

ಆದರೆ, ಸ್ವತ್ತಿನ ಪೌತಿ ಖಾತೆಯನ್ನು ಮಾಡಿಕೊಂಡಿರಲಿಲ್ಲ. ಈ ಸಂಬಂಧ ಕುಟುಂಬಸ್ಥರು ಪೌತಿ ಖಾತೆ ಮಾಡಿಕೊಡಬೇಕೆಂದು ಅರ್ಜಿ ಸಲ್ಲಿಸಿದ್ದಾರೆ. ನಂತರ ಪಾಲಿಕೆ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ಪೌತಿ ಖಾತೆ ಮಾಡಿಕೊಟ್ಟಿದ್ದಾರೆ. ಪರಿಶಿಷ್ಟ ವರ್ಗದ ಜನರಿಗೆ ಸರ್ಕಾರದಿಂದ ಮಂಜೂರಾಗಿರುವ ಸ್ವತ್ತಗಳನ್ನು ಪಡೆಯಲು ಹೊಂಚು ಹಾಕುತ್ತಿರುವ ವ್ಯಕ್ತಿಗಳು ರಾಮಯ್ಯ ಅವರ ಕುಟುಂಬಸ್ಥರ ಹೆಸರಿಗೆ ಆಗಿರುವ ಪೌತಿ ಖಾತೆಯ ಬಗ್ಗೆ ಅಪಸ್ವರ ಎತ್ತಿದ್ದಾರೆ. ಈ ವ್ಯಕ್ತಿಗಳ ಪ್ರಭಾವಕ್ಕೆ ಒಳಗಾದ ಪಾಲಿಕೆ ಅಧಿಕಾರಿಗಳು ಈ ವರ್ಗಾವಣೆಗೊಂಡ ಪೌತಿ ಖಾತೆಯನ್ನು ತಾತ್ಕಾಲಿಕವಾಗಿ ತಡೆ ಹಿಡಿದಿದ್ದಾರೆ ಈ ರೀತಿ ತಡೆಹಿಡಿದಿರುವಂತಹ ಆದೇಶವು ಕಾನೂನುಬಾಹಿರ ಎಂದರು.

ಕಾನೂನು ಪ್ರಕಾರವಾಗಿರುವ ಜಮೀನಿನ ಹಕ್ಕು ಬಾಧ್ಯತೆ ದಾಖಲೆಗಳನ್ನು ತಿರುಚುವುದು ಅಥವಾ ಸ್ವಾಧೀನತೆಗೆ ತೊಂದರೆ ಕೊಡುವುದು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯವಾಗಿರುತ್ತದೆ. ಇಂತಹ ವ್ಯಕ್ತಿಗಳ ವಿರುದ್ಧ ದೌರ್ಜನ್ಯ ಸಂಬಂಧದ ಕೇಸ್ ದಾಖಲಿಸಲು ಕುಟುಂಬಸ್ಥರು ನಿರ್ಧರಿಸಿದ್ದಾರೆ ಎಂದರು. ಗೋಷ್ಠಿಯಲ್ಲಿ ರಾಮಯ್ಯ ಅವರ ಕುಟುಂಬಸ್ಥರು, ರೈತ ಮುಖಂಡ ಸರಗೂರು ನಟರಾಜ್ ಉಪಸ್ಥಿತರಿದ್ದರು.

ನಕಲಿ ದಾಖಲೆ ಸೃಷ್ಟಿ

“ರಾಮಯ್ಯ ಮತ್ತು ತಿಮ್ಮಯ್ಯ ಅವರಿಗೆ ಮಂಜೂರು ಆದ 20 ಎಕರೆ ಜಮೀನನ್ನು ನಾವು ಶಿಕ್ಷಣಕ್ಕೆ ಬಳಸಿಕೊಳ್ಳುತ್ತೇವೆ ಎಂದು ಕುವೆಂಪು ವಿದ್ಯಾವರ್ಧಕ ಟ್ರಸ್ಟ್ 1964ರಲ್ಲಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದೆ. ಆದರೆ, ಈ ಜಮೀನು ಪರಿಶಿಷ್ಟ ಸಮುದಾಯದವರಿಗೆ ಸೇರಿರುವ ಜಮೀನು ಆದುದರಿಂದ ಸರ್ಕಾರದ ಮಟ್ಟದಲ್ಲಿ ಕ್ಯಾಬಿನೆಟ್ ಸಭೆ ನಡೆಸಿ, ಅನುಮೋದನೆ ನೀಡಬೇಕು. ಆದರೆ, ನಿರಂಜನ್ ಅಗರ್‌ವಾಲ್ ಎಂಬ ನಕಲಿ ತಹಶೀಲ್ದಾರ್ ಹೆಸರು ನಮೂದಿಸಿರುವ ಮಂಜೂರು ಪತ್ರ ತಂದಿದ್ದಾರೆ. ಈ ಸಂಬಂಧ ಈಗಾಗಲೇ ರಾಮಯ್ಯ ಕುಟುಂಬಸ್ಥರು ಕಾನೂನು ಹೋರಾಟ ಆರಂಭಿಸಿದ್ದಾರೆ. ನ್ಯಾಯಾಲಯದಲ್ಲಿ ಪಕ್ಕದ ಸರ್ವೆ ನಂಬರ್‌ನಲ್ಲಿ ನಿರ್ಮಿಸಿರುವ ಕಟ್ಟಡದ ದಾಖಲೆ ನೀಡಿದ್ದಾರೆ. ನಾವು ಅದನ್ನು ಹೈಕೋರ್ಟ್‌ನಲ್ಲಿ ಸಾಬೀತು ಪಡಿಸುತ್ತೇವೆ. –ಓ ಶ್ಯಾಂ ಭಟ್, ಖ್ಯಾತ ವಕೀಲ

ಪದವಿ ಪೂರ್ವ ಶಿಕ್ಷಣ ಇಲಾಖೆಯ ಹೊಸ ಮಾದರಿ ಪ್ರಶ್ನೆ ಪತ್ರಿಕೆ ಸುತ್ತೋಲೆ ಹಿಂಪಡೆಯಲು ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ ಒತ್ತಾಯ



ಮೈಸೂರು, ಸೆ.22–ಪದವಿ ಪೂರ್ವ ಶಿಕ್ಷಣ ಇಲಾಖೆ ಹೊರಡಿಸಿರುವ ಹೊಸ ಮಾದರಿಯ ಪ್ರಶ್ನೆ ಪತ್ರಿಕೆ ತಯಾರಿಸುವ ಸುತ್ತೋಲೆಯನ್ನು ಹಿಂಪಡೆಯಬೇಕೆಂದು ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರನ್ನು ಒತ್ತಾಯಿಸಿದ್ದಾರೆ.

ಪದವಿ ಪೂರ್ವ ಶಿಕ್ಷಣ ಇಲಾಖೆ ಮಾರ್ಗಸೂಚಿಯಂತೆ 2024–25ನೇ ಸಾಲಿನ ಶೈಕ್ಷಣಿಕ ವರ್ಷ 2024ರ ಜೂ.1ರಂದು ಆರಂಭವಾಗಿ 2025ರ ಮಾ.3ಕ್ಕೆ ಅಂತ್ಯಗೊಳ್ಳುತ್ತದೆ. ಅದರಂತೆ ಉಪನ್ಯಾಸಕರು ಶೇ.50ರಷ್ಟು ಪಠ್ಯ ಕ್ರಮ ಮುಗಿಸಿ, ಪ್ರಶ್ನೆ ಪತ್ರಿಕೆ ತಯಾರಿಸಿ, ವಿದ್ಯಾರ್ಥಿಗಳಿಗೆ ವಿವರಣೆ ನೀಡಿದ್ದಾರೆ.ಈ ಹಂತದಲ್ಲಿ ಪರೀಕ್ಷಾ ಮಂಡಳಿಯು ಪ್ರಶ್ನೆ ಪತ್ರಿಕೆ ಮಾದರಿಯನ್ನು ಬದಲಾವಣೆ ಮಾಡುವುದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುತ್ತದೆ ಎಂದಿರುವ ಮರಿತಿಬ್ಬೇಗೌಡರು, ಈ ಸಂಬಂಧ ಪರೀಕ್ಷಾ ಮಂಡಳಿಗೆ ಕೆಲವು ಉಪನ್ಯಾಸಕರು, ವಿದ್ಯಾರ್ಥಿಗಳು ಆಕ್ಷೇಪಣೆ ಸಲ್ಲಿಸಿದ್ದಾರೆ. ಆದ್ದರಿಂದ ಹಿಂದಿನ ವಾರ್ಷಿಕ ಮಾರ್ಗಸೂಚಿಯಂತೆ ಪರೀಕ್ಷೆ ನಡೆಸಬೇಕು. ಹೊಸ ಮಾರ್ಗಸೂಚಿ ಸುತ್ತೋಲೆ ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಿಂದ ಸ್ವಚ್ಛತಾ ಅಭಿಯಾನ



ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವತಿಯಿಂದ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಮೈಸೂರು,ಸೆ.22(ಆರ್‌ಕೆ)–ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವತಿಯಿಂದ ಸ್ವಚ್ಛ ಭಾರತ ಮಿಷನ್ 2024ರ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 14ರಿಂದ ಅಕ್ಟೋಬರ್ 2ರವರೆಗೆ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ.

‘ಸ್ವಭಾವ ಸ್ವಚ್ಛತೆ–ಸಂಸ್ಕಾರ ಸ್ವಚ್ಛತೆ’ ಘೋಷವಾಕ್ಯದಡಿ ಪಟ್ಟಣದ ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕಾಲ್ನಡಿಗೆ ಜಾಥಾ, ವಿವಿಧ ಸ್ಪರ್ಧೆಗಳ ಪಾಕ್ಷಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಇತ್ತೀಚೆಗೆ ಮಾನಂದವಾಡಿ ರಸ್ತೆಯ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಕಚೇರಿ ಮುಂದೆ ಸೇಂಟ್ ಮಥಾಯಸ್, ಚೆನ್ನಕೇಶವ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು, ಮೂಕಾಂಬಿಕಾ ಸಮೃದ್ಧಿ ಬಡಾವಣೆ ನಿವಾಸಿಗಳ ಸಂಘದ ಸದಸ್ಯರು, ಪಟ್ಟಣ ಪಂಚಾಯ್ತಿಯ ಪೌರಕಾರ್ಮಿಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

‘ಸ್ವಚ್ಛ ಭಾರತ–ಶ್ರೇಷ್ಠ ಭಾರತ’, ‘ಸ್ವಚ್ಛತೆಯೇ ಉಸಿರು’, ‘ಸ್ವಚ್ಛತೆ ಕಾಪಾಡಿ–ಪರಿಸರ ಉಳಿಸಿ’ ಎಂಬಿತ್ಯಾದಿ ಘೋಷಣಾ ಫಲಕಗಳನ್ನಿಡಿದು ಹೆಚ್.ಡಿ.ಕೋಟೆ ರಸ್ತೆ, ಶ್ರೀರಾಂಪುರ ರಿಂಗ್ ರಸ್ತೆ ಜಂಕ್ಷನ್‌ಗಳಲ್ಲಿ ಜಾಥಾ ಹಾಗೂ ಮಾನವ ಸರಪಳಿ ನಿರ್ಮಿಸಿ ಸ್ವಚ್ಛತೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಯಿತು.

ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಹೆಚ್.ಎಂ.ಸುರೇಶ್, ಹೆಲ್ತ್ ಇನ್‌ಸ್ಪೆಕ್ಟರ್ ಪರಮೇಶ್, ಶಾಲಾ ಮುಖ್ಯೋಪಾಧ್ಯಾಯರಾದ ಸಿಸ್ಟರ್ ಜೀಜಿ, ಮಹದೇವಪ್ಪ, ಶಂಕರಯ್ಯ, ಬಡಾವಣೆ ನಿವಾಸಿಗಳು, ಪಟ್ಟಣ ಪಂಚಾಯ್ತಿ ಸಿಬ್ಬಂದಿ ಜಾಥಾದಲ್ಲಿ ಪಾಲ್ಗೊಂಡಿದ್ದರು.

ರಾಜ್ಯ ಮಟ್ಟದ ಬ್ರಾಹ್ಮಣ ಮಹಾ ಸಮ್ಮೇಳನದ ಉಪಾಧ್ಯಕ್ಷರಾಗಿ ನಂ.ಶ್ರೀಕಂಠಕುಮಾರ್



ಮೈಸೂರು, ಸೆ. 22–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಜ.18 ಮತ್ತು 19ರಂದು ನಡೆಯಲಿರುವ ಮಹಾಸಭಾದ 50ನೇ ಸ್ಥಾಪಕ ವರ್ಷದ ಸುವರ್ಣ ಸಂಭ್ರಮ ಹಾಗೂ 11ನೇ ರಾಜ್ಯ ಮಟ್ಟದ ಮಹಾ ಸಮ್ಮೇಳನಕ್ಕೆ ಅಂಕಣಕಾರ, ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಅವರನ್ನು ಸಮ್ಮೇಳನದ ಉಪಾಧ್ಯಕ್ಷರಾಗಿ ನಿಯುಕ್ತಿ ಮಾಡಿ ಮಹಾಸಭಾದ ರಾಜ್ಯ ಅಧ್ಯಕ್ಷ ಅಶೋಕ ಹಾರನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ನೂತನ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಆಯ್ಕೆ

ಮೈಸೂರು,ಸೆ.22–ಮೈಸೂರಿನ ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್‌ನ ಆಡಳಿತ ಮಂಡಳಿ ಸಭೆ ಇತ್ತೀಚೆಗೆ ನಡೆದು, ಅಧ್ಯಕ್ಷ ಸ್ಥಾನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಹಿರಿಯ ಸಂಶೋಧಕರು ಹಾಗೂ ಸಂಸ್ಕೃತ ವಿದ್ವಾನ್ ಡಾ.ಎಚ್.ವಿ.ನಾಗರಾಜ ರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಹೆಚ್.ಡಿ. ಕೋಟೆ ತಾಲೂಕು ದೇವಲಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಕಿರಣ್ ಸಿಡ್ಲೇಹಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ.



ನಾಗರಾಜ್‌ರಾವ್



ಕಿರಣ್

ರಾಷ್ಟ್ರಮಟ್ಟದ ಅಡ್ವೆಂಚರ್ ಕ್ಯಾಂಪ್‌ಗೆ ಅಕ್ಷಯ್ ಆಯ್ಕೆ



ಮೈಸೂರು, ಸೆ.22–ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಎಸ್‌ಎಸ್‌ಎಸ್ ಸಿಂಹ ಸುಬ್ಬ ಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ಬಿಸಿಎ ಎರಡನೇ ವರ್ಷದ ವಿದ್ಯಾರ್ಥಿ ಅಕ್ಷಯ್ ಎಂ.ಎಂ. 2024ರ ಹಿಮಾಚಲ ಪ್ರದೇಶದಲ್ಲಿ ನಡೆಯುತ್ತಿರುವ ರಾಷ್ಟ್ರ ಮಟ್ಟದ ಅಡ್ವೆಂಚರ್ ಕ್ಯಾಂಪ್‌ಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರಾಗಿ ಆಯ್ಕೆ ಆಗಿದ್ದಾರೆ.

ಇವರನ್ನು ಕಾಲೇಜಿನ ಪ್ರಾಂಶುಪಾಲ ಡಾ.ರಾಕೇಶ್ ಟಿ.ಎಸ್., ಕಾರ್ಯಕ್ರಮ ಅಧಿಕಾರಿ ಪುನೀತ್‌ಕುಮಾರ್, ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವೃಂದದವರು ಅಭಿನಂದಿಸಿದ್ದಾರೆ.

ಅ.6, ಮೈಸೂರಲ್ಲಿ ರಾಜ್ಯ ಮಟ್ಟದ ಸಾಂಸ್ಕೃತಿಕ ಮೇಳ

ಮೈಸೂರು, ಸೆ. 22–ಕೊಪ್ಪಳ ಜಿಲ್ಲೆಯ ಕುಕನೂರಿನ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಸ್ಟ್ ಮಾತ್ ಮಾತಲ್ಲಿ ಮೈಸೂರು ಸ್ನೇಹಕೂಟ ಸಹಯೋಗದಲ್ಲಿ ಅ.6ರಂದು ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ಒಂದು ದಿನದ 11ನೇ ರಾಜ್ಯ ಮಟ್ಟದ ಸಾಂಸ್ಕೃತಿಕ ಮೇಳ ಆಯೋಜಿಸಲಾಗಿದೆ. ಸಾಂಸ್ಕೃತಿಕ ಮೇಳದಲ್ಲಿ ಸಾಹಿತ್ಯೋತ್ಸವ, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ, ಭಜನೆ, ಗೀಗೀ ಪದಗಳು, ತತ್ವಪದಗಳು, ಕೋಲಾಟ, ಭರತನಾಟ್ಯ, ಏಕಪಾತ್ರಾಭಿನಯ, ಮೂಕಾಭಿನಯ, ಬುಡಕಟ್ಟು ಕಲೆಗಳು, ಡೊಳ್ಳು, ಸೋಬಾನ ಪದಗಳು ಸಂಪ್ರದಾಯ ಗೀತೆ, ತಮಟೆ, ಮೃದಂಗ ವಾದನ ಹೀಗೆ ಸಾಮೂಹಿಕ ಕಲೆಗಳ ಪ್ರದರ್ಶನ ವೇದಿಕೆ ಇದಾಗಿದೆ. ಸಾಧಕರಿಗೆ ಕವಿರತ್ನ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ರಾಜ್ಯ ಪ್ರಶಸ್ತಿ ಪ್ರದಾನ ಆಯೋಜಿಸಲಾಗಿದೆ. ಕಾರ್ಯಕ್ರಮದ ಕವಿಗೋಷ್ಠಿ, ಸಾಂಸ್ಕೃತಿಕ ಕಲಾ ವಿಭಾಗದಲ್ಲಿ ಭಾಗವಹಿಸುವವರು ಮೊ. 7815985505 ಮೂಲಕ ಹೆಸರು ನೋಂದಾಯಿಸಬಹುದು.

ವರುಣ ಪ್ರಾಥಮಿಕ ಕೃಷಿ ಸಹಕಾರ ಸಂಘದ ಸಭೆ



ವರುಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ ಸಂಘದ ಅಧ್ಯಕ್ಷ ವರುಣ ಮಹೇಶ್ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವೇಳೆ 12 ಮಹಿಳಾ ಸಂಘಗಳಿಗೆ ತಲಾ ಮೂರು ಲಕ್ಷ ರೂ. ಸಾಲ ವಿತರಿಸಿದರು.

ಮೈಸೂರು,ಸೆ.22–ವರುಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ ಸಂಘದ ಅಧ್ಯಕ್ಷ ವರುಣ ಮಹೇಶ್ ಅಧ್ಯಕ್ಷತೆಯಲ್ಲಿ ಶನಿವಾರ ನಡೆಯಿತು.

ಈ ವೇಳೆ ಅವರು ಮಾತನಾಡಿ, ಮುಂದಿನ ಸಾಲಿನ ಗುರಿ 2 ಕೋಟಿಗೂ ಹೆಚ್ಚು ರೈತರಿಗೆ ಬೆಳೆಯ ಸಾಲವನ್ನು ನೀಡುವುದು. ಜೊತೆಗೆ ಕೊಳವೆ ಬಾವಿ, ಬೇಲಿ, ಟ್ರ್ಯಾಕ್ಟರ್, ಮಹಿಳಾ ಸ್ವಸಹಾಯ ಸಂಘಗಳ ಸಾಲ ಹೆಚ್ಚಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಎಂಡಿಸಿಸಿ ಮೇಲ್ವಿಚಾರಕ ವೇಣುಗೋಪಾಲ್, ಗಿರೀಶ್ ಹಾಗೂ ಸಂಘದ ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂತೋಷ್ ಅವರನ್ನು ಅಭಿನಂದಿಸಲಾಯಿತು. ಸಂಘದ ಉಪಾಧ್ಯಕ್ಷ ಕೆ.ಎಸ್.ಗುರುಸ್ವಾಮಿ, ನಿರ್ದೇಶಕರಾದ ಸುಚೇಂದ್ರ ಬಸವರಾಜು, ಪಾಪಣ್ಣ, ರವಿಕುಮಾರ್, ಮಹಾದೇವಮ್ಮ, ನಾಗರಾಜು ಲೋಕಮಣಿ, ಕಾರ್ಯದರ್ಶಿ ಪ್ರಕಾಶ್ ಹಾಗೂ ಸಹಾಯಕಿ ಜಯಂತಿ ಸೇರಿದಂತೆ ಸಂಘದ ಸದಸ್ಯರು, ರೈತರು, ಮಹಿಳಾ ಸಂಘದ ಸದಸ್ಯರು ಉಪಸ್ಥಿತರಿದ್ದರು. ಇದೇ ವೇಳೆ 12 ಮಹಿಳಾ ಸಂಘಗಳಿಗೆ ತಲಾ ಮೂರು ಲಕ್ಷ ರೂ. ಹಣವನ್ನು ಸಾಲವಾಗಿ ವಿತರಿಸಲಾಯಿತು.



ಹುಟ್ಟುಹಬ್ಬದ ಶುಭಾಶಯ... ಶನಿವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯಕಾರಿಣಿ ಸದಸ್ಯ ವಿನೋದ್‌ಕುಮಾರ್ ಅವರನ್ನು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕಡಕೊಳ ಶಿವಲಿಂಗ, ವರುಣ ಮಾದೇವು ಅಭಿನಂದಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.22–ಮೈಸೂರಿನ ಕುರುಹಿನಶೆಟ್ಟಿ ಶ್ರೀರಾಮ ಸೇವಾ ಸಂಘವು 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ಮೈಸೂರಿನಲ್ಲಿ ವಾಸಿಸುತ್ತಿರುವ ಕುರುಹಿನಶೆಟ್ಟಿ ಜನಾಂಗದ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕುರುಹಿನಶೆಟ್ಟಿ ಶ್ರೀ ರಾಮಮಂದಿರ, 2036, ಮಾಧ್ವಾಚಾರ್ ರಸ್ತೆ, ಕೆ.ಆರ್.ಮೊಹಲ್ಲಾ ಇಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅ.15ರೊಳಗೆ ಶ್ರೀ ರಾಮಮಂದಿರದ ಕಚೇರಿಗೆ ತಲುಪಿಸುವಂತೆ ಕೋರ ಲಾಗಿದೆ. ಮಾಹಿತಿಗೆ ಮೊ. 9448433921, 7022047394 ಸಂಪರ್ಕಿಸಬಹುದು.

ನಿಧನ


ಕೆ.ಎ.ಮಲ್ಲಿಕಾರ್ಜುನ



ಮೈಸೂರು, ಸೆ.22– ಮೈಸೂರಿನ ಸಿದ್ಧಾರ್ಥ ಬಡಾವಣೆ ನಿವಾಸಿ, ಆದಾಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಕೆ.ಎ. ಮಲ್ಲಿಕಾರ್ಜುನ(79) ಭಾನುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡು ತಾಲೂಕಿನ ಬಿದರುಗೂಡಿನಲ್ಲಿ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.09.2024 ಸೋಮವಾರ, ಮಳೆ ನಕ್ಷತ್ರ: ಉತ್ತರಾ, 13.09.2024ರಿಂದ 26.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ರೋಹಿಣಿ, ರಾಹುಕಾಲ : ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು, ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ನೆಗಡಿ, ಕೆಮ್ಮು ಮತ್ತು ಅಸ್ತಮಾ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಅಂಬಾರಿ ಬಾಯ್ಸ್:** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ–2024, ಬೃಹತ್ ಮೆರವಣಿಗೆಯೊಂದಿಗೆ ಗಣಪತಿ ವಿಸರ್ಜನೆ, ಸ್ಥಳ: ಪೀರ್‌ಖಾನ್ ಸ್ಟ್ರೀಟ್, ಕಾಮಾಟಗೇರಿ, ನಜರ್‌ಬಾದ್, ಬೆಳಗ್ಗೆ 10 ಗಂಟೆ ನಂತರ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಧರ್ಮಪ್ರಕಾಶ ಡಿ.ಬನುಮಯ್ಯ ವಿದ್ಯಾ ಸಂಸ್ಥೆ:** ಶತಮಾನೋತ್ಸವ ಭವನ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ಡಿ.ಬನುಮಯ್ಯ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಬಿ.ಬಿ.ಜಯದೇವ, ಮುಖ್ಯ ಅತಿಥಿಗಳು: ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಚಿದಾನಂದ ಎಂ.ಗೌಡ, ಮಂಗಳೂರು ಗಣೇಶ ಬೀಡಿ ವರ್ಕ್ಸ್ ನಿರ್ವಾಹಕ ಪಾಲುದಾರರಾದ ಡಾ.ಎಂ.ಜಗನ್ನಾಥ್ ಶೆಣ್ಣೈ, ಸ್ಥಳ: ಡಿ.ಬನುಮಯ್ಯ ಪಾಲಿಟೆಕ್ನಿಕ್ ಆವರಣ, ಮಹಾತ್ಮ ಗಾಂಧಿ ರಸ್ತೆ, ಉದಯಗಿರಿ, ಬೆಳಗ್ಗೆ 10 ಗಂಟೆಗೆ.

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅನುಭವ ಟುಟೋರಿಯಲ್ಸ್ (ಮೈಸೂರು):** ಸಾನ್ನಿಧ್ಯ: ವೆಂಗೀಪುರದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸನ್ಮಾನಿಸುವವರು: ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಸ್ಥಳ: ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆ, ಅಗ್ರಹಾರ, ಪೂರ್ಣಯ್ಯ ಛತ್ರದ ಪಕ್ಕ, ಬೆಳಗ್ಗೆ 10 ಗಂಟೆಗೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ (ಮೈಸೂರು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು), ಕರ್ನಾಟಕ ಜಾನಪದ ಅಕಾಡೆಮಿ (ಬೆಂಗಳೂರು):** ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರ–2024 ಸಮಾರೋಪ ಸಮಾರಂಭ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 4 ಗಂಟೆಗೆ

■ **ಜೆಎಸ್‌ಎಸ್ ಮಹಾ ವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ:** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮಿಗಳವರ 109ನೇ ಜಯಂತಿ ಮಹೋತ್ಸವ ಮತ್ತು ಪ್ರತಿಭಾ ಪುರಸ್ಕಾರ, ಜೆಎಸ್‌ಎಸ್ ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಪೂಜ್ಯರ ಪುತ್ಥಳಿ ಉತ್ಸವ, ಸಮ್ಮುಖ: ಶ್ರೀ ಕುಂದೂರು ಮಠದ ಶ್ರೀ ಶರಶ್ಚಂದ್ರ ಸ್ವಾಮಿಗಳು, ಅಧ್ಯಕ್ಷತೆ: ನಿವೃತ್ತ ಪೊಲೀಸ್ ಮಹಾನಿರ್ದೇಶಕರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಂಕರ ಮಹದೇವ ಬಿದರಿ, ಸ್ಥಳ: ಬಿಎಸ್‌ಎನ್‌ಎಲ್ ಕಚೇರಿ ಎದುರು, ಡಾ.ರಾಜ್‌ಕುಮಾರ್ ರಸ್ತೆ, ಜೆಎಸ್‌ಎಸ್ ಬಡಾವಣೆ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಮತ್ತೂರು ಕೃಷ್ಣಮೂರ್ತಿ, 6.15 ಗೀತಾರಾಧನ– 6.35 ಮತ್ತು ಸಂಜೆ 6.10: ಅಂಚೆ ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಾ.ಪಿ.ಎಸ್.ಮುರಳೀಧರ, ಗೀತಾ ವೈ. ಪುಟ್ಟಿ, ಹಂಸಿನಿ. ಎಸ್.ಕುಮಾರ್, ವ್ಯಾಖ್ಯಾನ: ಕೆ.ಎಲ್. ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ–ಧ್ವನಿ ಭಂಡಾರದಿಂದ ಭಾರತ ರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾಷಣದ ಧ್ವನಿಮುದ್ರಣ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಎನ್. ಬಾಲಸುಬ್ರಹ್ಮಣ್ಯಂ–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ. ಮತ್ತು ಕೀರ್ತನಾ. ವಿ, 12.05–ವನಿತಾ ವಿಹಾರ– ಧಾರವಾಡದ ಭಾರತಿನಗರ ಮಹಿಳಾ ವೃಂದದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ. 12.30–ದೇವರನಾಮ, ಯಶಸ್ವಿನಿ, 12.45–ನಮ್ಮ ಆರೋಗ್ಯ: “ಮಕ್ಕಳಲ್ಲಿ ಕಂಡು ಬರುವ ಕಣ್ಣಿನ ಅಪರೂಪದ ತೊಂದರೆಗಳು ಮತ್ತು ಚಿಕಿತ್ಸೆ” ಕುರಿತು ಹಿರಿಯ ನೇತ್ರತಜ್ಞರು ಹಾಗೂ ಮಕ್ಕಳ ನೇತ್ರ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ಕೆ.ವಿ.ರವಿಶಂಕರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿ.ಎಸ್.ಕೇಶವಚಂದ್ರ –ಕೊಳಲು ವಾದನ, 4.00–ಮಹಿಳಾರಂಗ: “ನಾನು ನನ್ನ ಕಂಪನಿ” ಟೈಲರಿಂಗ್ ಹಾಗೂ ಸೀರೆ ಉದ್ಯಮ ನಡೆಸುತ್ತಿರುವ ಸೌಭಾಗ್ಯ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಕಿಶೋರ್ ಎಂ.ಕಾಕಡೆ, 6.50–ಕೃಷಿರಂಗ: ತೆಂಗು ಹಾಗೂ ಅಡಿಕೆ ತೋಟದ ನಿರ್ವಹಣೆ ಹಾಗೂ ತೋಟಗಾರಿಕಾ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನು ಕುರಿತ ನೇರ ಫೋನ್–ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಮೈಸೂರು ಜಿಲ್ಲಾ ತೋಟಗಾರಿಕಾ ಉಪನಿರ್ದೇಶಕರಾದ ಮಂಜುನಾಥ್ ಅಂಗಡಿ ಮತ್ತು ನಂಜನಗೂಡು ತಾಲೂಕು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ವಿನಯ್. ಜಿ.ಎಂ., ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ಕನ್ನಡದಲ್ಲಿ ಭಾಷಣ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ವಿಜಯಲಕ್ಷ್ಮಿ ಸುಬ್ರಹ್ಮಣ್ಯಂ, ಹಾಡುಗಾರಿಕೆ–10.00 ನಾಟಕ, ಪಯಣ–ರಚನೆ –ಶಕುಂತಲಾ ಭಟ್ ಹಳೆಅಂಗಡಿ, ನಿರ್ಮಾಣ–ಡಾ.ಬಿ.ಎಂ.ಶರಬೇಂದ್ರಸ್ವಾಮಿ, 10.30–ಸವಿನೆನಪು


ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರು,
ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರು
ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರು,
ಸ್ನೇಹಜೀವಿಗಳು, ಪ್ರಗತಿಪರ ರೈತರಾದ
ಕೆ.ವಿ. ಶ್ರೀಧರ
ಅವರಿಗೆ
ಜನುಮ ದಿನದ
ಶುಭಾಶಯಗಳು
ಶುಭಕೋರುವವರು
ಕೆ.ವಿ.ಶಶಿಧರ್
ಶ್ರೀನಿವಾಸ ಸ್ಟೀಲ್ | ಅಂಬಾರಿ ಸ್ಟೀಲ್ | ಅಂಬಾರಿ ಫೈನಾನ್ಸ್ | ಅಂಬಾರಿ ಡೆವಲಪರ್ಸ್
8105367007

ನಕ್ಕರೆ ಅದೇ ಸ್ವರ್ಗ

ಪೊಲೀಸ್ : (ಇಬ್ಬರು ಯುವಕರನ್ನು ಹಿಡಿದು ತಂದು ಸಾರ್ ಇವರಿಬ್ರೂ ಜೈಲಿನ ಸುತ್ತ–ಮುತ್ತ ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ರು....

ಇನ್ಸ್‌ಪೆಕ್ಟರ್ : ಯಾಕ್ರೋ...

ಯುವಕರು : ಹಾಗೇನಿಲ್ಲಾ ಸಾರ್, ಇಲ್ಲಿ ಇಂಟರ್ನೆಟ್ ಸಿಗ್ನಲ್ ಚೆನ್ನಾಗಿ ಸಿಗುತ್ತೆ ಅಂತ ಬಂದ್ವಿ....!

ಮೈಸೂರು ಮಿತ್ರ

ಸೋಮವಾರ, 23 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

'ಕಳೆದುಕೊಳ್ಳದೇ ಏನನ್ನು ಪಡೆಯಲು ಸಾಧ್ಯವಿಲ್ಲ,
ಸ್ವರ್ಗವೂ ಕೂಡ ಸಾವನ್ನು ಬಯಸುತ್ತದೆ...'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉದ್ದು ಮದ್ದನ್ನು ಕೆಡಿಸಿತು

ನಿಮ್ಮ ಪತ್ರಗಳು

■ ಒಂದು ದೇಶ ಒಂದು ಚುನಾವಣೆ: ಒಮ್ಮತ ಮೂಡಲಿ

ಮಾನ್ಯರೆ,

ಕೇಂದ್ರ ಸರ್ಕಾರದ ಮಹತ್ವದ ನಿರ್ಣಯಗಳಲ್ಲಿ ಒಂದಾದ 'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾವನೆಗೆ ಮೋದಿ ನೇತೃತ್ವದ ಸಚಿವ ಸಂಪುಟ ಅನುಮೋದನೆ ನೀಡಿದೆ. ಲೋಕಸಭೆ ಮತ್ತು ಎಲ್ಲಾ ರಾಜ್ಯಗಳ ವಿಧಾನಸಭಾ ಚುನಾವಣೆಯನ್ನು ಒಂದೇ ಬಾರಿ ನಡೆಸುವ ಮಹತ್ವದ ಯೋಜನೆ ಇದಾಗಿದ್ದು, ಇದಕ್ಕೆ ಪ್ರಮುಖ ಪತ್ರಿಪಕ್ಷವಾದ ಕಾಂಗ್ರೆಸ್ ಸೇರಿದಂತೆ ಕೆಲ ವಿಪಕ್ಷಗಳು ನಿರೀಕ್ಷೆಯಂತೆ ವಿರೋಧ ವ್ಯಕ್ತಪಡಿಸಿವೆ.

ಲೋಕಸಭೆಗೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಭಾರತಕ್ಕೆ ಹೊಸತೇನಲ್ಲ. ಸ್ವತಂತ್ರ ಭಾರತದ ಮೊದಲ ಎರಡು ಸಾರ್ವತ್ರಿಕ ಚುನಾವಣೆಗಳ ಜತೆಯಲ್ಲೇ ರಾಜ್ಯ ವಿಧಾನಸಭೆಗಳಿಗೂ ಚುನಾವಣೆಗಳು ನಡೆದಿದ್ದವು. ಈಗ ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಪ್ರಸ್ತಾವ ಮತ್ತೆ ಮುನ್ನೆಲೆಗೆ ಬಂದಿದ್ದು ಅದಕ್ಕೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆಯೂ ಪ್ರಸ್ತುತ ಸಿಕ್ಕಿದೆ. ಏಕಕಾಲದ ಚುನಾವಣೆಗಳ ಒಂದು ಪ್ರಯೋಜನವೆಂದರೆ ಆರ್ಥಿಕ ಉಳಿತಾಯ. ಒಂದು ದೇಶ ಒಂದು ಚುನಾವಣೆಯ ಯೋಜನೆಯು ಪ್ರತಿ ವರ್ಷ ವಿವಿಧ ಬಾರಿ ಭದ್ರತಾ ಪಡೆಗಳು ಮತ್ತು ಚುನಾವಣಾ ಅಧಿಕಾರಿಗಳನ್ನು ನಿಯೋಜಿಸುವ ವೆಚ್ಚವನ್ನು ಕಡಿತಗೊಳಿಸುತ್ತದೆ. ಈ ರೀತಿಯ ಯೋಜನೆಯು ರಾಜಕೀಯ ಪಕ್ಷಗಳ ನೇತೃತ್ವದ ಪ್ರಚಾರಗಳಿಂದ ಉಂಟಾಗುವ ವೆಚ್ಚವನ್ನು ಕಡಿತಗೊಳಿಸುತ್ತದೆ. ಆದಾಗ್ಯೂ, ಸಾಂವಿಧಾನಿಕ ಬದಲಾವಣೆಗಳು, ವ್ಯವಸ್ಥಾಪನಾ ಸಮಸ್ಯೆಗಳು ಮತ್ತು ಪ್ರಾದೇಶಿಕ ಪ್ರಾತಿನಿಧ್ಯದ ಬಗ್ಗೆ ರಾಜಕೀಯ ವಿರೋಧಗಳು ಇದರಲ್ಲಿ ಸೇರಿವೆ. ಇದನ್ನು ಜಾರಿ ಮಾಡುವ ಮುನ್ನ ಚುನಾವಣಾ ಚಕ್ರಗಳನ್ನು ಮರು ಹೊಂದಾಣಿಕೆ ಮಾಡುವ ಹಾಗೂ ಇದಕ್ಕೆ ಕಾನೂನುಬದ್ಧವಾಗಿ ಸಮರ್ಥನೀಯ ಚೌಕಟ್ಟನ್ನು ನೀಡುವ ಅವಶ್ಯಕತೆಯಿದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಪ್ರಜಾಪ್ರಭುತ್ವವೆಂದ ಮೇಲೆ ಪರ ವಿರೋಧ ಬರುವುದು ಕೂಡ ಸಹಜ. ಇದು ಜಾರಿಯಾದರೆ ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಧಕ್ಕೆ ಉಂಟಾಗಬಹುದು ಎಂಬ ವಿರೋಧ ಪಕ್ಷಗಳ ಆತಂಕಕ್ಕೆ ಕೇಂದ್ರ ಸರ್ಕಾರದಿಂದ ಸೂಕ್ತ ಉತ್ತರ ದೊರೆಯಬೇಕಿದೆ. ಅಗತ್ಯ ಅನಿಸಿದರೆ ಈ ವಿಷಯವನ್ನು ಇನ್ನೊಮ್ಮೆ ಸಾರ್ವಜನಿಕ ಚರ್ಚೆಗೆ ಬಿಟ್ಟು ಸರ್ವಪಕ್ಷಗಳ ಸಭೆಯನ್ನು ಕರೆದು ಚರ್ಚಿಸಿ ಅವರ ವಿಶ್ವಾಸವನ್ನು ಪಡೆದು ಈ ಯೋಜನೆಯನ್ನು ಸರ್ವಾನುಮತದಿಂದ ಅನುಷ್ಠಾನಕ್ಕೆ ತರುವುದು ಅಗತ್ಯವಾಗಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ದಸರೆಯಿಂದ ಪಾರಂಪರಿಕ ಕಟ್ಟಡಗಳಿಗೆ ಧಕ್ಕೆಯಾಗದಿರಲಿ...

ಮಾನ್ಯರೆ,

ಈ ವರ್ಷದ ನಾಡಹಬ್ಬ ದಸರಾವನ್ನು ವಿಜೃಂಭಣೆಯಿಂದ ಆಚರಣೆ ಮಾಡಲು, ರಾಜ್ಯ ಸರ್ಕಾರ ತೀರ್ಮಾನಿಸಿದ್ದು, ಈಗಾಗಲೇ ಮೈಸೂರಿನ ಎಲ್ಲಾ ಪಾರಂಪರಿಕ ಕಟ್ಟಡಗಳ ಮೇಲೆ ವಿದ್ಯುತ್ ದೀಪಾಲಂಕಾರ ಮಾಡಲು ಸಿದ್ಧತೆ ನಡೆಸಿದೆ.

ಆದರೆ, ಈ ಪಾರಂಪರಿಕ ಕಟ್ಟಡಗಳ ಮೇಲೆ ವಿದ್ಯುತ್ ದೀಪಾಲಂಕಾರ ಮಾಡುವಾಗ, ನೂರಾರು ಕಬ್ಬಿಣದ ದೊಡ್ಡ ಮೊಳೆಗಳನ್ನು ಹೊಡೆಯುತ್ತಾರೆ, ದಸರಾ ದೀಪಾಲಂಕಾರ ಮುಗಿದ ನಂತರ ಈ ಮೊಳೆಗಳನ್ನು ಹೊಡೆದ ಜಾಗದಲ್ಲಿ ತೂತು ಬಿದ್ದಿರುತ್ತದೆ. ಈ ತೂತು ಬಿದ್ದ ಜಾಗವನ್ನು ಯಾವ ಕೆಲಸಗಾರರು ಮುಚ್ಚುವುದಿಲ್ಲ ಅಥವಾ ಈ ವಿದ್ಯುತ್ ದೀಪಾಲಂಕಾರ ಗುತ್ತಿಗೆ ತೆಗೆದುಕೊಂಡ ಗುತ್ತಿಗೆದಾರರು ಸಹ ಇದರ ಬಗ್ಗೆ ಗಮನಕೊಡುವುದಿಲ್ಲ. ಈ ಮೊಳೆ ಹೊಡೆದ ಜಾಗದಲ್ಲಿ ತೂತು ಬಿದ್ದು, ಮಳೆ ಬಂದಾಗ ಈ ಜಾಗದಲ್ಲಿ ನೀರು ತುಂಬಿ, ಮೈಸೂರಿನ ಎಲ್ಲಾ ಪಾರಂಪರಿಕ ಕಟ್ಟಡಗಳು ಸಹ ದುರ್ಬಲವಾಗುತ್ತಿವೆ. ಈ ಕಾರಣದಿಂದಲೇ ಈಗಾಗಲೇ ಮೈಸೂರಿನ ಕೆಲವು ಪಾರಂಪರಿಕ ಕಟ್ಟಡಗಳು ಶಿಥಿಲವಾಗುತ್ತಿವೆ. ಪಾರಂಪರಿಕ ಕಟ್ಟಡಗಳ ಮೇಲೆ ಮೊಳೆ ಹೊಡೆದ ಜಾಗವನ್ನು ಸಿಮೆಂಟ್‌ನಿಂದ ಮುಚ್ಚುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಜಿಲ್ಲಾಡಳಿತ ಆದೇಶ ಮಾಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ದೇವಸ್ಥಾನಗಳಲ್ಲಿನ ಲಡ್ಡುಗಳ ಕಥೆ–ವ್ಯಥೆ

ಮಾನ್ಯರೆ,

ತಿರುಪತಿ ಲಡ್ಡು ತಯಾರಿಕೆಯಲ್ಲಿ ಕಲಬೆರಕೆ ತುಪ್ಪ ಬಳಕೆಯಾದ ಹಿನ್ನೆಲೆಯಲ್ಲಿ



ರಾಜ್ಯದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳಲ್ಲಿ ನಂದಿನಿ ತುಪ್ಪವನ್ನು ಮಾತ್ರ ಬಳಸುವಂತೆ ಮುಜರಾಯಿ ಇಲಾಖೆ ಸುತ್ತೋಲೆ ಹೊರಡಿಸಿರುವುದು ಸ್ವಾಗತಾರ್ಹ.

ದಿನಾಂಕ 16.9.24ರಂದು ನಾವು ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದಾಗ ಪ್ರಸಾದವೆಂದು ಅಲ್ಲಿನ ಕೌಂಟರ್‌ನಲ್ಲಿ ಲಾಡು ಖರೀದಿಸಿ ತಂದಿದ್ದೆ. ಆದರೆ ಮನೆಗೆ ಬಂದು ಅದನ್ನು ನೋಡಿದಾಗ ಅದು ಲಾಡು ಬದಲಿಗೆ ಕೇವಲ ಕಡ್ಲೆ ಹಿಟ್ಟಿನ ಹುಂಡೆಯಂತಿತ್ತು. ಅದು ತಯಾರಿಸಿ ಎಷ್ಟುದಿನವಾಗಿತ್ತೋ? ತುಪ್ಪದ ಲವಲೇಶವೂ ಇಲ್ಲದ್ದರಿಂದ ಗುಂಡುಕಲ್ಲಿನಂತಿತ್ತು! ಅದನ್ನು ಚಾಕು ಬಳಸಿ ಕತ್ತರಿಸಬೇಕಾಯಿತು! ಎನ್ನುವುದು ಲಾಡುವಿನ ಗುಣಮಟ್ಟಕ್ಕೆ ಸಾಕ್ಷಿಯಂತಿತ್ತು.

25 ರೂ.ನ ಲಾಡು ಪೊಟ್ಟಣದ ಮೇಲೆ ಲಾಡುವಿನ ದರವಾಗಲಿ, ಲಾಡು ತಯಾರಿಸಿದ ದಿನವಾಗಲಿ ಇರಲಿಲ್ಲ. ಇನ್ನು ಅದನ್ನು ಎಷ್ಟು ದಿನದವರೆಗೆ ಸೇವಿಸಲು ಯೋಗ್ಯ ಎನ್ನುವ ಮಾಹಿತಿ ಕೂಡ ಇರಲಿಲ್ಲ. ಇವುಗಳೆಲ್ಲಾ ಆಹಾರ ಮಾನದಂಡಗಳಿಗನುಗುಣವಾಗಿ ಕಡ್ಡಾಯ. ಆದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಇವೆಲ್ಲ ಗೊತ್ತೇ ಇಲ್ಲ ವೆನಿಸುತ್ತದೆ. ಪಾಪ.!!

ಇನ್ನು ಲಡ್ಡು ಸರಬರಾಜು ಮಾಡಿ ಮಾರಾಟ ಮಾಡಲು ಮುಜರಾಯಿ ಇಲಾಖೆ /ದೇವಸ್ಥಾನ ಆಡಳಿತ ಮಂಡಳಿ ಟೆಂಡರ್ ಕರೆಯುತ್ತದೆ. ಆದರೆ ಗುಣಮಟ್ಟಕ್ಕೆ ಒತ್ತು ಕೊಡದೆ ತನಗೆ ಬರುವ ಹೆಚ್ಚಿನ ಆದಾಯ, ಟೆಂಡರ್‌ನಲ್ಲಿ ನಡೆಯುವ ಅವ್ಯವಹಾರಗಳು ದೇವಸ್ಥಾನದ ಪ್ರಸಾದಗಳ ಇಂತಹ ಕಳಪೆ ಗುಣಮಟ್ಟಕ್ಕೆ ಕಾರಣವಾಗಿವೆ. ಮೈಸೂರಿನ ಚಾಮುಂಡಿಬೆಟ್ಟ, ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನಗಳಲ್ಲೂ ಇದೇ ಕತೆ. ಪಾಪ ನಮ್ಮ ದೈವ ಭಕ್ತರು ಅದು ಹೇಗಿದ್ದರೂ ದೇವರ ಪ್ರಸಾದವೆಂದು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಪಡೆದಿರುವುದರಿಂದ ಯಾರೂ ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಅದು ಕೆಲವರಿಗೆ ವರ ಪ್ರಸಾದವಾಗಿದೆ. ಮುಜರಾಯಿ ಇಲಾಖೆ ಈ ಬಗ್ಗೆ ಸ್ಪಷ್ಟನೆ ಕೊಡಲಿ.

–ಬಿ.ಎಂ.ಭ್ರಮರಾಂಭ, ಕನಕದಾಸನಗರ, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



36. ಮುಷೀರ್-ಉಲ್-ಮುಲ್ಕ್ ಮೀರ್ ಹಂಸಾ ಹುಸೇನ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

1927ರಲ್ಲಿ ಗಾಂಧೀಜಿ ಬೆಂಗಳೂರಿಗೆ ಬಂದು ರೈಲ್ವೆ ನಿಲ್ದಾಣದ ಪ್ಲಾಟ್‌ಫಾರಂನಲ್ಲಿ ಇಳಿದಾಗ ಸ್ವಾಗತ ಸಮಿತಿಯ ಅಧ್ಯಕ್ಷರೇ ಅವರ ಕಣ್ಣಿಗೆ ಬೀಳಲಿಲ್ಲ. ಸ್ವಾಗತ ಸಮಿತಿಯ ಅಧ್ಯಕ್ಷರೆಲ್ಲಿ? ಕಾಣಿಸುತ್ತಿಲ್ಲವಲ್ಲ ಎಂದು ಕೇಳಿದರಂತೆ. ಯಾರೋ ಹೇಳಿದರು, ಅವರಿಗೆ ಹುಷಾರಿಲ್ಲ. ಹೃದಯ ಖಾಯಿಲೆಯಿಂದಾಗಿ ವೈದ್ಯರು ಮನೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಹೇಳಿದ್ದಾರೆ ಎಂದರಂತೆ. ಈ ವಿಷಯ ತಿಳಿದಾಗ ಗಾಂಧೀಜಿ ಅವರನ್ನು ನೋಡಿ ಬರಲು ಆ ವ್ಯಕ್ತಿಯ ಮನೆಗೆ ಹೋಗಿ ಆ ವ್ಯಕ್ತಿಯ ಹಾಸಿಗೆಯೇ ಬಳಿಯೇ ಕುಳಿತು ಅವರ ಯೋಗಕ್ಷೇಮ ವಿಚಾರಿಸಿ ಬಂದರಂತೆ. ಆ ವ್ಯಕ್ತಿಯ ಪತ್ನಿ ಗಾಂಧೀಜಿ ಅವರ ಹರಿಜನ ನಿಧಿಗೆ ತಾವು ಹಾಕಿಕೊಂಡಿದ್ದ ಒಂದು ಜೊತೆ ಚಿನ್ನದ ಬಳೆಯನ್ನೇ ನೀಡಿದರಂತೆ. ಮನೆಗೇ ಬಂದು ತಮ್ಮ ಆರೋಗ್ಯ ವಿಚಾರಿಸಿದ ಗಾಂಧೀಜಿ ವಿಶ್ವಾಸಕ್ಕೆ ಆ ವ್ಯಕ್ತಿ ಬಾಗಿಲವರೆಗೆ ಹೋಗಿ ಅವರನ್ನು ಬೀಳ್ಕೊಟ್ಟರಂತೆ.

ಗಾಂಧೀಜಿ ನೋಡಲು ಬಂದ ವ್ಯಕ್ತಿ ಮೀರ್ ಹಂಸಾ ಹುಸೇನ್ ಅವರು. ಅವರಿಬ್ಬರ ಭೇಟಿ ಅನಿರೀಕ್ಷಿತವಾದದ್ದೇನೂ ಆಗಿರಲಿಲ್ಲ. ಪರಸ್ಪರ ಪರಿಚಯವಿತ್ತು. ಹಿಂದೆ ಗಾಂಧೀಜಿ ರಾಜ್ಯಕ್ಕೆ ಭೇಟಿ ನೀಡಿದ್ದಾಗ ಅವರಿಬ್ಬರೂ ಭೇಟಿಯಾಗಿದ್ದರು. ಗಾಂಧೀಜಿ ಅವರು ರಾಜ್ಯಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಅಗತ್ಯ ಕಾನೂನು ಮತ್ತು ಶಿಸ್ತು ವ್ಯವಸ್ಥೆಗಳನ್ನು ಮಾಡುವ ಕಾರ್ಯವನ್ನು ಅವರಿಗೆ ವಹಿಸಲಾಗಿತ್ತು. ಹೀಗಾಗಿ ಗಾಂಧೀಜಿ ಮನೆಗೆ ಬಂದದ್ದು ಹಂಸಾ ಹುಸೇನ್ ಅವರ ಮನೆಯವರಿಗೆ ಆಶ್ಚರ್ಯವಾಗಿದ್ದರೂ ಅದೇನೂ ಆಕಸ್ಮಿಕವಾಗಿರಲಿಲ್ಲ.

ಮುಷೀರ್–ಉಲ್–ಮುಲ್ಕ್ ಮೀರ್ ಹಂಸಾ ಹುಸೇನ್ 1893ರಲ್ಲಿ ಮೈಸೂರಿನ ನ್ಯಾಯಾಂಗ ಇಲಾಖೆಗೆ ಸೇರಿ ಮೈಸೂರು ವಿಭಾಗದಲ್ಲಿ ನ್ಯಾಯಾಧೀಶರಾಗಿ ಕೆಲಸ ಮಾಡಿದ್ದರು. ನಿವೃತ್ತಿಗೆ ಮುನ್ನ ಹಂಗಾಮಿ ದಿವಾನರೂ ಆಗಿದ್ದರು. ಹೀಗಾಗಿ ಅವರೊಬ್ಬರು ಪ್ರತಿಷ್ಠಿತ ವ್ಯಕ್ತಿಯಾಗಿದ್ದರು. ಸಮಾಜದ ಏಳಿಗೆಗಾಗಿ, ಅದರಲ್ಲೂ ಸೌಲಭ್ಯಗಳಿಂದ ವಂಚಿತರಾದ ಮುಸ್ಲಿಂ ಸಮುದಾಯದವರ ಏಳಿಗೆಗಾಗಿ ಶ್ರಮಿಸಿ ಖ್ಯಾತಿ ಪಡೆದಿದ್ದರು.

1868ರ ಮಾರ್ಚ್‌ನಲ್ಲಿ ಜನಿಸಿದ್ದ ಇವರು, ಚಿಕ್ಕ ವಯಸ್ಸಿನಲ್ಲೇ ತಮ್ಮ ತಂದೆಯನ್ನು ಕಳೆದುಕೊಂಡು, ಬೀದಿದೀಪಗಳ ಬೆಳಕಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ 1889ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದರು. ಮದುವೆಯ ನಂತರ ಹಂಸಾ ಹುಸೇನ್ ಮದ್ರಾಸಿನಲ್ಲಿ ಶಿಕ್ಷಣ ಮುಂದುವರಿಸಿ ಬಿ.ಎಲ್. ಪದವಿ ಪಡೆದರು. ಇವರು ಪದವಿ ಪಡೆದ ನಂತರ ಮೈಸೂರು ಸರ್ಕಾರದಲ್ಲಿ ರಿಸಾಲ್ದಾರ್ ಆಗಿದ್ದ ಅವರ ಮಾವ ಹಂಸಾ ಹುಸೇನ್ ಅವರನ್ನು ದಿವಾನ್ ಶೇಷಾದ್ರಿ ಅಯ್ಯರ್ ಅವರಿಗೆ ಪರಿಚಯ ಮಾಡಿಸಿದರು. ಹಂಸಾ ಹುಸೇನ್ ಅವರ ಬುದ್ಧಿವಂತಿಕೆಯನ್ನು ಅರಿತು ಅವರಿಗೆ 1893ರಲ್ಲಿ ನ್ಯಾಯಾಂಗ ಇಲಾಖೆಯಲ್ಲಿ ಪ್ರೊಬೇಷನರ್ ಕೆಲಸ ನೀಡಲಾಯಿತು.

ಹಂಸಾ ಹುಸೇನ್ ಅವರ ಪೂರ್ವಿಕರು ಪರ್ಷಿಯಾದ ಖೋರಸಾನ್ ಪ್ರದೇಶದಿಂದ ಮಧ್ಯ ಭಾರತಕ್ಕೆ ವಲಸೆ ಬಂದಿದ್ದು, ಡೆಕ್ಕನ್ ಸುಲ್ತಾನ್ ಅವರ ಬಳಿ ಸೇರಿದ್ದರು. ಅಲ್ಲಿಂದ ಕ್ರಮೇಣ ಮೈಸೂರು ಪ್ರದೇಶಕ್ಕೆ ವಿಸ್ತರಿಸಿದ್ದರು. ಅವರ ಕುಟುಂಬದ ಒಂದು ಶಾಖೆ ಪಿರಿಯಾಪಟ್ಟಣದಲ್ಲಿ ನೆಲೆಸಿದ್ದರೆ, ಹಂಸಾ ಹುಸೇನ್ ಅವರ ಹಿರಿಯರು ಮೈಸೂರಿಗೆ ಬಂದು ನೆಲೆಸಿ ಮೈಸೂರಿನಲ್ಲಿಯೇ ತಳ ಊರಿದ್ದರು.

ಮೀರ್ ಹಂಸಾ ಹುಸೇನ್ ಅವರು ಮೈಸೂರಿನಲ್ಲಿ ಸರ್ಕಾರಿ ಹುದ್ದೆ ಹಿಡಿದ ಮೇಲೆ, ಹಲವಾರು ಅಧಿಕಾರ ಸ್ಥಾನದಲ್ಲಿ ಕೆಲಸ ಮಾಡಿದರು. ಅವರ ಸೇವೆಯ ಅವಧಿಯಲ್ಲಿ 1898ರಲ್ಲಿ ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟ್ ಆಗಿದ್ದರು. ನಂತರದ ವರ್ಷವೇ ಅವರ ಹುದ್ದೆ ಬದಲಾಗಿ ಹಿರಿಯ ಸಹಾಯಕ ಆಯುಕ್ತರಾದರು. ಎರಡು ವರ್ಷಗಳಲ್ಲಿಯೇ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಸ್ಥಾನ ಲಭಿಸಿತು. ಸುಮಾರು ಒಂಬತ್ತು ವರ್ಷಗಳ ಸೇವೆಯ ನಂತರ ಮತ್ತೆ ಪೊಲೀಸ್ ಇಲಾಖೆಯಲ್ಲಿ ಸೇವೆ ಮಾಡಬೇಕಾಯಿತು. ಮೇಲ್ಬಡ್ತಿ ಪಡೆದ ಇವರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆದರು. ಅವರ ಪ್ರಗತಿ ಅಲ್ಲಿಗೇ ನಿಲ್ಲದೆ 1923ರಲ್ಲಿ ಪ್ರತಿಷ್ಠಿತ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಮೊದಲ ಸದಸ್ಯರಾಗಿ ನೇಮಕವಾದರು. ಅವರಿಗೆ ಮಹಾರಾಜರ ಸರ್ಕಾರ 'ಮುಷೀರ್–ಉಲ್–ಮುಲ್ಕ್' ಪ್ರಶಸ್ತಿಯನ್ನು ನೀಡಿ ಅವರ ಸೇವೆಗೆ ಪುರಸ್ಕರಿಸಿತು. ಈ ಬಿರುದನ್ನು ಮಹಾರಾಜರು ತಮ್ಮ ದಸರಾ ದರ್ಬಾರಿನಲ್ಲಿ ಹಂಸಾ ಹುಸೇನ್ ಅವರಿಗೆ ನೀಡಿ ಗೌರವಿಸಿದರು. ದಿವಾನರಾಗಿದ್ದ ಅಲ್ಬಿನೋ ಬ್ಯಾನರ್ಜಿ ಅವರ ಬದಲಿಯಾಗಿ 1925ರ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿ ಸರ್ಕಾರೀ ಸೇವೆಯಿಂದ ನಿವೃತ್ತರಾದರು. ನಂತರ ಅವರು ಬೆಂಗಳೂರಿಗೆ ಹೋಗಿ ಅಲ್ಲಿನ ಬಸವನಗುಡಿಯಲ್ಲಿ ಸ್ವಂತ ಮನೆಯನ್ನು ಕಟ್ಟಿಕೊಂಡು ಕುಟುಂಬದೊಂದಿಗೆ ವಾಸವಾಗಿದ್ದರು. ಅಲ್ಲಿನ ಒಂದು ರಸ್ತೆಗೆ ಅವರ ಹೆಸರನ್ನಿಡಲಾಗಿತ್ತು.

ಇವರು ತಮ್ಮ ಸಮುದಾಯದ ಏಳಿಗೆಗಾಗಿ ಮಾಡಿದ ಒಂದು ಕೆಲಸವೆಂದರೆ ಮೈಸೂರಿನಲ್ಲಿ ಮುಸ್ಲಿಂ ಹೆಣ್ಣುಮಕ್ಕಳ ಅನಾಥಾಶ್ರಮವನ್ನು ಇತರ ಇಬ್ಬರೊಂದಿಗೆ ಸೇರಿ ಸ್ಥಾಪಿಸಿದ್ದು. 1907ರಲ್ಲಿ ಆಗ ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದ ಎಂ. ಕಾಂತರಾಜ ಅರಸ್, ಈ ಅನಾಥಾಶ್ರಮವನ್ನು ಉದ್ಘಾಟಿಸಿದರು. ಮುಷೀರ್–ಉಲ್–ಮುಲ್ಕ್ ಮೀರ್ ಹಂಸಾ ಹುಸೇನ್ ಅವರ ಹೆಸರಿನಲ್ಲಿ ಕಾನೂನು ಪದವಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ತೆಗೆದ ವಿದ್ಯಾರ್ಥಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಾರ್ಷಿಕ ಬಹುಮಾನ ಸ್ಥಾಪಿಸಲಾಗಿತ್ತು. ಗಾಂಧೀಜಿ ಇವರ ಮನೆಗೆ ಬಂದಾಗ ತಾವು ಹಾಕಿಕೊಂಡಿದ್ದ ಚಿನ್ನದ ಬಳೆಯನ್ನೇ ದಾನವಾಗಿತ್ತ ಇವರ ಪತ್ನಿಯ ಹೆಸರು ಸಜೀದ ಬೇಗಂ.

ಕೆ.ಆರ್.ಸತ್ಯನಾರಾಯಣರಿಗೆ ಜನ್ಮದಿನದ ಸಂಭ್ರಮ



ಹೊಯ್ಸಳ ಕರ್ನಾಟಕ ಸಂಘ ಮೈಸೂರು ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ ಅವರಿಗೆ ಗಣ್ಯರು ಜನ್ಮದಿನದ ಶುಭಾಶಯ ಕೋರಿದರು.

ಮೈಸೂರು,ಸೆ.22(ಪಿಎಂ)– ಹೊಯ್ಸಳ ಕರ್ನಾಟಕ ಸಂಘ ಮೈಸೂರು ಅಧ್ಯಕ್ಷರೂ ಆದ ಸಂಘ ಸಂಸ್ಥೆಗಳ ಒಕ್ಕೂಟದ ಜಂಟಿ ಕಾರ್ಯದರ್ಶಿ ಮತ್ತು ಸಪ್ತಪದಿ ಅಸೋಷಿಯೇಟ್ಸ್ ಪಾಲುದಾರ ಕೆ.ಆರ್. ಸತ್ಯನಾರಾಯಣ ಅವರಿಗೆ ಗಣ್ಯರು ಜನ್ಮದಿನದ ಶುಭಾಷಯ ಕೋರಿದರು.

ಮೈಸೂರಿನ ವಿಶ್ವೇಶ್ವರನಗರ ಕಲ್ಯಾಣ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜನ್ಮದಿನದ ಕಾರ್ಯಕ್ರಮದಲ್ಲಿ ಕಾರ್ಮಿಕರು ಹಾಗೂ ಸ್ನೇಹಿತರು ಸೇರಿದಂತೆ ಸಾವಿರ ಮಂದಿಗೆ ಭೋಜನ ಕೂಟ ಏರ್ಪಡಿಸಲಾಗಿತ್ತು. ಇದೇ ವೇಳೆ ಹೋಟೆಲ್ ಮಾಲೀಕರ ಸಂಘ ಮತ್ತು ಸಂಘ ಸಂಸ್ಥೆಗಳ ಒಕ್ಕೂಟದಿಂದ ಶುಭಾಶಯ ಕೋರಲಾಯಿತು. ಅಲ್ಲದೆ, ಸತ್ಯನಾರಾಯಣ ಅವರ ಸ್ನೇಹಿತರು, ಹಿತೈಷಿಗಳೂ ಶುಭಾಶಯ ತಿಳಿಸಿದರು.

ಸಮಾರಂಭದಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮುಖಂಡರಾದ ಅಚ್ಯುತ, ಶ್ರೀವತ್ಸ ಮಂಜುನಾಥ್, ಸುರೇಶ್ ಅಪೂರ್ವ, ಸುದೀಪಗೌಡ, ಕೆ.ಆರ್.ಉದಯಕುಮಾರ್, ಗೋಪಾಲಕೃಷ್ಣ, ನಗರ ಪಾಲಿಕೆ ಮಾಜಿ ಸದಸ್ಯರಾದ ಶೋಭಾ ಸುನಿಲ್, ಸುನಿಲ್, ಎಂ.ಪ್ರದೀಪಕುಮಾರ್, ರಾಜ್ಯ ಹೋಟೆಲ್ ಸಂಘದ ಉಪಾಧ್ಯಕ್ಷ ರವಿಶಾಸ್ತ್ರಿ ಮತ್ತಿತರರು ಪಾಲ್ಗೊಂಡಿದ್ದರು.

ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಉದಯ್ ಭಾನು ಚಿಬ್ ನೇಮಕ



ನವದೆಹಲಿ, ಸೆ.22– ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಉದಯ್ ಭಾನು ಚಿಬ್ ಅವರನ್ನು ನೇಮಕ ಮಾಡಲಾಗಿದೆ. ಉದಯ್ ಭಾನು ಚಿಬ್ ಅವರು ಪ್ರಸ್ತುತ ರಾಷ್ಟ್ರೀಯ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಯಾಗಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಪ್ರದೇಶ ಯುವ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಬಿ.ವಿ. ಶ್ರೀನಿವಾಸ್ ಇದುವರೆಗೂ ರಾಷ್ಟ್ರೀಯ ಯುವ ಕಾಂಗ್ರೆಸ್‌ನ ಅಧ್ಯಕ್ಷ ರಾಗಿದ್ದರು. ಅವರನ್ನು ಬದಲಾಯಿಸಲಾಗಿದ್ದು, ಕೂಡಲೇ ಜಾರಿಗೆ ಬರುವಂತೆ ಉದಯ್ ಭಾನು ಚಿಬ್ ಅವರನ್ನು ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು,ಸೆ.22–ಮೈಸೂರು ನಗರ ಕಾಂಗ್ರೆಸ್ ಬೀದಿಬದಿ ವ್ಯಾಪಾರಿಗಳ ವಿಭಾಗದ ಅಧ್ಯಕ್ಷರಾಗಿ ರಾಜೇಂದ್ರನಗರ, ಕುರಿಮಂಡಿಯ ಕಾಂಗ್ರೆಸ್ ಮುಖಂಡ ಎಂ.ರಸೂಲ್ ಅವರನ್ನು ನೇಮಕ ಮಾಡಲಾಗಿದೆ. ಶಾಸಕ ತನ್ವೀರ್‌ಸೇಠ್ ಶಿಫಾರಸ್ಸಿನ ಮೇರೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅನುಮೋದನೆಯಂತೆ ರಸೂಲ್ ಅವರನ್ನು ನೇಮಿಸಲಾಗಿದೆ.

ಮಳೆ ಸಿಂಚನದ ನಡುವೆ ಸಂಗೀತ ಪ್ರಿಯರ ಮನತಣಿಸಿದ ರಾಜ್, ರಾಜೇಂದ್ರ, ರಾಜೇಶ್ ಮ್ಯೂಸಿಕಲ್ ನೈಟ್



ರೋ.ವಿನ್.ಎನ್.ಪ್ರಸಾದ್ ಮತ್ತು ಹಂಸಿನಿ ಎಸ್.ಕುಮಾರ್ ಜುಗಲ್ ಬಂದಿ.



ಡಾ.ಎಂ.ಎಸ್.ನಟಶೇಖರ್ ಮತ್ತು ಅವರ ಪುತ್ರಿ ಅಪೂರ್ವ ನಟಶೇಖರ್ ಗಾಯನ.

ಮೈಸೂರು, ಸೆ.22(ಎಂಕೆ)– ಹಚ್ಚ ಹಸಿರಿನ ಸ್ವಚ್ಛಂದ ಮಾನಸ ಗಂಗೋತ್ರಿಯಲ್ಲಿ ಹೊಮ್ಮಿದ ಹಿಂದಿ ಚಿತ್ರಗೀತೆಗಳ ಸವಿಗಾನ ಲಹರಿ... ಧರೆಗೆ ತಂಪೆರೆದ ಮಳೆಯ ನಡುವೆ ಸಂಗೀತ ಪ್ರಿಯರ ಮನತಣಿಸಿದ 'ರಾಜ್, ರಾಜೇಂದ್ರ, ರಾಜೇಶ್ ಮ್ಯೂಸಿಕಲ್ ನೈಟ್...!

ಮೈಸೂರು ವಿವಿ ಮಾನಸ ಗಂಗೋತ್ರಿಯಲ್ಲಿರುವ ಸೆನೆಟ್ ಹಾಲ್‌ನಲ್ಲಿ ರೋಟರಿ ಐವರಿ ಸಿಟಿ ಮೈಸೂರು ಮತ್ತು ರೋಟರಿ ಚಾಮರಾಜನಗರ ಡಯಾಲಿಸಿಸ್ ಸೆಂಟರ್ ಸಹಕಾರದೊಂದಿಗೆ ಚಾಮರಾಜನಗರ ಜಿಲ್ಲೆಯ ಬಡವರು ಮತ್ತು ನಿರ್ಗತಿಕರ ಅನುಕೂಲಕ್ಕಾಗಿ ಮೈಸೂರಿನ ಖ್ಯಾತ ಗಾಯಕರಾದ ಡಾ.ಎಂ.ಎಸ್.ನಟಶೇಖರ್ ಮತ್ತು ರೋ.ವಿ.ಎನ್.ಪ್ರಸಾದ್(ವಿಎನ್‌ಪಿ) ನೇತೃತ್ವದಲ್ಲಿ ನಡೆದ ಹಿಂದಿ ಚಲನಚಿತ್ರ ದಿಗ್ಗಜರಾದ ರಾಜ್ ಕಪೂರ್, ರಾಜೇಂದ್ರ ಕುಮಾರ್ ಮತ್ತು ರಾಜೇಶ್ ಖನ್ನಾ ಅಭಿನಯದ ಚಲಚಿತ್ರಗಳ ಸುಪ್ರಸಿದ್ಧ ಹಾಡುಗಳ 'ರಾಜ್, ರಾಜೇಂದ್ರ ರಾಜೇಶ್ ಮ್ಯೂಸಿಕಲ್ ನೈಟ್(ಸಂಗೀತ ಸಂಜೆ) ತುಂಬಿದ ಸಭಾಂಗಣದಲ್ಲಿ ಅಪಾರ ಮೆಚ್ಚುಗೆ ಪಡೆಯಿತು.

ಆರಂಭದಲ್ಲಿ ನಿವೃತ್ತ ಹೈವೇ ಡಿಸೈನರ್ ಕೂಡ ಆಗಿರುವ ರೋ.ವಿ.ಎನ್.ಪ್ರಸಾದ್, 'ಕಟಿ ಪತಂಗ್' ಚಿತ್ರದ 'ಯೇ ಶಾಮ್ ಮಸ್ತಾನಿ' ಹಾಡನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ಸಂಗೀತ ಸಂಜೆಗೆ ಚಾಲನೆ ನೀಡಿದರು. ನಂತರ ಗಾಯಕಿ ಮಮತಾ ಭಾನುಪ್ರಕಾಶ್ ಮತ್ತು 'ಜೂನಿಯರ್ ಮೊಹಮ್ಮದ್ ರಫಿ' ಖ್ಯಾತಿಯ ಗಾಯಕ ಸೈಯದ್ ಶಬ್ಬೀರ್ 'ದೋ ರಾಸ್ತೆ' ಚಿತ್ರದ 'ಚುಪ್ ಗಯೇ ಸಾರೆ ನಜರೇ' ಹಾಡಿನ ಮೂಲಕ ರಂಜಿಸಿದರು. ಮೈಸೂರಿನ ಖ್ಯಾತ ಗಾಯಕರೂ ಆದ ಡಾ.ಎಂ.ಎಸ್.ನಟಶೇಖರ್ 'ಛಲಿಯಾ' ಚಿತ್ರದ 'ಡಮ್ ಡಮ್ ಡಿಗಾ ಡಿಗಾ' ಹಾಡನ್ನು ಹಾಡಿ ನೇರೆದಿದ್ದವರನ್ನು ಮಂತ್ರಮುಗ್ದರನ್ನಾಗಿಸಿದರು.

ಗಾಯಕರಾದ ಸೈಯದ್ ಶಬ್ಬೀರ್ ಮತ್ತು ಜಯಂತಿ ವಿ.ಭಟ್ 'ಸಚಾ ಝುಠಾ' ಚಿತ್ರದ 'ಯುನ್ಹಿ ತುಮ್ ಮುಜ್ಸೆ ಬಾತ್ ಕಾರ್ತಿ ಹೋ', ಡಾ.ಎಂ.ಎಸ್.ನಟಶೇಖರ್ ಮತ್ತು ಅವರ ಪುತ್ರಿ ಅಪೂರ್ವ ನಟಶೇಖರ್ 'ಅನಾರಿ' ಚಿತ್ರದ 'ದಿಲ್ ಕಿ ನಜರ್ ಸೆ', ಗಾಯಕರಾದ ಹಂಸಿನಿ ಎಸ್.ಕುಮಾರ್ ಮತ್ತು ರೋ.ವಿ.ಎನ್.ಪ್ರಸಾದ್ 'ಆಪ್ ಕಿ ಕಸಮ್' ಚಿತ್ರದ 'ಕರ್ವತೇನ್ ಬದಲ್ತೇ ರಹೇ ಸರಿ ರಾತ್ ಹಮ್' ಹಾಡಗಳು ಸೇರಿದಂತೆ 25 ಖ್ಯಾತ ಹಿಂದಿ ಚಲನಚಿತ್ರ ಗೀತೆಗಳನ್ನು ಮನೋಜ್ಞವಾಗಿ ಹಾಡುವ ಮೂಲಕ ಹಾಡಿನ ಮೂಲ ದಿಗ್ಗಜ ಗಾಯಕರನ್ನು ಸ್ಮರಿಸಿದರು.

ಕರತಾಡನ: 'ರಾಜ್, ರಾಜೇಂದ್ರ ರಾಜೇಶ್ ಮ್ಯೂಸಿಕಲ್ ನೈಟ್'ನಲ್ಲಿ ಶಿಳ್ಳೆ–ಚಪ್ಪಾಳೆಯ ಝೇಂಕಾರ ಮೊಳಗಿತು. ಹಾಡುಗಳನ್ನು ಕೇಳುತ್ತಲೇ ತಾವು ಗುನುಗುತ್ತಿದ್ದ ಸಂಗೀತ ರಸಿಕರು, ಕರತಾಡನದೊಂದಿಗೆ ಗಾಯಕರನ್ನು ಪ್ರೋತ್ಸಾಹಿಸಿದರು. ಒಂದೊಂದು ಹಾಡಿನ ಹಾಡಿನ ನಡುವೆ ಮಾತಿನ ಕಚಗುಳಿ ಇಟ್ಟ ನಿರೂಪಕ ಸೈಯದ್ ಅಫ್ತಾಬ್ ಅಹಮದ್ ಎಲ್ಲರನ್ನು ನಗೆಗಡಲಲ್ಲಿ ತೇಲಿಸಿದರು. ಸಂಗೀತ ನಿರ್ವಹಣೆ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಹೆಚ್.ಬಿ. ಜಯರಾಮ್ ಮತ್ತು ತಂಡ ಕೇಳುಗರ ಮನಸ್ಸಿಗೆ ಮುದ ನೀಡಿತು.

ಸಹಕಾರ: ಚಾಮರಾಜನರ ಜಿಲ್ಲೆಯ ಬಡವರು ಮತ್ತು ನಿರ್ಗತಿಕರ ಅನುಕೂಲಕ್ಕಾಗಿ ನಡೆದ ಸಂಗೀತ ಸಂಜೆಯಲ್ಲಿ ಹಲವರು ಆರ್ಥಿಕ ಸಹಕಾರ ನೀಡಿದರು. ಸಂಗೀತ ಕೇಳುವುದರ ಜೊತೆಗೆ ದೇಣಿಗೆ ನೀಡುವ ಮೂಲಕ ಸಂಕಷ್ಟದಲ್ಲಿದವರಿಗೆ ನೆರವಾದರು. ಸಂಜೆ ವೇಳೆ ಇತ್ತ ಸಂಗೀತ ಸಂಜೆ ಆರಂಭವಾಗುತ್ತಿದ್ದಂತೆ ಅಬ್ಬರಿಸಿದ ಮಳೆಯ ನಡುವೆ ಕಲಾ ರಸಿಕರಿಂದ ತುಂಬಿ ತುಳುಕಿದ್ದ ಸೆನೆಟ್ ಹಾಲ್‌ನಲ್ಲಿ ಹಿಂದಿ ಚಲನಚಿತ್ರ ಗೀತೆಗಳ ರಸದೌತಣ ಎಲ್ಲರ ಮನತಣಿಸಿತು.



ಹಿಂದಿ ಚಿತ್ರಗೀತೆಗಳ ಸಂಗೀತ ಸಂಜೆಯಲ್ಲಿ ನೆರೆದಿದ್ದ ಕಲಾಭಿಮಾನಿಗಳು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಓಪನ್ ಫೋರಂನಿಂದ 'ಬಸವಣ್ಣ' ಸಾಕ್ಷ್ಯಚಿತ್ರ ಬಿಡುಗಡೆ

ಚಿತ್ರೀಕರಣದ ವೇಳೆ ಬಸವಣ್ಣರ ಆಶಯದಂತೆ ಕಂಡು ಬಂದ ಸಮಾನತೆ





ಮೈಸೂರಿನ ವಿಜಯನಗರ 4ನೇ ಹಂತದ ಕಲ್ಪಕ್ಷೇತ್ರದಲ್ಲಿ ಮೈಸೂರು ಓಪನ್ ಫೋರಂ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ ಬಸವಣ್ಣ ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿ, ಮಾತನಾಡಿದರು. ಈ ವೇಳೆ ಚಿತ್ರದ ನಿರ್ದೇಶಕ ಡಾ.ಅನಿಲ್ ಕುಮಾರ್ ಮತ್ತು 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ 'ಬಸವಣ್ಣ' ಸಾಕ್ಷ್ಯಚಿತ್ರದ ತುಣುಕು ಕಾಣಬಹುದು.

ಮೈಸೂರು, ಸೆ.22(ಜಿಎ)– ಮೈಸೂರಿನ ವಿಜಯನಗರ ನಾಲ್ಕನೇ ಹಂತದಲ್ಲಿರುವ ಕಲ್ಪಕ್ಷೇತ್ರದಲ್ಲಿ ಮೈಸೂರು ಓಪನ್ ಫೋರಂ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಬಸವಣ್ಣ' ಸಾಕ್ಷ್ಯಚಿತ್ರವನ್ನು ಕುಂದೂರು ಮಠದ ಶರತ್ ಚಂದ್ರ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಈ ವೇಳೆ ಸಾಕ್ಷ್ಯಚಿತ್ರದ ನಿರ್ದೇಶಕ ಡಾ.ಅನಿಲ್‌ಕುಮಾರ್ ಮಾತನಾಡಿ, ನಮ್ಮ ಸಂಸ್ಥೆ ವತಿಯಿಂದ ಈಗಾಗಲೇ ಸಂಗೀತ ಪಿತಾಮಹ ಪುರಂದರದಾಸ, ಮೈಸೂರು ವಾಸುದೇವಾ ಆಚಾರ್ಯ ಸೇರಿದಂತೆ ಪ್ರಮುಖರ ಕುರಿತು ಸಾಕ್ಷ್ಯಚಿತ್ರ ನಿರ್ಮಿಸಿದ್ದು, ಈಗ ಬಸವಣ್ಣನ ಕುರಿತು ಚಿತ್ರ ನಿರ್ಮಿಸಲಾಗಿದೆ ಎಂದರು.

ಬಸವಣ್ಣನ ಬಗ್ಗೆ ಬಿಜಾಪುರ, ಬಸವನ ಬಾಗೇವಾಡಿ, ಬಸವಕಲ್ಯಾಣ ಹಾಗೂ ಬಾಲ್ಕಿಯ ಹಿರೇಮಠ್ ಸಂಸ್ಥಾನದವರು ನೀಡಿರುವ ಮಾಹಿತಿಯನ್ನು ಚಿತ್ರ ಒಳಗೊಂಡಿದೆ. ಚಿತ್ರೀಕರಣಕ್ಕೆ ನಾವು ಆ ಭಾಗಕ್ಕೆ ತೆರಳಿದ್ದಾಗ ಅಲ್ಲಿ ಪ್ರಸಾದ ಸ್ವೀಕರಿಸುವಂತೆ ಆಹ್ವಾನಿಸಿದರು, ಈ ವೇಳೆ ಅಲ್ಲಿ ಮುಸ್ಲಿಂ ಸಮುದಾಯದವರೂ ಬಂದು ಪ್ರಸಾದ ಸ್ವೀಕರಿಸಿದನ್ನು ಕಂಡ ನಮಗೆ ತಿಳಿದಿದ್ದು ಬಸವಣ್ಣನ ವರು ಹೇಳುತ್ತಿದ್ದ ಸಮಾನತೆ ಈಗಲೂ ಈ ಭಾಗದಲ್ಲಿ ಇದ್ದು, ಬಸವಣ್ಣನವರ ತತ್ವ ಸಿದ್ಧಾಂತವನ್ನು ಪಾಲಿಸುತ್ತಿದ್ದಾರೆ ಎಂಬುದು ತಿಳಿಯಿತು ಎಂದು ತಿಳಿಸಿದರು.

ನಂತರ ಶರತ್ ಚಂದ್ರ ಸ್ವಾಮೀಜಿ ಮಾತನಾಡಿ, ಚಿತ್ರವು ಮತ್ತೆ ಬಸವ ಯುಗಕ್ಕೆ ಕರೆದು ಹೋದಂತೆ ಅನಿಸುತ್ತೆ. ಅರ್ಥಪೂರ್ಣವಾಗಿ ಮೂಡಿ ಬಂದಿದೆ. ನೂರು ವರ್ಷಗಳ ಹಿಂದೆ ಲಿಂಗಾಯಿತರಿಗೆ ಬಸವಣ್ಣ ಗೊತ್ತಿರಲಿಲ್ಲ. ಬಸವಣ್ಣ ಮಾತ್ರವಲ್ಲದೇ ಅನೇಕ ಮಹಾಪುರುಷರ ಬಗ್ಗೆ ತಿಳಿದುಕೊಳ್ಳದೇ ಇರುವುದು ನಮ್ಮ ದುರಂತ ಎಂದು ಬೇಸರ ವ್ಯಕ್ತಪಡಿಸಿದರು.

ಬಸವಣ್ಣ ಅವರ ವೈಶಿಷ್ಟ್ಯ ಎಂದರೆ ಅವರು ಧಾರ್ಮಿಕ ನಾಯಕ, ರಾಜಕೀಯ, ಆರ್ಥಿಕ ಹಾಗೂ ಸಮಾಜಮುಖಿ ಪ್ರತಿಭೆಯಾಗಿದ್ದಾರೆ. ಆದರೆ, ಕೆಲವರು ಅವರನ್ನು ಕೇವಲ ಸಮಾಜ ಸೇವಕ ಎಂದು ಬಿಂಬಿಸುತ್ತಿದ್ದಾರೆ. ಅವರ ಬಹುತೇಕ ವಚನದಲ್ಲಿ ಆಧ್ಯಾತ್ಮಿಕ ಚಿಂತನೆ ಇದ್ದು, ಅವರ ಮನಸ್ಸನ್ನು ಬಿಚ್ಚಿಟ್ಟಿದ್ದಾರೆ. ಮಹಾತ್ಮ ಗಾಂಧೀಜಿಯ ಆತ್ಮಕಥೆಗಿಂತ ಇವುಗಳು ನೂರು ಪಟ್ಟು ಉತ್ತಮವಾಗಿದೆ. ಇಂದಿಗೂ ಬಸವಣ್ಣನ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೆಲವರಿಗೆ ಬಸವಣ್ಣನವರ ಹೆಸರು ಪ್ರಚಾರ, ಆದಾಯಕ್ಕೆ ದಾರಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂದಿನ ಆಧುನಿಕ ಯುಗದಲ್ಲಿ ವಿದ್ಯಾವಂತರು ಮಹಾತ್ಮರನ್ನು ಒಂದು ಜಾತಿಗೆ ಸೀಮಿತಗೊಳಿಸುತ್ತಿದ್ದಾರೆ. ಆದರೆ, ಬಸವಣ್ಣ ಒಂದು ಜಾತಿಗೆ ಸೀಮಿತವಲ್ಲ ಎಂದು ಅವರ ಬಗ್ಗೆ ಬ್ರಾಹ್ಮಣರಾದ ಎಂ.ಆರ್.ಶ್ರೀನಿವಾಸ ಮೂರ್ತಿ ಹೇಳಿದ್ದಾರೆ. 'ಶೂನ್ಯ ಸಂಪಾದನೆ' ಎಂಬ ಕೃತಿ ಇದೆ, ಓದಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ 'ಮೈಸೂರು ಮಿತ್ರ', ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ), ಬಸವಣ್ಣನವರ ವಚನಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಈ ಮಹಾನ್ ತತ್ವಜ್ಞಾನಿಗಳು ಮತ್ತು ಆಧ್ಯಾತ್ಮಿಕ ಗುರುಗಳನ್ನು ಅವರು ಬಯಸುವ ಜಾತಿಗಳಿಗೆ ಅವರನ್ನು ಬಂಧಿಸಿ ಮಿತಿಗೊಳಿಸಿದರು, ಅನುಯಾಯಿಗಳಿಂದಲೇ ಜಾತೀಯತೆ ಮಡುಗಟ್ಟಿದೆ ಎಂದು ವಿಷಾದಿಸಿದರು.

ಜಾತಿ ರಹಿತ ಸಮಾಜದತ್ತ ಇಂದಿನ ಜನತೆಗೆ ಮಾರ್ಗದರ್ಶನ ನೀಡುವ ನಾಯಕ ಇನ್ನೂ ಹುಟ್ಟಿಲ್ಲ. ಎಲ್ಲಾ ಧರ್ಮಗಳು ಮತ್ತು ಆಧ್ಯಾತ್ಮಿಕ ಗುರುಗಳು ಭಾರತದಲ್ಲಿ ಜನಿಸಿದ ವೇದ ಮತ್ತು ಉಪನಿಷತ್ತಿನಿಂದ ಪ್ರಭಾವಿತರಾಗಿದ್ದರು. ಬಸವಣ್ಣನವರ ವಚನಗಳೂ ವೇದ ಮತ್ತು ಉಪನಿಷತ್ತುಗಳಿಂದ ಕೂಡಿವೆ ಎಂದ ಅವರು, ಸಾಕ್ಷ್ಯಚಿತ್ರ ನಿರ್ದೇಶಕ ಅನಿಲ್‌ಕುಮಾರ್ ಅವರನ್ನು ಶ್ಲಾಘಿಸಿದರು.

ವಿಜಯನಗರ 1ನೇ ಹಂತದಲ್ಲಿ ಸ್ವಚ್ಛತಾ ಕಾರ್ಯ



ಮೈಸೂರು, ಸೆ. 22(ಆರ್‌ಕೆ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ನಿವಾಸಿಗಳೇ ಇಂದು ಶ್ರಮದಾನದ ಮೂಲಕ ಬಡಾವಣೆಯನ್ನು ಸ್ವಚ್ಛಗೊಳಿಸಿದರು.

ಮೈಸೂರು ಮಹಾನಗರ ಪಾಲಿಕೆ, ವಿಜಯನಗರ 1ನೇ ಹಂತದ ಕ್ಷೇಮಾಭಿವೃದ್ಧಿ ಸಂಘ, ಲಯನ್ಸ್ ಕ್ಲಬ್ ಆಫ್ ನಾರ್ಥ್, ಐಶ್ವರ್ಯ ಫೌಂಡೇಷನ್, ಪುಣ್ಯಕೋಟಿ ಟ್ರಸ್ಟ್ ಹಾಗೂ ಓವೈಹೆಚ್‌ಎಸ್ ಸಹಯೋಗದೊಂದಿಗೆ ಪಾಲಿಕೆ ಸಿಬ್ಬಂದಿ 29ನೇ ವಾರ್ಡಿನ್ ವಿಜಯನಗರ 1ನೇ ಹಂತದ ರಸ್ತೆ, ಪಾರ್ಕು, ಆಟದ ಮೈದಾನಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸಿದರು.

ಮಾಜಿ ನಗರಪಾಲಿಕೆ ಸದಸ್ಯ ಎ.ಯು. ಸುಬ್ಬಯ್ಯ, ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಯು.ಬಿ. ಉದಯಕುಮಾರ್, ಎಂ.ಕೆ. ನಂಜಯ್ಯ, ರಘು, ಮೂರ್ತಿ, ರವಿ, ಗೋಪಾಲಸ್ವಾಮಿ, ಅಲಮೇಲು, ಗೌರಿ, ಶೋಭಾ ಸೇರಿದಂತೆ ಹಲವರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.






ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಗೋಪಾಲಗೌಡ ಅಭಿನಂದನಾ ಗ್ರಂಥಕ್ಕೆ ಹೆಸರು ಸೂಚಿಸಲು ಮನವಿ

ಮೈಸೂರು, ಸೆ. 22(ಆರ್‌ಕೆ)– ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ ಅವರ ಅಭಿನಂದನಾ ಗ್ರಂಥಕ್ಕೆ ಸೂಕ್ತ ಹೆಸರು (ಟೈಟಲ್) ಸೂಚಿಸುವಂತೆ ವಿ. ಗೋಪಾಲ ಗೌಡ ಅಭಿನಂದನಾ ಸಮಿತಿ ಪ್ರಧಾನ ಸಂಚಾಲಕ ಎಂ.ಎನ್. ಪಿಳ್ಳಪ್ಪ ಕೋರಿಕೊಂಡಿದ್ದಾರೆ.



ವಿ.ಗೋಪಾಲಗೌಡ

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅಭಿನಂದನಾ ಸಮಿತಿಯು ಅವರ ಗ್ರಂಥ ಹೊರತರಲು ನಿರ್ಧರಿಸಿರುವುದರಿಂದ ಅವರ ಅಭಿಮಾನಿಗಳು, ಅನುಯಾಯಿಗಳು ಆಸಕ್ತರಿಂದ ಗ್ರಂಥಕ್ಕೆ ಸೂಕ್ತ ಹೆಸರನ್ನು ಅಕ್ಟೋಬರ್ 30ರೊಳಗಾಗಿ ನಂ. 520, 8ನೇ ಮುಖ್ಯರಸ್ತೆ, ಪೋಸ್ಟ್ ಆಫೀಸ್ ರೋಡ್, ಸದಾಶಿವನಗರ, ಬೆಂಗಳೂರು ವಿಳಾಸಕ್ಕೆ ತಲುಪಿಸುವಂತೆ ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9945431926, 9738408484 ಸಂಪರ್ಕಿಸಬಹುದು.

73 ವರ್ಷದ ಗೋಪಾಲಗೌಡರು, 45 ವರ್ಷಗಳ ಕಾಲ ನ್ಯಾಯಾಂಗ ಕ್ಷೇತ್ರದಲ್ಲಿ ಸುದೀರ್ಘ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಅವರ ಅಭಿಮಾನಿಗಳು, ಹಿರಿಯ ನ್ಯಾಯವಾದಿಗಳು, ಕಾರ್ಮಿಕ ನಾಯಕರು, ರೈತ ನಾಯಕರು, ನೀರಾವರಿ ತಜ್ಞರು, ಸ್ನೇಹಿತರು ಸೇರಿ ಅಭಿನಂದನಾ ಸಮಿತಿ ರಚಿಸಿ ಗ್ರಂಥ ರಚನಾ ಪ್ರಕ್ರಿಯೆ ಆರಂಭವಾಗಿದೆ ಎಂದು ಅವರು ತಿಳಿಸಿದರು.

ಖ್ಯಾತ ಬರಹಗಾರ ಡಾ. ನಂಜುಂಡ ಸ್ವಾಮಿ ಸಂಪಾದಕತ್ವದಲ್ಲಿ ಹೊರತರಲು ಉದ್ದೇಶಿಸಿರುವ ಗ್ರಂಥವು ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಮೂಡಿಬರುತ್ತಿದ್ದು, ಕರ್ನಾಟಕದಲ್ಲಿ ಕನ್ನಡ, ಒರಿಸ್ಸಾದಲ್ಲಿ ಹಿಂದಿ ಹಾಗೂ ದೆಹಲಿಯಲ್ಲಿ ಇಂಗ್ಲಿಷ್ ಭಾಷೆಯ ಗ್ರಂಥವನ್ನು ಬಿಡುಗಡೆಗೊಳಿಸಲಾಗುವುದು ಎಂದು ಪಿಳ್ಳಪ್ಪ ನುಡಿದರು. ಗ್ರಂಥಕ್ಕೆ ಸೂಕ್ತ ಹೆಸರನ್ನು ವಾಟ್ಸಾಪ್ ಮೂಲಕವೂ 9945431926ಗೆ ಕಳುಹಿಸಬಹುದು. ರಾಜ್ಯ ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಟಿ.ಯು. ನಾಗರಾಜು ಹಾಗೂ ರೇಷ್ಮೆ ಉದ್ದಿಮೆದಾರ ಎನ್. ವಾಸುದೇವ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕೆ.ಆರ್.ಕ್ಷೇತ್ರದ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ



ಚಾಮುಂಡಿಬೆಟ್ಟ ಪಾದದ ಬಳಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ಮೈಸೂರು, ಸೆ.22(ಎಸ್‌ಬಿಡಿ)– ಮೈಸೂರು ಚಾಮುಂಡಿಬೆಟ್ಟ ಪಾದದ ಬಳಿ ಭಾನುವಾರ ಬೆಳಗ್ಗೆ ಶಾಸಕ ಟಿ.ಎಸ್.ಶ್ರೀವತ್ಸ ಅವರು ಬಿಜೆಪಿ ಸದಸ್ಯತ್ವ ನೋಂದಣಿಗೆ ಚಾಲನೆ ನೀಡಿದರು. ಬಿಜೆಪಿ ಕಾರ್ಯಕರ್ತರು, ಕೇಂದ್ರ ಸರ್ಕಾರದ ಸಾಧನೆಗಳನ್ನು ಸಾರ್ವಜನಿಕರಿಗೆ ತಿಳಿಸಿ ಸದಸ್ಯತ್ವ ಪಡೆಯಲು ಪ್ರೇರೇಪಿಸಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಬಿಜೆಪಿಯನ್ನು ದೇಶದಲ್ಲಿ ಮತ್ತಷ್ಟು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಸದಸ್ಯತ್ವ ಅಭಿಯಾನದಲ್ಲಿ ಪ್ರತಿಯೊಬ್ಬ ಕಾರ್ಯಕರ್ತರೂ ನಿಷ್ಠೆಯಿಂದ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಪ್ರತೀ ಬೂತ್ ಮಟ್ಟದಲ್ಲೂ ಕನಿಷ್ಠ 300 ಸದಸ್ಯರಂತೆ ಕೃಷ್ಣರಾಜ ಕ್ಷೇತ್ರದಲ್ಲಿ 80 ಸಾವಿರಕ್ಕೂ ಸದಸ್ಯರನ್ನು ನೋಂದಣಿ ಮಾಡಬೇಕಿದೆ. ಅದರಂತೆ ಇಂದು ಮಹಾಸಂಪರ್ಕ ಅಭಿಯಾನ ಕ್ಷೇತ್ರಾದ್ಯಂತ ಎಲ್ಲಾ 265 ಬೂತ್‌ಗಳಲ್ಲೂ ಏಕಕಾಲಕ್ಕೆ ಕಾರ್ಯಕರ್ತರು ಸದಸ್ಯತ್ವ ನೋಂದಣಿ ಕಾರ್ಯದಲ್ಲಿ ಭಾಗವಹಿಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಉಪಾಧ್ಯಕ್ಷ ಜೋಗಿಮಂಜು, ಯುವಮೋರ್ಚಾ ಅಧ್ಯಕ್ಷ ಕೆ.ಎಂ.ನಿಶಾಂತ್, ಕೆ.ಆರ್.ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಜಯಶಂಕರ್, ರಮೇಶ್, ಡಿ.ಪಿ.ಸುರೇಶ್, ಅಶೋಕ್, ಪ್ರದೀಪ್, ಮಧುಸೂಧನ್, ಕಿಶೋರ್, ವರುಣ್, ಹರ್ಷ, ಚರಣ್, ಪ್ರತೀಕ್, ಶಿವಪ್ರೇರಣ್, ರವಿಕುಮಾರ್, ಶಾರದ, ಮಂಜುನಾಥ್ ಮತ್ತಿತರರ ಮುಖಂಡರು ಉಪಸ್ಥಿತರಿದ್ದರು.

ಎರಡು ದಿನ ನೀರು ಸರಬರಾಜು ವ್ಯತ್ಯಯ

ಮೈಸೂರು, ಸೆ. 22– ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಬಿನಿ ನೀರು ಸರಬರಾಜು ಯೋಜನೆಯ ಮೂಲ ಸ್ಥಾವರಕ್ಕೆ ಕೆಪಿಟಿಸಿಎಲ್ ಇಲಾಖೆ ವತಿಯಿಂದ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೈಸೂರು ನಗರಕ್ಕೆ ಪಂಪ್ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಸೆ. 24 ಮತ್ತು 25ರಂದು ವಾರ್ಡ್ ನಂ. 42ರಿಂದ 51 (ಕೆ.ಜಿ. ಕೊಪ್ಪಲು, ಜನತಾನಗರ, ಶಾರದಾದೇವಿನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ) ಹಾಗೂ 54ರಿಂದ 65 (ಗುಂಡೂರಾವ್‌ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ ಸಿಐಟಿಬಿ, ರಾಮಕೃಷ್ಣನಗರ, ಕುವೆಂಪುನಗರ ಎಂ ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಭಾಗಶಃ ಪ್ರದೇಶ, ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದನಗರ, ಶ್ರೀರಾಂಪುರ) ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯತ್ಯಯವಾಗಲಿದೆ.

ನಾಗಮಂಗಲ ಘಟನೆ: ಮೃತ ಕಿರಣ್ ಅಂತಿಮ ದರ್ಶನ ಪಡೆದ ನಿಖಿಲ್ ಕುಮಾರಸ್ವಾಮಿ

ಜಿಲ್ಲಾಡಳಿತ ವಿಫಲವಾಗಿದೆ, ಕಾಟಾಚಾರಕ್ಕೆ ಶಾಂತಿಸಭೆ ಮಾಡಿದ್ದಾರೆ

●ಜಿಲ್ಲಾ ಉಸ್ತುವಾರಿ ಮಂತ್ರಿಗಳೇ ಉತ್ತರ ಕೊಡಿ... ಅವರ ಕಷ್ಟ ಕಾಣುತ್ತಿಲ್ವಾ?

●ಪರಮೇಶ್ವರ್ ಸಾಹೇಬ್ರೆ ಹೆಣ್ಣು ಮಕ್ಕಳು ಕಣ್ಣಲ್ಲಿ ನೀರು ಹಾಕ್ತಿದ್ದಾರೆ ಎಂದು ನಿಖಿಲ್ ಕಿಡಿ..



ಮೃತ ಕಿರಣ್ ಅಂತಿಮ ದರ್ಶನ ಪಡೆದ ನಿಖಿಲ್ ಕುಮಾರಸ್ವಾಮಿಯಿಂದ ಪೋಷಕರಿಗೆ ಸಾಂತ್ವನ.

ಮಂಡ್ಯ: ನಾಗಮಂಗಲ ಗಣೇಶ ಮೂರ್ತಿ ವಿಸರ್ಜನೆ ವೇಳೆ ಉಂಟಾದ ಗಲಭೆ ಹಿನ್ನೆಲೆಯಲ್ಲಿ ಗ್ರಾಮ ತೊರೆದು ಬ್ರೈನ್‌ಸ್ಟ್ರೋಕ್‌ನಿಂದ ಸಾವನ್ನಪ್ಪಿದ ಬದ್ರಿ ಕೊಪ್ಪಲು ಗ್ರಾಮದ ನಿವಾಸಿ ಕಿರಣ್ ಅಂತಿಮ ದರ್ಶನ ಪಡೆದ ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರ ಸ್ವಾಮಿ ಅವರು, ಕಿರಣ್ ಪೋಷಕರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿ, ಆರ್ಥಿಕ ಸಹಾಯ ಮಾಡಿದರು.

ಮೃತ ಕಿರಣ್ ತಂದೆ ಕಣ್ಣೀರು ನೋಡಿ ನಿಖಿಲ್ ಕುಮಾರಸ್ವಾಮಿ ಭಾವುಕರಾದರು. ನಂತರ ಮಾಧ್ಯಮಗಳು ಜತೆ ಮಾತನಾಡಿದ ಅವರು, ನಾಗಮಂಗಲ ನಗರದಲ್ಲಿ ನಡೆದಿರುವಂತ ಘಟನೆ ನಿಜಕ್ಕೂ ಜೀರ್ಣಿಸಿಕೊಳ್ಳಲು ಆಗುವುದಿಲ್ಲ, 28 ವರ್ಷದ ಕಿರಣ್ ಪ್ರತಿ ವರ್ಷ ಗಣೇಶ ವಿಸರ್ಜನೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ, ಬಹಳ ಉತ್ಸುಕತೆಯಿಂದ ಮುಂದೆ ನಿಂತು ನಗುನಗುತ ಹೆಜ್ಜೆ ಹಾಕುತ್ತಿದ್ದ ಎಂದು ನಿಖಿಲ್ ಕುಮಾರಸ್ವಾಮಿ ಅವರು ಬೇಸರ ವ್ಯಕ್ತ ಪಡಿಸಿದರು.

ಬಿ.ಕಾಂ ಓದಿದ್ದ, ಮೃತ ಕಿರಣ್‌ಗೆ ನಾಗಮಂಗಲ ಮಾಜಿ ಶಾಸಕ ಸುರೇಶ್ ಗೌಡ ಅವರು ಅವನಿಗೆ ಕೆಲಸ ಕೊಡಿಸಬೇಕೆಂಬ ವಿಷಯವನ್ನು ಕುಮಾರಣ್ಣನ ಬಳಿ ಪ್ರಸ್ತಾವನೆ ಮಾಡಿದ್ದರು. ಯಾವುದಾದ್ರು ಕಂಪನಿಯಲ್ಲಿ ಕೆಲಸ ಕೊಡಿಸುವುದರ ಬಗ್ಗೆ ಚರ್ಚೆ ನಡೆದಿತ್ತು ಎಂದು ತಿಳಿಸಿದರು.

ನಾಗಮಂಗಲ ಗಲಭೆಯಿಂದ ಕಿರಣ್‌ಗೆ ಮಾನಸಿಕವಾಗಿ ನೋವಾಗಿತ್ತು. ಕಿರಣ್ ತಂದೆಯವರು ಮತ್ತು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದಾರೆ. ಇದನ್ನು ನೋಡಿ ಕಿರಣ್ ಆರೋಗ್ಯದಲ್ಲಿ ಏರುಪೇರಾಗಿ ಸಾವನ್ನಪ್ಪಿದ್ದಾನೆ. ಇದು ನಿಜಕ್ಕೂ ದುಃಖಕರ ಸಂಗತಿ ಎಂದರು.

ಕಿರಣ್ ಪತ್ನಿಗೆ ಕೆಲಸ ಕೊಡಿಸುವ ಭರವಸೆ: ಕಿರಣ್‌ಗೆ ಸಣ್ಣ ಮಗುವಿದೆ, ಆತನ ಹೆಂಡತಿ ಸಹ ಕಂಗಾಲಾಗಿದ್ದಾರೆ. ಅವರ ಜೊತೆ ಕುಮಾರಣ್ಣ ದೂರವಾಣಿ ಮೂಲಕ ಮಾತನಾಡಿ ಕಿರಣ್ ಅವರಿಗೆ ಕೊಡಿಸಬೇಕಾದ ಕೆಲಸವನ್ನು ಅವರ ಹೆಂಡತಿಗೆ ಕೊಡಿಸುವ ಭರವಸೆ ನೀಡಿ ಅವರ ಕುಟುಂಬಕ್ಕೆ ಧೈರ್ಯ ತುಂಬಿದ್ದಾರೆ.

ಕಾಟಾಚಾರಕ್ಕೆ ಶಾಂತಿ ಸಭೆ: ಜಿಲ್ಲಾಡಳಿತ ಶಾಂತಿ ಸಭೆಯನ್ನು ಕಾಟಾಚಾರಕ್ಕೆ ಮಾಡಿದ್ದಾರೆ ಶಾಂತಿಸಭೆ ಬಳಿಕ ಶಾಂತಿ ನೆಲಸಬೇಕು. ಕೆಲವರನ್ನು ಜೈಲಿಗೆ ಹಾಕಿದ್ದಾರೆ. ಕಾನೂನು ಇದೆ, ಕೋರ್ಟ್ ಇದೆ. ಅವರಿಗೆ ನಾವು ನ್ಯಾಯ ಒದಗಿಸುತ್ತೇವೆ ಎಂದು ಹೇಳಿದರು.

ರಾಜಕೀಯ ಮಾಡಬಾರದು. ಆದರೆ ಈ ಗ್ರಾಮದ ಮಕ್ಕಳು ಏನು ತಪ್ಪು ಮಾಡಿದ್ದಾರೆ.? ಹೆಣ್ಣುಮಕ್ಕಳು ಕಣ್ಣಲ್ಲಿ ನೀರು ಹಾಕ್ತಾ ಇದ್ದಾರೆ. ಅಕ್ಕಪಕ್ಕದ ಊರಿನವರು ಬಂದು ಅವರಿಗೆ ಸಹಾಯ ಮಾಡ್ತಿದ್ದಾರೆ. ಈ ಘಟನೆ ನಡೆದಾಗ ಕುಮಾರಣ್ಣ ಬಂದು ಎಲ್ಲರಿಗೂ ಆರ್ಥಿಕ ಸಹಾಯ ಮಾಡಿದ್ದಾರೆ.

ಈ ವಿಚಾರದಲ್ಲಿ ನಾವು ರಾಜಕೀಯ ಮಾಡೋಕೆ ಬಂದಿಲ್ಲ. ಈ ಸಂದರ್ಭದಲ್ಲಿ ಮಾನವೀಯತೆ ಮೆರೆಯಬೇಕಾಗಿದೆ. ಅದಕ್ಕಾಗಿಯೇ ಕುಮಾರಣ್ಣ ಬಂದು ಆರ್ಥಿಕ ಸಹಾಯ ಮಾಡಿ ನಿಮ್ಮ ಜೊತೆ ನಾವಿದ್ದೇವೆ ಎಂದು ಆತ್ಮವಿಶ್ವಾಸ ತುಂಬಿದರು.

ಸರ್ಕಾರದಿಂದ ಪರಿಹಾರ ಕೊಡಿಸಿಲ್ಲ: ಮಂಡ್ಯ ಜಿಲ್ಲಾ ಉಸ್ತುವಾರಿ ಚಲುವರಾಯಸ್ವಾಮಿ ಇದುವರೆಗೆ ಸರ್ಕಾರದಿಂದ ಪರಿಹಾರ ಕೊಡಿಸಿಲ್ಲ, ಈ ಜನರ ನೆರವಿಗೆ ಯಾಕೆ ಅವರು ಬಂದಿಲ್ಲ? ಈ ಊರಿನ ಜನತೆ ಏನು ತಪ್ಪು ಮಾಡಿದ್ದಾರೆ.? ಎಂದು ಪ್ರಶ್ನಿಸಿದರು.

ಪೊಲೀಸ್ ಇಲಾಖೆ ವಿಫಲವಾಗಿದೆ. ಕಳೆದ ವರ್ಷ ನಾಗಮಂಗಲದಲ್ಲಿ ಸಣ್ಣ ಗಲಾಟೆಯಾಗಿತ್ತು. ಹೀಗಿದ್ದಾಗ ಪೊಲೀಸರು ಮುನ್ನೆಚ್ಚರಿಕೆ ಕ್ರಮ ವಹಿಸಬೇಕಿತ್ತು. ಈಗ ಸರಿಯಾದ ಭದ್ರತೆ ಮಾಡಿಕೊಳ್ಳುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ನೆಲಕಚ್ಚಿದೆ ಎಂದು ಆಕ್ರೋಶ ವ್ಯಕಪಡಿಸಿದರು. ಸರ್ಕಾರ ಕಣ್ಮುಚ್ಚಿ ಕುಳಿತಿದೆ. ನಾಗಮಂಗಲ ಗಲಭೆ ಪ್ರಕರಣವನ್ನು ಗೃಹ ಸಚಿವರು ಸಣ್ಣ ಗಲಾಟೆ ಅಂತಾರೆ. ಇದರಿಂದ ಎಷ್ಟೋ ಜನರ ಬದುಕು ಬೀದಿಗೆ ಬಂದಿದೆ.

ಚಲುವರಾಯಸ್ವಾಮಿ ಅವರಿಗೆ ಇದು ಕಾಣುತ್ತಿಲ್ವಾ? ದಾವಣಗೆರೆಯಲ್ಲೂ ಇದೇ ರೀತಿ ಘಟನೆ ಜರುಗಿದೆ.ರಾಜ್ಯದಲ್ಲಿ ಈ ರೀತಿ ಘಟನೆ ನಡೆಯುತ್ತಿದ್ದರೆ ಈ ಸರ್ಕಾರ ಏನು ಮಾಡುತ್ತಿದೆ.? ಕಣ್ಮುಚ್ಚಿ ಕುಳಿತಿದೆಯಾ ಎಂದು ತರಾಟೆಗೆ ತೆಗೆದುಕೊಂಡರು. ಇನ್ನು ಸಾಕಷ್ಟು ಯುವಕರು ಪೊಲೀಸ್ ಕಸ್ಟಡಿಯಲ್ಲಿದ್ದಾರೆ. ಇವತ್ತು ಕೋರ್ಟ್ ಇದೆ, ಕಾನೂನು ಇದೆ. ಅವರ ಪರವಾಗಿ ನಿಂತು ಊರಿನ ಜನತೆ ಕಷ್ಟ ಸುಖದಲ್ಲಿ ಭಾಗಿ ಆಗುತ್ತೇವೆ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕರಾದ ಸುರೇಶ್‌ಗೌಡ, ಕೆ.ಆರ್.ಪೇಟೆ ಶಾಸಕರಾದ ಹೆಚ್.ಟಿ ಮಂಜುನಾಥ್, ಮಂಡ್ಯ ಜಿಲ್ಲಾಧ್ಯಕ್ಷರಾದ ರಮೇಶ್ ಗೌಡ ಸೇರಿದಂತೆ ಮೊದಲಾದವರು ಭಾಗವಹಿಸಿದ್ದರು.

ಗುರುಗಳ ಮುಂದೆ ನಾವೆಲ್ಲರೂ ಚಿಕ್ಕವರು

ಪಾಂಡವಪುರ, ಸೆ.22–ವಿದ್ಯಾರ್ಥಿಗಳಿಗೆ ವಿದ್ಯಾ, ಬುದ್ಧಿ ಕಲಿಸಿ ಸಮಾಜದಲ್ಲಿ ಉತ್ತಮವಾದ ಭವಿಷ್ಯ ರೂಪಿಸುವಲ್ಲಿ ಗುರುಗಳ ಪಾತ್ರಮಹತ್ವವಾದದ್ದು ಎಂದು ಹಾವೇರಿಯ ಹಾನಗಲ್‌ನ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಜನಾರ್ಧನ್.ಎಸ್.ಕೆ. ಹೇಳಿದರು.

ತಾಲೂಕಿನ ಸುಂಕಾತೊಣ್ಣೂರು ಸರಕಾರಿ ಪ್ರೌಢಶಾಲೆಯಲ್ಲಿ ನಡೆದ 1996–97ರಿಂದ 1998–99ನೇ ಸಾಲಿನ ವಿದ್ಯಾರ್ಥಿಗಳಿಂದ ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹಸಂಗಮ ಕಾರ‍್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಬಗ್ಗೆ ಆಸಕ್ತಿವಹಿಸಬೇಕು, ಪ್ರಸ್ತುತ ಶಿಕ್ಷಣದಲ್ಲಿ ಗುಣಮಟ್ಟ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಜೀವನದಲ್ಲಿ ಶಿಸ್ತು, ಸಂಯಮ, ಶ್ರದ್ಧೆ ಹಾಗೂ ಗುರುಹಿರಿಯರು, ತಂದೆ–ತಾಯಿಗಳನ್ನು ಗೌರವಿಸುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕಿ ಸರಿತಾ ಮಾತನಾಡಿದರು. ಶಿಕ್ಷಕರಾದ ಕೆಬಿ.ಲಲಿತಕುಮಾರ್, ಆರ್.ನಾಗರಾಜು, ಎಸ್.ಎನ್.ವರದರಾಜನ್, ಸಿ.ಟಿ.ಪುಟ್ಟಲಕ್ಷ್ಮಮ್ಮ, ವಿ.ಜ್ಯೋತಿ, ಚಲುವರಾಜು, ಪುರುಷೋತ್ತಮ್ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರಾದ ಮರೀಗೌಡರನ್ನು ಅಭಿನಂದಿಸಲಾಯಿತು.



ಗುರುವಂದನಾ ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಯೋಗ ಕೇಂದ್ರದಲ್ಲಿ ಬುದ್ಧ ಧಮ್ಮ ದೀಪ ಕಾರ್ಯಕ್ರಮ



ಕೆ.ಆರ್.ಪೇಟೆ,ಸೆ.22– ಬುದ್ಧನ ಪಂಚಶೀಲ, ಅಷ್ಟಾಂಗ ಮಾರ್ಗದಿಂದ ಜಗತ್ತು ಶಾಂತಿಯಿಂದ ಇರಬಲ್ಲದು. ಬೌದ್ಧ ಧರ್ಮ ವಿಶ್ವದ ಪ್ರಾಚೀನ ಧರ್ಮಗಳಲ್ಲಿ ಒಂದು, ಶಾಂತಿ ಸಹಬಾಳ್ವೆ ಬಹುಜನ ಹಿತಾಯ ಬಹುಜನ ಸುಖಾಯ ಎಂಬ ತತ್ವದಲ್ಲಿ ನಂಬಿಕೆಯಿಟ್ಟ ಧರ್ಮವಾಗಿದೆ ಎಂದು ಕೊಳ್ಳೇಗಾಲದ ಸುಗತಪಾಲ್ ಭಂತೇಜಿ ಹೇಳಿದರು.

ಕೆ.ಆರ್.ಪೇಟೆ ಟೌನ್ ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಕೇಂದ್ರದಲ್ಲಿ ಯೋಗ ಗುರು ಅಲ್ಲಮಪ್ರಭು ಅವರ ನೇತೃತ್ವದಲ್ಲಿ ನಡೆದ ಬುದ್ಧ ಧಮ್ಮ ದೀಪ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು. ಬಾಬಾ ಸಾಹೇಬರು ಈ ಬೌದ್ಧ ಧರ್ಮವು ಅತ್ಯಂತ ವೈಜ್ಞಾನಿಕ ಧರ್ಮ ಎಂದೇ ಮತಾಂತರಗೊಂಡರು, ಮತ್ತು ಇದು ಭಾರತೀಯ ಜನ್ಯ ಧರ್ಮ ಎಂಬುದೇ ವಿಶೇಷ ಎಂದು ತಿಳಿಸಿದರು.

ಬಿಕ್ಕುಣಿ ಗೌತಮಿ ಮಾತಾಜಿ ಮಾತನಾಡಿ, ಮೌಢ್ಯ ಆಚರಣೆ ಕೈಬಿಟ್ಟು ನಾವು ಭಾರತೀಯರು ಎಂದು ಒಗ್ಗಟ್ಟಿನಿಂದ ಬದುಕಬೇಕು ಎಂದರು.

ಶಿಕ್ಷಣ ಸಂಯೋಜಕ ವೀರಭದ್ರಯ್ಯ, ತಾಲೂಕು ಶಿಕ್ಷಣ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ನಿರ್ದೇಶಕ ಹಳಿಯೂರು ಯೋಗೇಶ್, ಶಿಕ್ಷಕರಾದ ಭೈರಯ್ಯ, ಕುಮಾರ್, ಎ.ಜೆ.ಧನೇಂದ್ರ ಗೌಡ, ಪ್ರಕಾಶ್, ಮಂಜುನಾಥ್, ನಾಗಯ್ಯ, ರಾಜುನಾಯ್ಕ, ಆಲಂಬಾಡಿ ರವಿ, ನಟೇಶ್ ಗಾಂಧಿನಗರ ಕಾಂತರಾಜು ಮತ್ತಿತರರು ಪಾಲ್ಗೊಂಡಿದ್ದರು.

ಸ್ಫೂರ್ತಿ ಪತ್ತಿನ ಸಹಕಾರ ಸಂಘ ಲಾಭದಾಯಕವಾಗಿದೆ

ಭಾರತೀನಗರ.ಸೆ.22– ಸ್ಫೂರ್ತಿಪತ್ತಿನ ಸಹಕಾರ ಸಂಘ ತಾಲೂಕಿನಲ್ಲಿ ಉತ್ತಮ ಸಹಕಾರ ಸಂಘವೆಂದು ಗುರುತಿಸಿಕೊಂಡು ಲಾಭದಾಯಕವಾಗಿ ನಡೆಯುತ್ತಿದೆ ಎಂದು ಸ್ಫೂರ್ತಿಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎಲ್.ಶಿವರಾಮು ತಿಳಿಸಿದರು.

ಸ್ಫೂರ್ತಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಸಹಕಾರ ಸಂಘ 1999–2000ದಲ್ಲಿ ಪ್ರಾರಂಭವಾಗಿ ಮಳವಳ್ಳಿ ಮತ್ತು ಮದ್ದೂರು ತಾಲೂಕಿನಿಂದ ನಾಲ್ಕುವರೆ ಸಾವಿರ ಷೇರುದಾರರನ್ನು ಹೊಂದಿದೆ. ಈಗ 9 ಕೋಟಿಗೂ ಹೆಚ್ಚು ವ್ಯವಹಾರ ನಡೆಸಿ ಈ ಸಂಘ ಪ್ರತೀ ವರ್ಷವು ಲಾಭದಾಯಕವಾಗಿ ನಡೆಯುತ್ತಿದೆ. ಜೊತೆಗೆ ಮಂಡ್ಯ ಜಿಲ್ಲಾ ಸಹಕಾರಿ ಕ್ಷೇತ್ರದಲ್ಲಿ ಅತ್ಯುತ್ತಮ ಸಂಘವೆಂದು ಪ್ರಶಂಸೆಗೆ ಪಾತ್ರವಾಗಿದೆ. ಸಂಘವನ್ನು ಜಿಲ್ಲಾದ್ಯಂತ ವಿಸ್ತರಿಸಲು ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳಲಾಗುವುದು. ಈಗಾಗಲೇ ಸಂಘ 24 ವರ್ಷ ಯಶಸ್ಸು ಕಂಡಿದೆ ಎಂದರು. ಪ್ರತೀ ವರ್ಷದಂತೆ ಪ್ರಸಕ್ತ ವರ್ಷ 11.20 ಲಕ್ಷ ಲಾಭ ಬಂದಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸಂಘವನ್ನು ಅಭಿವೃದ್ಧಿ ಪಡಿಸಲು ಸಂಘದ ಸದಸ್ಯರು ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಸಂಘದ ಉಪಾಧ್ಯಕ್ಷ ಬಿ.ಎಸ್. ರವೀಂದ್ರನಿರ್ದೇಶಕಡಿ.ಎನ್.ರಘು, ಎಚ್.ಎಸ್. ಶಿವರಾಜು ಸೇರಿದಂತೆ ಹಲವರಿದ್ದರು.



ಚೆಸ್ ಒಲಿಂಪಿಯಾಡ್: ಭಾರತಕ್ಕೆ ಐತಿಹಾಸಿಕ ಅವಳಿ ಚಿನ್ನದ ಪದಕ

ಬುಡಾಪೆಸ್ಟ್(ಹಂಗೇರಿ): ಭಾನುವಾರ ನಡೆದ 2024 ಚೆಸ್ ಒಲಿಂಪಿಯಾಡ್‌ನ ಆರಂಭ ವಿಭಾಗದಲ್ಲಿ ಟೀಮ್ ಇಂಡಿಯಾ ಚಾಂಪಿಯನ್ ಆಗಿ ಹೊರಹೊಮ್ಮಿದೆ ಎರಡನೇ ಸ್ಥಾನದಲ್ಲಿರುವ ಚೀನಾ ಯುಎಸ್‌ಎ ವಿರುದ್ಧ ಎರಡು ಬೋರ್ಡ್‌ಗಳಲ್ಲಿ ಪಾಯಿಂಟ್‌ಗಳನ್ನು ಕಳೆದುಕೊಂಡ ನಂತರ ತಂಡವು ಕೊನೆಯ ಸುತ್ತಿನಲ್ಲಿ ತನ್ನ ಮೊದಲ ಚಿನ್ನದ ಪದಕ ಗಳಿಸಿತು. ಭಾರತದ ಅರ್ಜುನ್ ಎರಿಗೈಸಿ ಮತ್ತು ಡಿ ಗುಕೇಶ್ ತಂಡಕ್ಕೆ ಗೆಲುವು ಸಾಧಿಸಿಕೊಟ್ಟರು.

ಗುಕೇಶ್ ಅವರು ರಷ್ಯಾದ ವ್ಲಾಡಿಮಿರ್ ಫೆಡೋಸೀವ್ ವಿರುದ್ಧ ಜಯಗಳಿಸುವ ಮೂಲಕ ಒಲಿಂಪಿಯಾಡ್ ಮುಕ್ತಾಯಗೊಳಿಸಿದರು, ಭಾರತಕ್ಕೆ ಐತಿಹಾಸಿಕ ಚಿನ್ನದ ಪದಕ ಗೆಲ್ಲಲು ಇವರ ಆಟ ಸಹಾಯವಾಯಿತು. ಇಂದು ಅರ್ಜುನ್ ಎರಿಗೈಸಿ ಸರ್ಬಿಯಾದ ಜಾನ್ ಸುಬೆಲ್ಜ್ ವಿರುದ್ಧ ಗೆಲುವು ಸಾಧಿಸಿದರು. ಪ್ರಗ್ನಾನಂದ ಅವರು ತಮ್ಮ ಅಭಿಯಾನವನ್ನು ಗೆಲುವಿನೊಂದಿಗೆ ಕೊನೆಗೊಳಿಸಿದರು.

ಭಾರತ ಮತ್ತೆ ಪುಟಿದೆದ್ದು, ಅಂತಿಮ ಸುತ್ತಿನಲ್ಲಿ ಅಮೆರಿಕವನ್ನು ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಮುಕ್ತ ವಿಭಾಗದ ಪುರುಷರ ತಂಡವು ಗುಕೇಶ್, ಎರಿಗೈಸಿ, ಪ್ರಗ್ನಾನಂದ ಆರ್, ವಿದಿತ್ ಗುಜರಾತಿ, ಪೆಂಟಾಲ ಹರಿಕೃಷ್ಣ ಮತ್ತು ಶ್ರೀನಾಥ್ ನಾರಾಯಣನ್ ಅವರನ್ನು ಒಳಗೊಂಡಿತ್ತು. ಇದು ಭಾರತದ ಮೊದಲ ಒಲಿಂಪಿಯಾಡ್ ಚಿನ್ನವನ್ನು ಗುರುತಿಸುತ್ತದೆ.

ಅಂತಿಮ ಸುತ್ತಿಗೆ ಮುನ್ನಡೆದ ಭಾರತ 19 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ಚೀನಾ ಮತ್ತು ಸ್ಲೋವೇನಿಯಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಮಹಿಳಾ ತಂಡ: 45ನೇ ಫಿಡೆ ಮಹಿಳಾ ಚೆಸ್ ಒಲಿಂಪಿಯಾಡ್‌ನಲ್ಲೂ ಭಾರತ ಮಹಿಳಾ ತಂಡ ಚಿನ್ನಕ್ಕೆ ಕೊರಳೊಡ್ಡಿದೆ. ಭಾರತ ಮಹಿಳಾ ತಂಡದಲ್ಲಿ ಹರಿಕಾ ದ್ರೋಣವಲ್ಲಿ, ವೈಶಾಲಿ ರಮೇಶ್‌ಬಾಬು, ದಿವ್ಯಾ ದೇಶಮುಖ್, ವಾಂತಿಕಾ ಅಗರ್ವಾಲ್, ತಾನಿಯಾ ಸಚ್‌ದೇವ್ ಮತ್ತು ಅಭಿಜಿತ್ ಕುಂಟೆ ಇದ್ದರು.

ಅಂತಿಮ ಸುತ್ತಿನಲ್ಲಿ ದಿವ್ಯಾ ದೇಶಮುಖ್, ಡಿ ಹರಿಕಾ ಮತ್ತು ವಾಂತಿಕಾ ಅಗರ್ವಾಲ್ ತಮ್ಮ ಎದುರಾಳಿಗಳ ವಿರುದ್ಧ ಗೆದ್ದರು, ಆರ್ ವೈಶಾಲಿ ಡ್ರಾಗೆ ತೃಪ್ತಿಪಡಬೇಕಾಯಿತು. ಪ್ರಶಸ್ತಿ ಬೆನ್ನತ್ತಿದ ಕಜಕಸ್ತಾನವನ್ನು ಡ್ರಾ ಮಾಡಿಕೊಂಡಿದ್ದ ಅಮೆರಿಕ, ಭಾರತದ ವನಿತೆಯರು ಚೊಚ್ಚಲ ಚಿನ್ನಕ್ಕೆ ಕೊರಳೊಡ್ಡಲು ನೆರವಾದರು.

ಅಶ್ವಿನ್ ಆಲ್‌ರೌಂಡ್ ಆಟ: ಭಾರತಕ್ಕೆ ಭರ್ಜರಿ ಜಯ

ಚೆನ್ನೈ, ಸೆ.22– ರವಿಚಂದ್ರನ್ ಅಶ್ವಿನ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ, ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 280 ರನ್‌ಗಳ ಬೃಹತ್ ಗೆಲುವು ಸಾಧಿಸಿದೆ. ಆ ಮೂಲಕ 2 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 1–0 ಅಂತರದ ಮುನ್ನಡೆ ಕಾಯ್ದುಕೊಂಡಿದೆ.



ಇಲ್ಲಿನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ 4ನೇ ದಿನದಾಟದಲ್ಲಿ ಬಾಂಗ್ಲಾ ಬ್ಯಾಟ್ಸ್‌ಮನ್‌ಗಳು ಭಾರತದ ಸ್ಪಿನ್ನರ್‌ಗಳ ದಾಳಿಗೆ ತತ್ತರಿಸಿದರು. 158 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿದ್ದ ಬಾಂಗ್ಲಾದೇಶ ಭಾನುವಾರ 357 ರನ್‌ಗಳ ಹಿನ್ನಡೆಯೊಂದಿಗೆ ದಿನದಾಟ ಆರಂಭಿಸಿತು. 200 ರನ್ ದಾಟುತ್ತಿದ್ದಂತೆ ಪೆವಿಲಿಯನ್ ಪರೇಡ್ ನಡೆಸಿದ ಪರಿಣಾಮ 234 ರನ್‌ಗಳಿಗೆ ಬಾಂಗ್ಲಾ ಸರ್ವಪತನ ಕಂಡಿತು.

ಬೃಹತ್ ಗುರಿ ಬೆನ್ನಟ್ಟಿದ ಬಾಂಗ್ಲಾ ಪರ 5ನೇ ವಿಕೆಟ್‌ಗೆ ಶಕೀಬ್ ಅಲ್ ಹಸನ್ ಮತ್ತು ನಾಯಕ ನಜ್ಮುಲ್ ಹೊಸೈನ್ ಸ್ಯಾಂಟೋ ತಾಳ್ಮೆಯ ಇನ್ನಿಂಗ್ಸ್ ಕಟ್ಟಿದ್ದರು. 108 ಎಸೆತಗಳಲ್ಲಿ ಈ ಜೋಡಿ 48 ರನ್ ಗಳಿಸಿತ್ತು. ಆದರೆ ಶಕೀಲ್ ಅಲ್ ಹಸನ್ ಔಟಾಗುತ್ತಿದ್ದಂತೆ ಬಾಂಗ್ಲಾ ಆಟಗಾರರು ಪೆವಿಲಿಯನ್ ಪರೇಡ್ ನಡೆಸಿದರು. ದ್ವಿತೀಯ ಇನ್ನಿಂಗ್ಸ್‌ನಲ್ಲಿ ಬಾಂಗ್ಲಾ ಪರ ಸ್ಯಾಂಟೋ 82, ಜಾಕಿರ್ ಹಸನ್ 33, ಶದಾಮನ್ ಇಸ್ಲಾಮ್ 35, ಮಮಿನ್ಮುಲ್ ಹಾಕಿ ಹಾಗೂ ರಹೀಂ ತಲಾ 13 ರನ್ ಗಳಿಸಿದರೆ, ಶಕೀಬ್ 25 ರನ್ ಗಳಿಸಿದರು. ಉಳಿದ ಆಟಗಾರರು ಕ್ರೀಸ್‌ನಲ್ಲಿ ಭದ್ರವಾಗಿ ನೆಲೆಯೂರದ ಕಾರಣ ಭಾರತದ ಎದುರು ಮಂಡಿಯೂರಬೇಕಾಯಿತು. ಭಾರತದ ಪರ ರವೀಂದ್ರ ಜಡೇಜಾ 3, ರವಿಚಂದ್ರನ್ ಅಶ್ವಿನ್ 6, ಜಸ್‌ಪ್ರೀತ್ ಬುಮ್ರಾ 1 ವಿಕೆಟ್ ಪಡೆದರು.

ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಶತಕ ಸಿಡಿಸಿ, ಎರಡನೇ ಇನ್ನಿಂಗ್ಸ್‌ನಲ್ಲಿ 6 ವಿಕೆಟ್ ಕಬಳಿಸುವ ಮೂಲಕ ತವರು ನೆಲದಲ್ಲಿ ಮಿಂಚಿನ ಪ್ರದರ್ಶನ ನೀಡಿದ ರವಿಚಂದ್ರನ್ ಅಶ್ವಿನ್ ತಮ್ಮ 38ನೇ ಹುಟ್ಟುಹಬ್ಬದಂದು ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು. 2021ರಲ್ಲಿ ಇದೇ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲೂ ಅಶ್ವಿನ್ ಶತಕ ಬಾರಿಸಿ, ಬಳಿಕ ಬೌಲಿಂಗ್‌ನಲ್ಲೂ ಮಿಂಚಿ ಪಂದ್ಯಶ್ರೇಷ್ಠ ಗೌರವ ಪಡೆದಿದ್ದರು. ಇನ್ನು ಟೆಸ್ಟ್ ವೃತ್ತಿ ಜೀವನದಲ್ಲಿ 37ನೇ ಬಾರಿಗೆ ಐದು ವಿಕೆಟ್ ಸಾಧನೆ ಮಾಡುವ ಮೂಲಕ ಅಶ್ವಿನ್ ಆಸ್ಟ್ರೇಲಿಯಾ ಸ್ಪಿನ್ ಮಾಂತ್ರಿಕ ಶೇನ್ ವಾರ್ನ್ ಅವರ ದಾಖಲೆ ಮುರಿದರು. ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 376 ರನ್‌ಗೆ ಆಲೌಟಾದರೆ, ಬಾಂಗ್ಲಾದೇಶ 149 ರನ್‌ಗರ ಸರ್ವಪತನ ಕಂಡಿತ್ತು. ಎಡರನೇ ಇನ್ನಿಂಗ್ಸ್‌ನಲ್ಲಿ ಭಾರತ 4 ವಿಕೆಟ್ ನಷ್ಟಕ್ಕೆ 287 ರನ್‌ಗಳಿಗೆ ಡಿಕ್ಲೇರ್ ಮಾಡಿಕೊಂಡು 515 ರನ್‌ಗಳ ಬೃಹತ್ ಗೆಲುವಿನ ಗುರಿ ನೀಡಿತ್ತು. ಗುರಿ ಬೆನ್ನಟ್ಟಿದ ಬಾಂಗ್ಲಾದೇಶ 234 ರನ್‌ಗೆ ಆಲೌಟಾಯಿತು. ಸರಣಿಯ ಎರಡನೇ ಟೆಸ್ಟ್ ಪಂದ್ಯ ಕಾನ್ಪುರದಲ್ಲಿ ಸೆ.27ರಿಂದ ಅ.1ರವರೆಗೆ ನಡೆಯಲಿದೆ.

ಶೀಘ್ರದಲ್ಲೇ ಆರ್‌ಸಿ ಬ್ರಿಗೇಡ್ ಸ್ಥಾಪನೆ

ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಘೋಷಣೆ



ವಿಜಯಪುರ: ರಾಜ್ಯದಲ್ಲಿ ಹಿಂದುಳಿದವರಿಗೆ, ದಲಿತರಿಗೆ, ಬ್ರಾಹ್ಮಣರಿಗೆ ಮತ್ತು ಲಿಂಗಾಯತರಿಗೆ ಅನ್ಯಾಯವಾಗುವುದನ್ನು ತಡೆಯುವ ನಿಟ್ಟಿನಲ್ಲಿ ಶೀಘ್ರದಲ್ಲೇ ಆರ್‌ಸಿಬಿ (ರಾಯಣ್ಣ,ಚನ್ನಮ್ಮ ಬ್ರಿಗೇಡ್) ಅಸ್ತಿತ್ವಕ್ಕೆ ಬರಲಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ಹಿಂದುಳಿದವರಿಗೆ ಅನ್ಯಾಯವಾಗುವುದನ್ನು ತಡೆಯಲು ಬ್ರಿಗೇಡ್ ಬೇಕು ಎಂದು ಅನೇಕರು ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ಕೂಡ ಈಶ್ವರಪ್ಪ ಮತ್ತು ಬಸನಗೌಡ ಪಾಟೀಲ ಯತ್ನಾಳ ಸೇರಿ ಆರ್‌ಸಿಬಿ ಸ್ಥಾಪಿಸುವಂತೆ ಸಲಹೆ ನೀಡಿದ್ದಾರೆ. ಈ ಬಗ್ಗೆ ಬೆಂಬಲಿಗರೊಂದಿಗೆ ಚರ್ಚಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ನಗರದಲ್ಲಿ ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ರಾಯಣ್ಣ ಬ್ರಿಗೇಡ್ ಚಟುವಟಿಕೆ ನಿಲ್ಲಿಸುವಂತೆ ಈ ಹಿಂದೆ ಬಿ.ಎಸ್.ಯಡಿಯೂರಪ್ಪ ದೂರಿನ ಮೇರೆಗೆ ಅಮಿತ್ ಶಾ ಅವರು ನನಗೆ ಸೂಚಿಸಿದ್ದ ಕಾರಣಕ್ಕೆ ಕೈಬಿಟ್ಟಿದ್ದೆ. ಅಂದು ರಾಯಣ್ಣ ಬ್ರಿಗೇಡ್ ಸಂಘಟನೆ ಕೈಬಿಟ್ಟು ತಪ್ಪು ಮಾಡಿದೆ ಎಂದು ಈಗ ಅನಿಸುತ್ತಿದೆ ಎಂದು ಹೇಳಿದರು.

ಜೀವನದಲ್ಲಿ ಬಿಜೆಪಿ ಬಿಟ್ಟು ಬೇರಾವ ಪಕ್ಷಕ್ಕೂ ಹೋಗುವುದಿಲ್ಲ. ಆದರೆ, ಭ್ರಷ್ಟಾಚಾರಿಗಳಿಂದ, ಅಪ್ಪ–ಮಕ್ಕಳ ಕಪಿಮುಷ್ಟಿಯಿಂದ ಶುದ್ಧೀಕರಣವಾಗದ ಹೊರತು ಬಿಜೆಪಿಗೆ ಸದ್ಯ ಹೋಗಲ್ಲ. ಬಿಜೆಪಿ ನನ್ನ ತಾಯಿ ಇದ್ದಂತೆ. ಆ ತಾಯಿ ಮೇಲೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವುದಕ್ಕಾಗಿ ಧ್ವನಿ ಎತ್ತಿ ಹೊರಬಂದಿದ್ದೇನೆ. ಬಿಜೆಪಿ ಶುದ್ಧೀಕರಣದ ಬಗ್ಗೆ ಪಕ್ಷದ ವರಿಷ್ಠರು ಗಮನ ಹರಿಸುತ್ತಾರೆ ಎಂಬ ನಂಬಿಕೆ ಇದೆ ಎಂದರು.

ಬಂಧಿಸಿ, ಜೈಲಿಗೆ ಕಳುಹಿಸಿ: ತಿರುಪತಿ ಲಡ್ಡು ವಿಷಯದಲ್ಲಿ ವಿದೇಶಿ ಕ್ರಿಶ್ಚಿಯನ್ ಮಿಷನರಿಗಳ ಕೈವಾಡ ಇದೆ. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿರುವ ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ಜಗತ್ತಿನ ಹಿಂದುಗಳಿಗೆ ಮಾಡಿರುವ ದೊಡ್ಡ ದ್ರೋಹ ಇದಾಗಿದೆ. ಅವರ ವಿರುದ್ಧ ಎಫ್‌ಐಆರ್ ಹಾಕಿ, ಬಂಧಿಸಿ, ಜೈಲಿಗೆ ಕಳುಹಿಸಬೇಕು ಎಂದು ಆಗ್ರಹಿಸಿದರು.

ಲಡ್ಡುವಿನಲ್ಲಿ ಪ್ರಾಣಿ ಕೊಬ್ಬು ಬೆರಸುವ ಮೂಲಕ ಹಿಂದುಗಳ ಭಾವನೆಗಳಿಗೆ ಧಕ್ಕೆ ಮಾಡಲಾಗಿದೆ. ಶ್ರದ್ಧೆಗೆ ಭಂಗ ತರುವ ಕೆಲಸ ಇದಾಗಿದೆ. ಹಿಂದುಗಳ ಶ್ರದ್ಧಾ ಕೇಂದ್ರಕ್ಕೆ ಅಪಮಾನ ಮಾಡಲಾಗಿದೆ. ಸಿಬಿಐ ತನಿಖೆಯಾಗಬೇಕು, ತಪ್ಪಿತಸ್ಥರ ವಿರುದ್ಧ ಕ್ರಮವಾಗಬೇಕು ಎಂದರು.

ಸಂತೆಪೇಟೆ, ಶಿವರಾಂಪೇಟೆಯಲ್ಲಿ ಸ್ವಚ್ಛತಾ ಕಾರ್ಯ



ಮೈಸೂರು, ಸೆ. 22(ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆ ಹಾಗೂ ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶಿವರಾಂಪೇಟೆ, ಸಂತೆಪೇಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಸ್ವಚ್ಛತಾ ಕಾರ್ಯ ನಡೆಯಿತು.

ದೇವರಾಜ ಮೊಹಲ್ಲಾ ಕ್ರಾಸ್ ರೋಡ್‌ಗಳು, ದೇವರಾಜ ಅರಸು ರಸ್ತೆಗಳಲ್ಲಿ ಮಾಜಿ ನಗರಪಾಲಿಕೆ ಸದಸ್ಯ ಪ್ರಶಾಂತ್‌ಗೌಡರ ನೇತೃತ್ವದಲ್ಲಿ ಸಕ ತೆಗೆದು ಸ್ವಚ್ಛತಾ ಅಭಿಯಾನ ನಡೆಸುವ ಮೂಲಕ ಸಾರ್ವಜನಿರಿಗೂ ಅರಿವು ಮೂಡಿಸಲಾಯಿತು.

ಪಾಲಿಕೆ ಹೆಲ್ತ್ ಇನ್ಸ್‌ಪೆಕ್ಟರ್ ಕೃಷ್ಣ, ಪ್ರವೀಣ್ ಜೈನ್, ಗೋಪಿನಾಥ್, ಬಬುತರಾಮ್, ಕಾಂತಿಲಾಲ್, ಮಂಗಳ ರಾಮ್, ಈಶ್ವರ, ಗುರುಪ್ರಸಾದ್, ರತನ್, ಬಲರಾಂ ಸೇರಿದಂತೆ ಹಲವು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಪಿಎಚ್.ಡಿ ಪದವಿ



ಮೈಸೂರು, ಸೆ22–ಡಾ.ಡಿ.ಎಸ್ ಗುರು ಅವರ ಮಾರ್ಗದರ್ಶನದಲ್ಲಿ ಎಸ್.ಪ್ರಜ್ಞಾ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ('Detection and Recognition of Faces of Celebrities in Cartoon Images') ಮಹಾ ಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯ ಅಂಗೀಕರಿಸಿದೆ ಎಂದು ವಿವಿ ಪರೀಕ್ಷಾಂಗ ಕುಲಸಚಿವರ ಪ್ರಕಟಣೆ ತಿಳಿಸಿದೆ.

ಮೈಸೂರಿನ ರಿಂಗ್ ರಸ್ತೆ ಮತ್ತೆ ಕಗ್ಗತ್ತಲು

ಮೈಸೂರು, ಸೆ. 22(ಆರ್‌ಕೆ)– ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ದಿನಗಣನೆ ಆರಂಭವಾಗಿದ್ದರೂ, ಸಾಂಸ್ಕೃತಿಕ ನಗರಿಯ ರಿಂಗ್ ರಸ್ತೆಯಲ್ಲಿ ಕಗ್ಗತ್ತಲು ಆವರಿಸಿದೆ.

ಹಲವು ವರ್ಷಗಳಿಂದ ದೀಪಗಳು ಬೆಳಗದೇ ಕಗ್ಗತ್ತಲು ಆವರಿಸಿದ್ದ ರಿಂಗ್ ರೋಡ್‌ನ 42.5 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯ ಬೀದಿ ದೀಪಗಳ ವೈರ್‌ಗಳನ್ನು ಬದಲಿಸಿದ ನಂತರ 2022ರ ಡಿಸೆಂಬರ್ 1ರಿಂದ ಬೆಳಕು ಚೆಲ್ಲಿತ್ತು. ಆದರೆ ಇದೀಗ ಅಲ್ಲಿನ ಬೀದಿ ದೀಪಗಳು ಕೆಟ್ಟಿರುವುದರಿಂದ ಮತ್ತೆ ಕತ್ತಲು ಆವರಿಸಿದೆ.

ನವರಾತ್ರಿ ಅಂಗವಾಗಿ ಮೈಸೂರು ನಗರದಾದ್ಯಂತ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದ್ದು, ದೇಶ–ವಿದೇಶಗಳಿಂದ ಬರುವ ಪ್ರವಾಸಿಗರ ಕಣ್ಮನ ಸೆಳೆಯುವಂತೆ ಮಾಡಲಾಗುತ್ತಿದೆ. ಆದರೆ, ಹೊರವರ್ತುಲ ರಸ್ತೆ ಮಾತ್ರ ಕತ್ತಲಿನಿಂದ ಕೂಡಿದ್ದು, ರಾತ್ರಿ ವೇಳೆ ಅಪಘಾತಗಳು, ಅನೈತಿಕ ಚಟುವಟಿಕೆಗಳು ಹಾಗೂ ಅಪರಾಧ ಕೃತ್ಯಗಳಿಗೆ ಕಾರಣವಾಗುತ್ತಿದೆ.

ವಾರದೊಳಗೆ ದೀಪ ಬೆಳಗಲಿವೆ: ಕೆ.ಜೆ.ಸಿಂಧು

ಮೈಸೂರು, ಸೆ. 22(ಆರ್‌ಕೆ)– ತುಂಡಾಗಿರುವ ವೈಯರ್‌ಗಳನ್ನು ಅಳವಡಿಸಿ ಸಂಪರ್ಕ ಕಲ್ಪಿಸುವ ಕೆಲಸ ಆರಂಭಿಸಲಾಗಿದ್ದು, ಒಂದು ವಾರದೊಳಗಾಗಿ ಮೈಸೂರಿನ ಹೊರ ವರ್ತುಲ ರಸ್ತೆಯ ಬೀದಿ ದೀಪಗಳು ಬೆಳಗಲಿವೆ ಎಂದು ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧು ತಿಳಿಸಿದ್ದಾರೆ.

ಈ ಹಿಂದೆಯೂ ಇಲಿ, ಹೆಗ್ಗಣಗಳು ಕೇಬಲ್ ವೈಯರ್‌ಗಳನ್ನು ಕಡಿದು ತುಂಡರಿಸಿದ್ದರಿಂದ ರಿಂಗ್ ರಸ್ತೆ ಬೀದಿ ದೀಪಗಳು ಹೊತ್ತಿ ಉರಿಯುತ್ತಿರಲಿಲ್ಲ. ಹೊಸದಾಗಿ ಭೂಮಿ ಒಳಗೆ ಯುಜಿ ಕೇಬಲ್ ಅಳವಡಿಸಲಾಗಿತ್ತಾದರೂ, ವಿದ್ಯುತ್ ಕಂಬಗಳಿಗೆ ಸಂಪರ್ಕ ಕಲ್ಪಿಸಿರುವೆಡೆ ತೆರೆದುಕೊಂಡಿರುವ ಸ್ಥಳಗಳಲ್ಲಿ ಈಗ ಇಲಿ, ಹೆಗ್ಗಣಗಳು ಕಡಿದು ತುಂಡರಿಸಿರುವುದರಿಂದ ಇದೀಗ ಮತ್ತೆ ರಿಂಗ್ ರೋಡ್‌ನಲ್ಲಿ ಕತ್ತಲು ಆವರಿಸಿದೆ ಎಂದು ಅವರು ತಿಳಿಸಿದರು.

ಈಗಾಗಲೇ ರಿಪೇರಿ ಕೆಲಸ ಆರಂಭವಾಗಿದೆ. ನಾಲ್ಕೈದು ದಿನಗಳಲ್ಲಿ ಪೂರ್ಣಗೊಳ್ಳಲಿದ್ದು, ವಾರದೊಳಗಾಗಿ ರಿಂಗ್ ರಸ್ತೆಯ ಬೀದಿ ದೀಪಗಳು ಬೆಳಗುತ್ತವೆ. ರಿಂಗ್ ರೋಡ್ ರಾಷ್ಟ್ರೀಯ ಹೆದ್ದಾರಿ ರಾಜ್ಯ ಘಟಕದ ಸುಪರ್ದಿನಲ್ಲಿದೆಯಾದರೂ, ಸ್ಟ್ರೀಟ್‌ಲೈಟ್ ನಿರ್ವಹಣೆಯನ್ನು ಪಾಲಿಕೆಯೇ ಮಾಡುತ್ತಿರುವುದರಿಂದ ಇಷ್ಟರಲ್ಲೇ ಟೆಂಡರ್ ಕರೆಯಲಾಗುವುದು ಎಂದು ಸಿಂಧು ತಿಳಿಸಿದ್ದಾರೆ.

42.5 ಕಿ.ಮೀ. ಉದ್ದದ 6 ಪಥದ ರಿಂಗ್ ರಸ್ತೆಯಲ್ಲಿ ಅಳವಡಿಸಿರುವ 2,135 ವಿದ್ಯುತ್ ಕಂಬಗಳ 4,818 ಬಲ್ಬ್‌ಗಳಿಗೆ ಹೊಸದಾಗಿ ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸಿ 12 ಕೋಟಿ ರೂ. ಮುಡಾ ಅನುದಾನದಲ್ಲಿ ಬೀದಿ ದೀಪ ಹೊತ್ತಿ ಉರಿಯುವಂತೆ ಮಾಡಲಾಗಿತ್ತು. ಸ್ಟ್ರೀಟ್ ಲೈಟ್‌ಗಳನ್ನು ನಿರ್ವಹಿಸಲು ಮೈಸೂರು ಮಹಾನಗರ ಪಾಲಿಕೆಗೆ ಜವಾಬ್ದಾರಿ ವಹಿಸಲಾಗಿತ್ತು.

ಈ ಹಿಂದೆ ಅಳವಡಿಸಿದ್ದ ಬೀದಿ ದೀಪದ ಕೇಬಲ್‌ಗಳನ್ನು ಖದೀಮರು



ಬೀದಿದೀಪಗಳಿಲ್ಲದೆ ಕತ್ತಲಲ್ಲಿ ಮುಳುಗಿರುವ ರಿಂಗ್ ರಸ್ತೆ

ಕಿತ್ತುಕೊಂಡು ಹೋಗಿದ್ದಲ್ಲದೆ, ಕೆಲವೆಡೆ ಇಲಿ, ಹೆಗ್ಗಣಗಳು ತಿಂದು ತುಂಡರಿಸಿದ್ದರಿಂದ ರಿಂಗ್ ರಸ್ತೆ ವಿದ್ಯುತ್ ದೀಪಗಳು ಉರಿಯುತ್ತಿರಲಿಲ್ಲವಾದ್ದರಿಂದ ವರ್ಷಗಟ್ಟಲೆ ಕತ್ತಲು ಆವರಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ

ಬೀದಿ ದೀಪ ಬೆಳಗದ ಕಾರಣ ರಿಂಗ್ ರಸ್ತೆಯು ಅಪರಾಧ ಕೃತ್ಯಗಳ ಹಾಟ್‌ಸ್ಪಾಟ್ ಆಗಿ ಪರಿಣಮಿಸುತ್ತಿದೆ. ದುಷ್ಕರ್ಮಿಗಳು ರಾತ್ರಿ ವೇಳೆ ದ್ವಿಚಕ್ರ ವಾಹನ ಸವಾರರನ್ನು ಅಡ್ಡಗಟ್ಟಿ ಸುಲಿಗೆ, ದರೋಡೆ ಮಾಡುವುದು, ಅನೈತಿಕ ಚಟುವಟಿಕೆ, ಸರ್ವಿಸ್ ರಸ್ತೆಯಲ್ಲೇ ಮದ್ಯಪಾನ ಮಾಡುವುದು, ಇನ್ನಿತರ ಅಪರಾದ ಕೃತ್ಯಗಳು ನಡೆಯಲು ಕಾರಣವಾಗಿದೆ.

ಅಲ್ಲದೇ ರಿಂಗ್ ರಸ್ತೆಯುದ್ದಕ್ಕೂ ರಾತ್ರಿ ವೇಳೆ ಅಪಘಾತಗಳಿಗೂ ಈ ಕತ್ತಲು ಕಾರಣವಾಗುತ್ತಿದೆ. ಸಮಾಜಘಾತುಕ ಚಟುವಟಿಕೆ ನಡೆಸಲು ಆಗಂತುಕರು ರಿಂಗ್ ರಸ್ತೆಯನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಚಿನ್ನದ ಸರ ಅಪಹರಣ, ಅಪಘಾತದ ನೆಪದಲ್ಲಿ ಕಾರು ಚಾಲಕರನ್ನು ಬೆದರಿಸಿ ಹಣ ಪೀಕುವವರಿಗೂ ರಿಂಗ್ ರಸ್ತೆ ಪ್ರಸಕ್ತ ತಾಣವಾಗಲಿದೆ.

ಪಾರಿವಾಳಗಳಿಗೆ ಆಹಾರ ಹಾಕುವುದನ್ನು ತಡೆಯಲು ಕಾನೂನು ಜಾರಿಗೊಳಿಸಬೇಕು

- ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒತ್ತಾಯ
- ಪಾರಿವಾಳಗಳಿಂದ ಪಾರಂಪರಿಕ ಕಟ್ಟಡಗಳಿಗೆ ಹಾನಿ, ಜನರ ಆರೋಗ್ಯದ ಮೇಲೂ ದುಷ್ಪರಿಣಾಮ

ಮೈಸೂರು, ಸೆ.22(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿಗೆ ಪಾರಂಪರಿಕ ನಗರಿಯ ಮೆರಗು ನೀಡುತ್ತಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗಾಗಿ ಹಾಗೂ ಸ್ಥಳೀಯರ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮ ತಡೆಗಟ್ಟಲು ಅರಮನೆ ಮುಂದೆ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ತಡೆಗಟ್ಟಲು ಕಾನೂನು ಜಾರಿಗೊಳಿಸಬೇಕು ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಒತ್ತಾಯಿಸಿದ್ದಾರೆ.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ಪರಿಸರ ಹಾಗೂ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಯ ಬಗ್ಗೆ ಆಸಕ್ತಿಯುಳ್ಳವರೊಂದಿಗೆ ವಿವಿಧ ಸಂಘಟನೆಗಳು ಆಯೋಜಿಸಿದ್ದ ಪಾರಿವಾಳಗಳಿಗೆ ಆಹಾರ ನೀಡುವುದನ್ನು ನಿಷೇಧಿಸುವ ಸಂಬಂಧ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಹಲವು ಪಾರಂಪರಿಕ ಕಟ್ಟಡಗಳಿದ್ದು, ಮೈಸೂರಿಗೆ ಪಾರಂಪರಿಕ ಮೆರಗು ನೀಡಿದೆ. ಆದರೆ, ಪಾರಿವಾಳಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪಾರಂಪರಿಕ ಕಟ್ಟಡಗಳಿಗೆ ಹಾನಿಯಾಗುತ್ತಿದೆ. ಅರಮನೆ ಮುಂಭಾಗ ಪಾರಿವಾಳಗಳಿಗೆ ದವಸ–ಧಾನ್ಯ ಹಾಗೂ ಇನ್ನಿತರ ಆಹಾರ ಪದಾರ್ಥಗಳನ್ನು ನೀಡಲಾಗುತ್ತಿದೆ. ಇದರಿಂದ ಪಾರಿವಾಳಗಳು ಪಾರಂಪರಿಕ ಕಟ್ಟಡಗಳ ಮೇಲೆ ಇಡುತ್ತಿರುವ ಪಿಕ್ಕೆಗಳಿಗೆ ಪಾರಂಪರಿಕ ಕಟ್ಟಡಗಳಿಗೆ ಹಾನಿಯಾಗುತ್ತಿದೆ ಎಂದು ವಿಷಾದಿಸಿದರು.

ಪಾರಿವಾಳಗಳ ಪಿಕ್ಕೆಯಲ್ಲಿ ಸಿಟ್ರಿಕ್ ಆಸಿಡ್ ಪ್ರಮಾಣ ಹೆಚ್ಚಾಗಿರುವುದರಿಂದ ಮಾರ್ಬಲ್ ಹಾಗೂ ಪಾರಂಪರಿಕ ಕಟ್ಟಡಗಳ ಗೋಡೆಗಳಿಗೆ ಹಾನಿಯುಂಟು ಮಾಡುತ್ತಿದೆ. ಮೈಸೂರು ನಗರ ಆರ್ಥಿಕತೆ ಪ್ರವಾಸೋದ್ಯಮದ ಮೇಲೆ ನಿಂತಿದೆ. ಸಾಕಷ್ಟು ಪ್ರವಾಸಿಗರು ಪಾರಂಪರಿಕ ಕಟ್ಟಡಗಳ ವೀಕ್ಷಣೆಗೆ ಬರುತ್ತಾರೆ. ಈ ಹಿನ್ನೆಲೆಯಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಒತ್ತು ನೀಡಬೇಕು. ಅರಮನೆ ಮಾತ್ರವಲ್ಲದೆ, ಕೆ.ಆರ್.ವೃತ್ತ, ಚಾಮರಾಜ ವೃತ್ತ, ಜಯ ಚಾಮರಾಜವೃತ್ತ, ಪುರಭವನ, ದೊಡ್ಡಗಡಿ ಯಾರ, ಡಾ.ಅಂಬೇಡ್ಕರ್ ಪ್ರತಿಮೆ ಸೇರಿದಂತೆ ಇನ್ನಿತರ ಕಟ್ಟಡಗಳಿಗೂ ಪಾರಿವಾಳಗಳ ಪಿಕ್ಕೆಗಳಿಂದ ಹಾನಿಯಾಗುತ್ತಿದೆ ಎಂದರು.

ಕೇವಲ ಪಾರಂಪರಿಕ ಕಟ್ಟಡಗಳ ಮೇಲೆ ಪಾರಿವಾಳಗಳಿಂದ ಹಾನಿಯಾಗುತ್ತಿಲ್ಲ. ಜನರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಮಕ್ಕಳ ಆರೋಗ್ಯದ ಮೇಲೂ ಪ್ರಭಾವ ಬೀರುತ್ತಿದೆ. ಪಾರಿವಾಳಗಳ ಸಂಖ್ಯೆ ಹೆಚ್ಚಳದಿಂದ ಕ್ರಿಮಿಕೀಟಗಳ ಸಂಖ್ಯೆ ಹೆಚ್ಚಳದೊಂದಿಗೆ ಬೇರೆ ಬೇರೆ ಸಮಸ್ಯೆಗಳು ಉದ್ಭವಿಸುತ್ತಿದೆ. ಪಾರಿವಾಳಗಳಿಂದಾಗುತ್ತಿರುವ ಸಮಸ್ಯೆ ಜಾಗತಿಕ ಸಮಸ್ಯೆಯಾಗಿ ಉಲ್ಬಣಗೊಂಡಿದೆ. ಅಮೇರಿಕಾದಲ್ಲಿ 'ಆಕಾಶದ ಇಲಿಗಳು' ಎಂದು ಕರೆಯುತ್ತಾರೆ. ಈ ನಿಟ್ಟಿನಲ್ಲಿ ಮೈಸೂರು ಅರಮನೆ ಮುಂಭಾಗ ಸೇರಿದಂತೆ ನಗರದಲ್ಲಿ ಪಾರಿವಾಳಗಳಿಗೆ ಆಹಾರ ಹಾಕುವುದು ನಿಲ್ಲಬೇಕು. ಆಹಾರ ಹಾಕುವುದನ್ನು ನಿಷೇಧಿಸುವ ಕಾನೂನು ಆಗಬೇಕು. ಅದಕ್ಕೆ ಆರೋಗ್ಯವಂತ ಸಮಾಜ ನಿರ್ಮಾಣಕ್ಕಾಗಿ ಜವಾಬ್ದಾರಿಯುತ ಜನಪ್ರತಿನಿಧಿಗಳು, ಕಾಳಜಿಯುಳ್ಳ ನಾಗರಿಕರು ಸಹಕಾರ ನೀಡುತ್ತಾರೆ ಎಂದು ಭರವಸೆ ನೀಡಿದರು.

ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ.ಶೆಣೈ ಮಾತನಾಡಿ, ಪಾರಿವಾಳಗಳ ಸಂಖ್ಯೆ ಹೆಚ್ಚಳದಿಂದ ಬೇರೆ ಬೇರೆ ರೀತಿಯ ಸಮಸ್ಯೆಗಳು ಉದ್ಭವಿಸುತ್ತಿವೆ. ಮೈಸೂರು ಹೃದಯ ಭಾಗದಲ್ಲಿರುವ ಪಾರಂಪರಿಕ ಕಟ್ಟಡಗಳಿಗೆ ಹಾನಿಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಲ್ಲಿಸಬೇಕು. ಆಹಾರ ಹಾಕುವವರು ಪಾರಿವಾಳಗಳಿಂದಾಗುತ್ತಿರುವ ಸಮಸ್ಯೆಗಳನ್ನು ಅರಿತು ಸ್ವಯಂ ಪ್ರೇರಣೆಯಿಂದ ಆಹಾರ ಹಾಕುವುದನ್ನು ಸ್ಥಗಿತಗೊಳಿಸಬೇಕು ಎಂದರು.

ವೈದ್ಯ ಡಾ.ಮಧು ಮಾತನಾಡಿ, ಪಾರಿವಾಳಗಳ ಪಿಕ್ಕೆಗಳಿಂದ ಜನರಿಗೆ ಅಸ್ತಮಾ ಖಾಯಿಲೆ ಬರುತ್ತಿದೆ. ಮಕ್ಕಳ ಆರೋಗ್ಯವೂ ಹದಗೆಡಲು ಕಾರಣವಾಗುತ್ತಿದೆ. ಜನ ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು ಮಾತನಾಡಿ, ಪಾರಿವಾಳಗಳು ಹಾಕುವ ಪಿಕ್ಕೆಗಳಿಂದ ಪಾರಂಪರಿಕ ಕಟ್ಟಡಗಳಿಗೆ ದುಸ್ಥಿತಿ ಒದಗಿ ಬರುತ್ತಿದೆ. ಅವುಗಳ ರಕ್ಷಣೆಗೆ ಈಗಿನಿಂದಲೇ ಕ್ರಮ ಕೈಗೊಳ್ಳಬೇಕು. ಈಗಾಗಲೇ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಕಳೆದುಕೊಂಡಿದ್ದೇವೆ. ಇನ್ನುಳಿದ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಬೇಕು. ಪಾರಿವಾಳಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಕೆ.ಆರ್.ವೃತ್ತ ಚಾಮರಾಜವೃತ್ತ, ಜಯಚಾಮರಾಜ ವೃತ್ತ, ಟೌನ್‌ಹಾಲ್ ಸುತ್ತಮುತ್ತಲಿರುವ ಪಾರ್ಕ್‌ಗಳಲ್ಲಿ 300ಕ್ಕೂ ಹೆಚ್ಚು ಇಲಿಗಳ ಬಿಲಗಳು ಪತ್ತೆಯಾಗಿವೆ. ಪಾರಿವಾಳಗಳಿಗೆ ಹಾಕುವ ದವಸ ಧಾನ್ಯಗಳನ್ನು ತಿಂದು ಇಲಿಗಳ ಸಂಖ್ಯೆಯೂ ಹೆಚ್ಚಾಗಿದೆ. ಇದರಿಂದ ಮತ್ತೊಂದು ರೀತಿಯ ಸಮಸ್ಯೆ ಸೃಷ್ಟಿಯಾಗುತ್ತಿದೆ ಎಂದು ವಿಷಾದಿಸಿದರು.

ಪರಿಸರ ತಜ್ಞ ಸಪ್ತಗಿರೀಶ್ ಮಾತನಾಡಿ, ಪಾರಿವಾಳಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪೂರೈಸುತ್ತಿರುವುದರಿಂದ ಅವುಗಳ ಜೀವನ ಶೈಲಿ ಬದಲಾಗಿದೆ. ಸಂತಾನೋತ್ಪತ್ತಿ ಹೆಚ್ಚಾಗುತ್ತಿದೆ. ಪಾರಿವಾಳಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಕಾಗೆ ಹಾಗೂ ಮೈನಾ ಹಕ್ಕಿ ಸೇರಿದಂತೆ ಇನ್ನಿತರ ಪಕ್ಷಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಈ ಹಿಂದೆ ಬೆಂಗಳೂರಿನ ವಿಧಾನಸೌಧ, ಕೋರ್ಟ್ ಮುಂಭಾಗ ಪಾರಿವಾಳಗಳಿಗೆ ಆಹಾರ ನೀಡಲಾಗುತ್ತಿತ್ತು. ಅದರಿಂದಾಗುತ್ತಿರುವ ಸಮಸ್ಯೆಗಳನ್ನು ಅರಿತು ನ್ಯಾಯಾಲಯ ನೀಡಿದ ಆದೇಶದ ಮೇರೆಗೆ ಅಲ್ಲಿ ಪಾರಿವಾಳಗಳಿಗೆ ಆಹಾರ ಹಾಕುವುದು ನಿಷೇಧಿಸಲಾಗಿದೆ. ಅದೇ ಮಾದರಿಯಲ್ಲಿ ಮೈಸೂರಲ್ಲೂ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಷೇಧಿಸಬೇಕು ಎಂದು ಮನವಿ ಮಾಡಿದರು.

ಪ್ರಾಣಿ ಸಂರಕ್ಷಕ ಪ್ರದೀಪ್ ಮಾತನಾಡಿ, ವನ್ಯಜೀವಿ ಸಂರಕ್ಷಣಾ ಕಾಯ್ದೆಯಲ್ಲಿ ಪ್ರಾಣಿ–ಪಕ್ಷಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸಲಾಗಿದೆ. ಮೈಸೂರಲ್ಲಿ ಪಾರಿವಾಳಗಳಿಗೆ ಆಹಾರ ಹಾಕುವವರ ವಿರುದ್ಧ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬಹುದು. ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ ಪಾರಿವಾಳಗಳಿಂದಾಗುವ ಸಮಸ್ಯೆಗೆ ಕಡಿವಾಣ ಹಾಕಬಹುದು. ಆದರೂ, ಪಾರಿವಾಳಗಳಿಗೆ ಆಹಾರ ಹಾಕುವವರಲ್ಲಿ ಜಾಗೃತಿ ಮೂಡಿಸಬೇಕು. ಆಹಾರ ಹಾಕದಂತೆ ಫಲಕ ಹಾಕಬೇಕು ಎಂದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್, ಪರಿಸರ ಪ್ರೇಮಿಗಳಾದ ಡಾ.ಮುರಳಿ ಮೋಹನ್, ಮಧುಕೇಶ್, ಡಾ.ಮುರಳಿ, ಬಿ.ಎಸ್.ಪ್ರಶಾಂತ್, ದಿನೇಶ್, ನಿಕಿಲೇಶ್, ಶೈಲಜೇಶ್, ಸಾಗರ್ ಸುರೇಶ್, ಲೀಲಾ ಶಿವಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಅರಮನೆ ಮುಂಭಾಗ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಷೇಧಿಸುವಂತೆ ಭಾನುವಾರ ನಡೆದ ಸಭೆಯಲ್ಲಿ ಪಾಲ್ಗೊಂಡ ಪರಿಸರ ಪ್ರೇಮಿಗಳು.

> "ಅರಮನೆ ಮುಂದೆ ಪಾರಿವಾಳಗಳಿಂದ ಆಗುತ್ತಿರುವ ಗಲೀಜಿನಿಂದಾಗಿ ಪ್ರವಾಸಿಗರಿಗೆ ಮುಜುಗರವಾಗುತ್ತಿದೆ. ಜಗತ್ತಿನಲ್ಲಿ ಕೋಟ್ಯಾಂತರ ಪಕ್ಷಿಗಳಿವೆ. ಅವುಗಳಿಗೆ ಆಹಾರ ಪೂರೈಸಲು ಆಗುವುದಿಲ್ಲ. ಇಲ್ಲಿ ಬಂದು ಆಹಾರ ಹಾಕುವುದನ್ನು ನಿಲ್ಲಿಸಿ, ತಮ್ಮ ತಮ್ಮ ಮನೆಗಳ ತಾರಸಿ ಮೇಲೆ ಆಹಾರ ಹಾಕಲು ಮುಂದಾಗಬೇಕು. ಪಾರಿವಾಳಗಳಿಂದ ಜನರ ಆರೋಗ್ಯದ ಮೇಲಾಗುವ ದುಷ್ಪರಿಣಾಮ ಕುರಿತು ಅವಲೋಕಿಸಬೇಕು. ಆ ಕಾರಣದಿಂದ ಅರಮನೆ ಮುಂದೆ ಆಹಾರ ಹಾಕಬೇಡಿ. **–ಎಲ್.ನಾಗೇಂದ್ರ, ಮಾಜಿ ಶಾಸಕ**

ಜೈನ ಸಮಾಜ ಇನ್ನು ಮುಂದೆ ಪಾರಿವಾಳಗಳಿಗೆ ಆಹಾರ ಹಾಕುವುದಿಲ್ಲ

> "ಅರಮನೆ ಮುಂದೆ ಪಾರಿವಾಳಗಳಿಗೆ ಆಹಾರ ಹಾಕುತ್ತಿರುವುದಕ್ಕೆ ವಿವಿಧ ಸಂಘ–ಸಂಸ್ಥೆಗಳು ವಿರೋಧಿಸುತ್ತಿವೆ. ಪಾರಿವಾಳಿಂದಾಗುವ ಸಮಸ್ಯೆ, ದುಷ್ಪರಿಣಾಮವನ್ನು ಗಣ್ಯರು ವಿವರಿಸಿದ್ದಾರೆ. ಇದರಿಂದ ಪಾರಿವಾಳಗಳಿಗೆ ಆಹಾರ ಹಾಕುವ ಕಬೂತರ್ ದಾನ್ ತಂಡ ಹಾಗೂ ಇನ್ನಿತರ ಸಂಘ–ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಮಾತನಾಡಿ, ಇಂದಿನಿಂದಲೇ ದವಸ–ಧಾನ್ಯ ಹಾಕದಂತೆ ಕೋರಿದ್ದೇನೆ. ಅರಮನೆಯಿಂದಲೇ ಮೈಸೂರಲ್ಲಿ ಜೈನ ಸಮಾಜ ಬದುಕುತ್ತಿದೆ. ಅರಮನೆ ಇಲ್ಲದಿದ್ದರೆ ನಾವು ಇರಲ್ಲ. ಆ ಕಾರಣದಿಂದ ಯಾರ ಮನಸ್ಸಿಗೂ ನೋವಾಗದಂತೆ ಇಂದಿನಿಂದಲೇ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಲ್ಲಿಸುತ್ತಿದ್ದೇವೆ.
> **– ಎಸ್.ವಿನೋದ್ ಜೈನ್, ಪಿಂಜರಾಪೋಲ್ ಕಾರ್ಯದರ್ಶಿ ಹಾಗೂ ಜೈನ ಸಮುದಾಯ ಪ್ರತಿನಿಧಿ**

> "**ಪಾರಿವಾಳಗಳಿಗೆ ಯಥೇಚ್ಛವಾಗಿ ಆಹಾರ ನೀಡುತ್ತಿರುವುದರಿಂದ ಅವುಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ಅವುಗಳು ಅರಮನೆ ಸೇರಿದಂತೆ ವಿವಿಧ ಪಾರಂಪರಿಕ ಕಟ್ಟಡಗಳನ್ನೇ ಆಶ್ರಯಿಸಿವೆ. ಇದರಿಂದ ಪಾರಿಗಳ ಪಿಕ್ಕೆಗಳು ಪಾರಂಪರಿಕ ಕಟ್ಟಡಗಳನ್ನು ಹಾಳು ಮಾಡುತ್ತಿವೆ. ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಲ್ಲಿಸುವಂತೆ ಹಲವು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಅಧಿಕಾರಿಗಳಲ್ಲಿ ಇಚ್ಛಾಸಕ್ತಿ ಇಲ್ಲದಂತೆ ಕಂಡು ಬರುತ್ತಿದೆ. ಧಾರ್ಮಿಕ ಹೆಸರಲ್ಲಿ ಪರಿವಾಳಗಳಿಗೆ ಆಹಾರ ಹಾಕುವುದನ್ನು ನಿಲ್ಲಿಸಬೇಕು. ಅಧಿಕಾರಿಗಳು ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಷೇಧಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ.**
> **–ಆರ್.ರಘು ಕೌಟಿಲ್ಯ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ**

> "**ಕುಕ್ಕರಹಳ್ಳಿ ಕೆರೆ ಆವರಣದಲ್ಲೂ ಪ್ರತಿದಿನ ಬೆಳಗ್ಗೆ ಕೆಲವರು ಬಂದು ಪಾರಿವಾಳಗಳಿಗೆ ಕಾಳು ಹಾಕುತ್ತಿದ್ದಾರೆ. ಇದರಿಂದ ಅಲ್ಲಿ ಪಾರಿವಾಳ ಸಂಖ್ಯೆ ಹೆಚ್ಚಾಗುತ್ತಿದೆ. ತನ್ನದೇ ಆದ ಜೀವ ವೈವಿಧ್ಯತೆ ಇರುವ ಕುಕ್ಕರಹಳ್ಳಿ ಕೆರೆ ಪರಿಸರದಲ್ಲಿರುವ ಇನ್ನಿತರ ಪಕ್ಷಿ ಸಂಕುಲದ ಮೇಲೆ ಪಾರಿವಾಳಗಳು ದುಷ್ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ನೈಸರ್ಗಿಕ ವಾತಾವರಣದಲ್ಲಿರುವ ಪಕ್ಷಿಗಳ ಸಂಕುಲ ರಕ್ಷಣೆಗೆ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಷೇಧಿಸಬೇಕು ಎಂದು ಪರಿಸರ ಪ್ರೇಮಿಗಳು ಒತ್ತಾಯಿಸಿದ್ದಾರೆ.**

ದಸರಾ ಸಂದರ್ಭದಲ್ಲಿ ಪುಸ್ತಕ ಪ್ರೇಮಿಗಳಿಗೆ ಬಂಪರ್ ಆಫರ್

ರಿಯಾಯ್ತಿಯಲ್ಲಿ ಪುಸ್ತಕ ಖರೀದಿ; ನೆಚ್ಚಿನ ಸಾಹಿತಿಯೊಂದಿಗೆ ಸೆಲ್ಫಿಗೆ ಅವಕಾಶ

ಮೈಸೂರು, ಸೆ.22(ಎಂಕೆ)–ಗಣ್ಯ ಸಾಹಿತಿಗಳೊಂದಿಗೆ ಸೆಲ್ಫಿಗೊಂದು ಸ್ಮೈಲ್ ಕೊಟ್ಟು, ಮನಸ್ಸಿಗೆ ಮುದ ನೀಡುವ ಸುಗಮ ಸಂಗೀತದ ಆಲಾಪನೆಯೊಂದಿಗೆ ನೆಚ್ಚಿನ ಪುಸ್ತಕಗಳನ್ನು ಭರ್ಜರಿ ರಿಯಾಯಿತಿ ದರದಲ್ಲಿ ಖರೀದಿಸುವ ಸದವಕಾಶ...!

ಮೈಸೂರು ದಸರಾ ಮಹೋತ್ಸವದಲ್ಲಿ ಪುಸ್ತಕ ಪ್ರೇಮಿಗಳ ನೆಚ್ಚಿನ ತಾಣವಾಗಿ ರೂಪುಗೊಳ್ಳುವ 'ದಸರಾ ಪುಸ್ತಕ ಮೇಳ' ದಲ್ಲಿ ಓದುಗರನ್ನು ಸೆಳೆಯಲು, ಯುವಕ–ಯುವತಿಯರಲ್ಲಿ ಓದುವ ಹವ್ಯಾಸ ರೂಢಿಸಲು ಹಲವು ವಿಶೇಷತೆಗಳ ನಡುವೆ ಕಲೆ, ಸಾಹಿತ್ಯ, ಮನರಂಜನೆ, ಹಾಸ್ಯ ಚಟಾಕಿಗಳು, ಕತೆ, ಕವನ, ಕಾದಂಬರಿ, ಸಾಧಕರು ಸಾಧನಾ ಸೇರಿದಂತೆ ಹತ್ತು–ಹಲವು ವಿಚಾರಗಳ ಜನಪ್ರಿಯ ಪುಸ್ತಕಗಳ ಪ್ರದರ್ಶನ, ಮಾರಾಟಕ್ಕೆ ಪೂರ್ವ ತಯಾರಿ ನಡೆದಿದೆ.

ಕೊರೊನಾದಿಂದ 2 ವರ್ಷ ಓದುಗರಿಂದ ಮರೆಯಾಗಿದ್ದ ದಸರಾ ಪುಸ್ತಕ ಮೇಳ, ಮತ್ತೆ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದು, ಓದುಗರಿಗಾಗಿ ಅತ್ಯುತ್ತಮ ಪುಸ್ತಕಗಳನ್ನು ನೀಡಲು ಸಿದ್ಧವಾಗುತ್ತಿದೆ. ಅದರಲ್ಲೂ ಗಣ್ಯ ಸಾಹಿತಿಗಳೊಂದಿಗೆ ಸಂಜೆ ಸಮಯ ಕಳೆಯುತ್ತಾ ಪುಸ್ತಕ ಖರೀದಿಸುವ ಅನುಭವವೇ ವಿಶೇಷ.

ಸೆಲ್ಫಿ ಜೊತೆ ಸಂಗೀತ: ದಸರಾ ಪುಸ್ತಕ ಮೇಳಕ್ಕೆ ಯುವ ಸಮೂಹವನ್ನು ಸೆಳೆಯುವ ಸದುದ್ದೇಶದಿಂದ ಕಳೆದ ವರ್ಷದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಈ ವರ್ಷವೂ ಪ್ರತಿನಿತ್ಯ ಸಂಜೆ ವೇಳೆ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಮುಂದುವರೆಯಲಿದೆ. ಹಾಗೆಯೇ ಸೆಲ್ಫಿ ವಿತ್ ಸಾಹಿತಿ ಸೆಲ್ಫಿ ಸ್ಟಾಟ್‌ನಲ್ಲಿ ನಿತ್ಯವೂ ಸಾಹಿತಿಗಳೊಂದಿಗೆ ಫೋಟೊ ಕ್ಲಿಕ್ಕಿಸಿಕೊಂಡು ಬರವಣಿಗೆಯ ಅನುಭವ ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ.

50–60 ಮಳಿಗೆ: ದಸರಾ ಪುಸ್ತಕ ಮೇಳದಲ್ಲಿ ಈ ವರ್ಷ 50–60 ಮಳಿಗೆಗಳ ಸ್ಥಾಪನೆಗೆ ಸಿದ್ಧತೆ ನಡೆಸಲಾಗಿದೆ. ಈ ಸಂಬಂಧ ಈಗಾಗಲೇ ಪ್ರಕಾಶಕರನ್ನು ಸಂಪರ್ಕಿಸುವ ಕಾರ್ಯ ನಡೆಯುತ್ತಿದೆ. ಎಲ್ಲಾ ಮಳಿಗೆಗಳಲ್ಲಿಯೂ ಸುಪ್ರಸಿದ್ಧ ಸಾಹಿತಿಗಳ ಜನಪ್ರಿಯ ಕೃತಿಗಳು, ಕಥೆ, ಕವನ, ಕಾದಂಬರಿ ಪುಸ್ತಕಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕಿರಣ್ ಸಿಂಗ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಭರ್ಜರಿ ರಿಯಾಯ್ತಿ: ಮೇಳದಲ್ಲಿ ಖರೀದಿಸುವ ಎಲ್ಲಾ ಪುಸ್ತಕಗಳ ಮೇಲೂ ಶೇ.15ರಿಂದ 25ರವರೆಗಿನ ಭರ್ಜರಿ ರಿಯಾಯ್ತಿ ನೀಡಲಾಗುವುದು. 5 ವರ್ಷಕ್ಕಿಂತ ಹಳೆಯ ಪುಸ್ತಕಗಳಿಗೆ ವಿಶೇಷ ರಿಯಾಯ್ತಿ ಇರಲಿದೆ. ಪುಸ್ತಕಗಳ ಖರೀದಿಸಲು ಆನ್‌ಲೈನ್ ಪೇಮೆಂಟ್ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಪ್ರಕಾಶಕರಿಗೆ ಸೂಚಿಸಲಾಗುವುದು ಎಂದರು.



ಕಳೆದ ವರ್ಷ ಓವಲ್ ಮೈದಾನದಲ್ಲಿ ನಡೆದ ದಸರಾ ಪುಸ್ತಕ ಮೇಳ

ಸ್ಥಳ ಬದಲಾವಣೆ ಸಾಧ್ಯತೆ...!
ಕಳೆದ ವರ್ಷ ಓವಲ್ ಮೈದಾನದಲ್ಲಿ ದಸರಾ ಪುಸ್ತಕ ಮೇಳ ಆಯೋಜಿಸಿದ್ದು, ಅದರ ಹಿಂದಿನ ವರ್ಷವೆಲ್ಲಾ ಕಾಡಾ ಕಚೇರಿ ಆವರಣದಲ್ಲಿ ನಡೆಸಲಾಗುತ್ತಿತ್ತು. ಈ ವರ್ಷ ಸುವಿಶಾಲ ಸ್ಥಳವನ್ನು ಗುರ್ತಿಸಲಾಗುತ್ತಿದೆ. ಅದ್ದರಿಂದ ಓವೆಲ್ ಮೈದಾನದ ಬದಲು ಸ್ಥಳ ಬದಲಾವಣೆಯಾಗುವ ಸಾಧ್ಯತೆ ಇದೆ.
– ಕಿರಣ್ ಸಿಂಗ್, ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ



ಚಾಣಕ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ...

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ, ಕೆಎಂಪಿಕೆ ಟ್ರಸ್ಟ್‌ನ 18ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್ ಅವರಿಗೆ ಚಾಣಕ್ಯ ಸೇವಾ ರತ್ನ ಪ್ರಶಸ್ತಿ ನೀಡಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ರಾಕೇಶ್ ಭಟ್, ಎಂ.ಆರ್.ಬಾಲಕೃಷ್ಣ, ನಾಗರಾಜ್, ಕಡಕೊಳ ಜಗದೀಶ್, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕರಾದ ಜಯಸಿಂಹ, ವಿಜಯ್ ಕುಮಾರ್, ಚಕ್ರಪಾಣಿ, ಲತಾ ಬಾಲಕೃಷ್ಣ, ನಾಗಶ್ರೀ ಸುಚೀಂದ್ರ, ವಿಜಯ ಮಂಜುನಾಥ್, ಗುರುರಾಜ್ ಇನ್ನಿತರರಿದ್ದರು.

ಕೂರ್ಗಳ್ಳಿ ಗ್ರಾಮದಲ್ಲಿ ವಿಶ್ವಕರ್ಮ ಜಯಂತಿ ಆಚರಣೆ



ಮೈಸೂರಿನ ಕೂರ್ಗಳ್ಳಿ ಗ್ರಾಮದಲ್ಲಿ ವಿಶ್ವಕರ್ಮ ಜಯಂತಿ ಆಚರಿಸಲಾಯಿತು. ಈ ವೇಳೆ ಮುಖಂಡರಾದ ನಾಗೇಶ್ ಆಚಾರ್, ಲೋಕೇಶ್ ಆಚಾರ್, ಬೋರೇಗೌಡ, ಕೂರ್ಗಳ್ಳಿ ರೇವಣ್ಣ, ಮಾದೇಶ್, ರವಿ, ಸೋಮಣ್ಣಾಚಾರ್, ಶ್ರೀನಿವಾಸ ಆಚಾರ್, ಜೈ ಕುಮಾರ್, ಶ್ರೀಕಂಠ, ಕೃಷ್ಣ, ರಮೇಶ್, ಮೂರ್ತಿ, ಪ್ರಜ್ವಲ್ ಇದ್ದರು.

ಸೆ.25, ಮೈಸೂರಲ್ಲಿ ವೆಂಡರ್ ಅಭಿವೃದ್ಧಿ, ಇ–ಟೆಂಡರ್ ಕಾರ್ಯಕ್ರಮ


ಮೈಸೂರು: ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿಗಳ ಸಂಘದ, ಪವರ್ ಗ್ರಿಡ್ ನಿಗಮ, ರಾಷ್ಟ್ರಿಯ ಎಸ್‌ಸಿ, ಎಸ್‌ಟಿ ಹಬ್‌ಗಳ ಸಂಯುಕ್ತಾಶ್ರಯದಲ್ಲಿ ವಿಶೇಷ ವೆಂಡರ್ ಅಭಿವೃದ್ಧಿ ಹಾಗೂ ಇ–ಟೆಂಡರ್ ಕಾರ್ಯಕ್ರಮವನ್ನು ಸೆ.25ರಂದು ಬೆಳಗ್ಗೆ 10 ಗಂಟೆಗೆ ನಗರದ ಹೋಟೆಲ್ ಕೋರಂನಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಸುಮಾರು 100 ಮಂದಿಗೆ ಅವಕಾಶವಿದೆ. ಹೆಚ್ಚಿನ ಮಾಹಿತಿಗೆ ದೂ. 80736 04655 ಅನ್ನು ಸಂಪರ್ಕಿಸಬಹುದು.

ಮೈಸೂರಲ್ಲಿ ಧಾರಾಕಾರ ಮಳೆ

ಮೈಸೂರು, ಸೆ.22 (ಆರ್‌ಕೆ) – ಭಾನುವಾರ ಸಂಜೆ ಮೈಸೂರಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಜನ ತತ್ತರಿಸುವಂತಾಯಿತು.

ಸಂಜೆ ಮೋಡ ಮುಸುಕಿದ ವಾತಾವರಣವಿತ್ತಾದರೂ ಸುಮಾರು 6.35 ರಿಂದ ಆರಂಭವಾದ ಮಳೆ ರಾತ್ರಿ 7.30 ಗಂಟೆವರೆಗೂ ನಿರಂತರವಾಗಿ ಸುರಿಯಿತು. ಪರಿಣಾಮ ಮೈಸೂರಿನ ರಸ್ತೆ, ಚರಂಡಿಗಳು ತುಂಬಿ ಹರಿದವಲ್ಲದೆ, ತಗ್ಗು ಪ್ರದೇಶಗಳಲ್ಲಿ ನೀರು ನಿಂತು ಜನ ಜೀವನ ಅಸ್ತವ್ಯಸ್ತವಾಗಿತ್ತು.

ದೇವರಾಜ ಮಾರುಕಟ್ಟೆ, ಮಕ್ಕಾಜಿ ಚೌಕ, ದೇವರಾಜ ಅರಸ್ ರಸ್ತೆ ಸೇರಿದಂತೆ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಮಳೆಯಿಂದಾಗಿ ಗ್ರಾಹಕರು ಪರದಾಡಿದರು. ಕಚೇರಿಗಳಿಂದ ಮನೆಗೆ ಹೋಗುವವರು, ಫುಟ್‌ಪಾತ್ ವ್ಯಾಪಾರಿಗಳು, ಚಾಟ್ಸ್ ಸೆಂಟರ್‌ಗಳಲ್ಲಿ ವ್ಯಾಪಾರವಿಲ್ಲದೆ ಬಣಗುಡುತ್ತಿದ್ದವು. ಪಾದಚಾರಿಗಳು ಮಳೆಯಿಂದ ರಕ್ಷಣೆ ಪಡೆಯಲು ಕಟ್ಟಡ, ಮರದ ಕೆಳಗೆ ಆಶ್ರಯ ಪಡೆದರು. ದಸರಾ ಕಾಮಗಾರಿಗಳಿಗೂ ಮಳೆ ಅಡ್ಡಿಯಾಯಿತು. ಮಂಜುನಾಥಪುರ, ಮೇದರ ಬ್ಲಾಕ್, ಓಲ್ಡ್ ಆರ್‌ಎಂಸಿ, ಬಿಎಂಶ್ರೀ ನಗರ, ಮಂಡಿ ಮೊಹಲ್ಲಾ, ಕೆಸರೆ, ಕುರಿಮಂಡಿ, ಭಾರತ್‌ನಗರ, ಗಾಯತ್ರಿಪುರಂ, ಗುಂಡೂರಾವ್ ನಗರ ಸೇರಿದಂತೆ ಮೈಸೂರು ನಗರದಾದ್ಯಂತ ತಗ್ಗು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿ ಅವಾಂತರ ಉಂಟಾಗಿತ್ತು. ಗಾಳಿ, ಮಿಂಚು, ಗುಡುಗಿಲ್ಲದ ಕಾರಣ ಯಾವುದೇ ಅಪಾಯ ಸಂಭವಿಸಿದ ಬಗ್ಗೆ ವರದಿಯಾಗಿಲ್ಲ.



ಮೈಸೂರು ಮಿತ್ರ ಸೋಮವಾರ 23 ಸೆಪ್ಟೆಂಬರ್ 2024

ಈ ಬಾರಿ ವಿಜೃಂಭಣೆಯ ಮಡಿಕೇರಿ ದಸರಾ

ದಸರಾ ಕಚೇರಿ ಉದ್ಘಾಟಿಸಿ ಶಾಸಕ ಡಾ.ಮಂತರ್‌ಗೌಡ ಮಾಹಿತಿ

ಮಡಿಕೇರಿ, ಸೆ.22–ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾ ನಾಡ ಹಬ್ಬವನ್ನು ಈ ಬಾರಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಶಾಸಕ ಡಾ.ಮಂತರ್‌ಗೌಡ ಹೇಳಿದರು.

ನಗರಸಭಾ ಕಟ್ಟಡದಲ್ಲಿ ಭಾನುವಾರ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ಮಡಿಕೇರಿ ದಸರಾ ಕಚೇರಿಯನ್ನು ಅಧಿಕೃತವಾಗಿ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದಿಂದ ಮಡಿಕೇರಿ ದಸರಾ ಆಚರಣೆಗೆ ಹೆಚ್ಚು ಅನುದಾನ ದೊರಕುವ ನಿರೀಕ್ಷೆಯಿದೆ. ಮಕ್ಕಳ ದಸರಾ, ಮಹಿಳಾ ದಸರಾ, ಜಾನಪದ ಮತ್ತು ಯುವ ದಸರಾದೊಂದಿಗೆ ಈ ಬಾರಿ ಕಾಫಿ ನಾಡು ಜಿಲ್ಲೆಯನ್ನು ಪ್ರತಿಬಿಂಬಿಸುವ ಕಾಫಿ ದಸರಾವನ್ನೂ ಆಯೋಜಿಸಲಾಗಿದೆ. ಕಾಫಿ ಕೃಷಿಕರಿಂದ ಇದಕ್ಕೆ ಉತ್ತಮ ಸ್ಪಂದನ ಕೂಡ ದೊರಕಿದೆ ಎಂದು ಹೇಳಿದರು.



ನಗರಸಭಾ ಕಟ್ಟಡದಲ್ಲಿ ಶಾಸಕ ಡಾ.ಮಂತರ್‌ಗೌಡ ಪೂಜೆ ಸಲ್ಲಿಸುವ ಮೂಲಕ ಮಡಿಕೇರಿ ದಸರಾ ಕಚೇರಿ ಉದ್ಘಾಟಿಸಿದರು.

ಇದೇ ವೇಳೆ ಶ್ರೀಕೃಷ್ಣ ಉಪಾಧ್ಯಾಯ ಅವರು ಗಣಪತಿ ಮತ್ತು ದುರ್ಗಾ ಪೂಜಾ ಕೈಂಕರ್ಯ ನೆರವೇರಿಸಿ ಶುಭ ಹಾರೈಸಿದರು. ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಬಿ.ವೈ ರಾಜೇಶ್, ಖಜಾಂಚಿ ಅರುಣ್ ಶೆಟ್ಟಿ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಎಚ್.ಟಿ.ಅನಿಲ್, ದಶ ಮಂಟಪ ಸಮಿತಿ ಅಧ್ಯಕ್ಷ ಜಗದೀಶ್, ನಗರ ಸಭೆ ಪೌರಾಯುಕ್ತ ರಮೇಶ್, ಸದಸ್ಯರಾದ ಅನಿತಾ ಪೂವಯ್ಯ, ಸವಿತಾ ರಾಕೇಶ್, ಮಹೇಶ್ ಜೈನಿ, ಶ್ವೇತಾ ಪ್ರಶಾಂತ್, ಸಬಿತಾ, ಅಮೀನ್ ಮೊಯಿಸಿನ್, ಶ್ವೇತಾ, ಮನ್ಸೂರ್, ದಸರಾ ಸಮಿತಿ ಪ್ರಮುಖರಾದ ಬಿ.ಎಂ.ರಾಜೇಶ್, ಎ.ಸಿ.ದೇವಯ್ಯ, ಪಿ.ಡಿ.ಪೊನ್ನಪ್ಪ, ವೀಣಾಕ್ಷಿ, ಮೀನಾಜ್, ತೆನ್ನೀರ ಮೈನಾ, ದಸರಾ ಉಪ ಸಮಿತಿಗಳ ಅಧ್ಯಕ್ಷರು, ಸದಸ್ಯರು ಹಾಗೂ ನಗರಸಭೆ ಅಧಿಕಾರಿಗಳು ಹಾಜರಿದ್ದರು.

> ದಶಮಂಟಪಗಳ ಶೋಭಾ ಯಾತ್ರೆಯೊಂದಿಗೆ 9 ದಿನ ಮಡಿಕೇರಿ ನಗರದಲ್ಲಿ ವಿಜೃಂಭಣೆಯ ದಸರಾ ಉತ್ಸವ ಆಯೋಜನೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ.
> –ಡಾ.ಮಂತರ್‌ಗೌಡ, ಶಾಸಕ

ದಸರಾದೊಳಗೆ ಕಾಮಗಾರಿ ಪೂರ್ಣಗೊಳಿಸಿ




ಮಡಿಕೇರಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಾ.ಮಂತರ್‌ಗೌಡ ಚಾಲನೆ ನೀಡಿದರು.

ಮಡಿಕೇರಿ, ಸೆ.22–ನಗರಸಭೆ ವಿವಿಧ ಬಡಾವಣೆಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ದಸರಾ ಹಬ್ಬದೊಳಗೆ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಶಾಸಕ ಡಾ.ಮಂತರ್‌ಗೌಡ ಸೂಚನೆ ನೀಡಿದರು.

ಇಂದಿರಾ ನಗರ, ಶ್ರೀ ಕೋದಂಡ ರಾಮ ದೇವಾಲಯ, ಭಗವತಿ ನಗರ ಬಳಿಯ ಅಬ್ಬಿಫಾಲ್ಸ್ ರಸ್ತೆ ಸೇರಿದಂತೆ ವಿವಿಧ ಬಡಾವಣೆಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ, ಗೌಳಿಬೀದಿ ಸೇರಿದಂತೆ ವಿವಿಧೆಡೆ ಅಪೂರ್ಣಗೊಂಡಿರುವ ರಸ್ತೆ ಮತ್ತು ಚರಂಡಿ ಕಾಮಗಾರಿ ಪರಿಶೀಲಿಸಿ ಮಾತನಾಡಿದ ಅವರು, ದಸರಾ ಸಮೀಪಿಸುತ್ತಿದೆ ಯಾವುದೇ ಕಾರಣಕ್ಕೂ ಕಾಮಗಾರಿ ವಿಳಂಬವಾಗಬಾರದು. ಗುಣಮಟ್ಟದೊಂದಿಗೆ ಶೀಘ್ರವಾಗಿ ಪೂರ್ಣಗೊಳಿಸಬೇಕು. ನಗರದ ರಸ್ತೆಗಳು ಉತ್ತಮ ಸ್ಥಿತಿಯಲ್ಲಿರಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಇದೇ ಸಂದರ್ಭ ಶಾಸಕರು ನಗರಕ್ಕೆ ಕುಡಿಯುವ ನೀರು ಸರಬರಾಜು ಪಂಪ್ ಹೌಸ್ ಮೋಟಾರ್ ಹಾಗೂ ತ್ಯಾಜ್ಯ ವಿಲೇವಾರಿಯ ಎರಡು ನೂತನ ವಾಹನಗಳಿಗೆ ಚಾಲನೆ ನೀಡಿದರು. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಬಿ.ವೈ.ರಾಜೇಶ್, ಸದಸ್ಯರಾದ ಆರ್.ಪಿ.ಚಂದ್ರಶೇಖರ್, ಮಿನಾಜ್ ಪ್ರವೀಣ್, ನಗರಸಭೆ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ, ಮಾಜಿ ಉಪಾಧ್ಯಕ್ಷೆ ಸವಿತಾ ರಾಕೇಶ್, ಪೌರಾಯುಕ್ತ ಹೆಚ್.ಆರ್. ರಮೇಶ್, ನಗರ ಕಾಂಗ್ರೆಸ್ ಉಪಾಧ್ಯಕ್ಷ ಪ್ರಕಾಶ್ ಆಚಾರ್ಯ ಮತ್ತಿತರರು ಹಾಜರಿದ್ದರು.

ಶೋಭಾಯಾತ್ರೆ ಮೂಲಕ ಗಣೇಶೋತ್ಸವಕ್ಕೆ ತೆರೆ



ಮಡಿಕೇರಿಯಲ್ಲಿ ಗಮನ ಸೆಳೆದ ಗಣೇಶೋತ್ಸವದ ಶೋಭಾಯಾತ್ರೆ

ಮಡಿಕೇರಿ: ನಗರದ ಶಾಂತಿನಿಕೇತನ ಯುವಕ ಸಂಘದ 46ನೇ ವರ್ಷದ ಗಣೇಶೋತ್ಸವಕ್ಕೆ ಶೋಭಾಯಾತ್ರೆ ಮೂಲಕ ತೆರೆ ಬಿದ್ದಿತು.

ಲೋಕ ಕಲ್ಯಾಣಕ್ಕಾಗಿ ಮಯೂರೇಶನಿಂದ ಸಿಂಧು ದೈತ್ಯ ರಾಜನ ಸಂಹಾರ ಎಂಬ ಕಥಾ ವಸ್ತುವಿನ ವಿದ್ಯುತ್ ದೀಪಲಂಕೃತ ಮಂಟಪದ ಶೋಭಾಯಾತ್ರೆ ವಿಜೃಂಭಿಸಿತು. ಶಬ್ಧ ಮತ್ತು ಬೆಳಕಿನ ಆಕರ್ಷಣೆ, ಬೃಹತ್ ಗಾತ್ರದ ದೃಶ್ಯ ಮೂರ್ತಿಗಳ ಚಲನವಲನ, ಆಕರ್ಷಕ ವೇದಿಕೆಯ ವಿನ್ಯಾಸ, ಕಥಾವಸ್ತುವನ್ನು ಪ್ರಸ್ತುತಪಡಿಸಿದ ರೀತಿ ಸಾವಿರಾರು ವೀಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

ಶಾಂತಿನಿಕೇತನ ಯುವಕ ಸಂಘದ ಅಧ್ಯಕ್ಷ ಕೆ.ಹೆಚ್.ಚೇತನ್ ನೇತೃತ್ವದಲ್ಲಿ ಸಂಘದ ಸದಸ್ಯರು ಹಾಗೂ ತಾಂತ್ರಿಕ ವರ್ಗ ಶ್ರಮವಹಿಸಿ ಕಾರ್ಯನಿರ್ವಹಿಸಿ ನಗರದ ಜನತೆ ಮೆಚ್ಚುಗೆಗೆ ಪಾತ್ರರಾದರು. ಶಿಸ್ತುಬದ್ಧ ಶೋಭಾಯಾತ್ರೆಯ ಮೂಲಕ ಇತರರಿಗೆ ಮಾದರಿಯಾದರು. ಮಹಾ ಪೂಜೆ ನಂತರ ನಗರದಲ್ಲಿ ಮಹಾಗಣಪತಿ ಮೂರ್ತಿ ಶೋಭಾಯಾತ್ರೆ ನಡೆಸಲಾಯಿತು.

ನೇಣು ಬಿಗಿದುಕೊಂಡು ಮಹಿಳೆ ಆತ್ಮಹತ್ಯೆ



ಬಬಿತಾ

ನಾಪೋಕ್ಲು: ಮನೆಯಲ್ಲೇ ಮಹಿಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಪಾಲೂರು ಗ್ರಾಮದಲ್ಲಿ ಶನಿವಾರ ನಡೆದಿದೆ. ಗ್ರಾಮದ ನಿವಾಸಿ ಲೋಕೇಶ್ ಅವರ ಪತ್ನಿ ಬಬಿತಾ (ಮಂಜುಳಾ(36) ಆತ್ಮಹತ್ಯೆ ಮಾಡಿಕೊಂಡ ಮಹಿಳೆ.

ಈಕೆ ಪತಿ ಲೋಕೇಶ್, ಅತ್ತೆ ಹಾಗೂ ತನ್ನ ಇಬ್ಬರು ಪುತ್ರರೊಂದಿಗೆ ಪಾಲೂರು ಗ್ರಾಮದಲ್ಲಿ ವಾಸವಾಗಿದ್ದು, ಮಧ್ಯಾಹ್ನ ಯಾರು ಇಲ್ಲದ ಸಂದರ್ಭ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತನ್ನ ಪತ್ನಿ ಬಬಿತಾಗೆ ಅನಾರೋಗ್ಯದ ಸಮಸ್ಯೆ ಇತ್ತು ಎಂದು ಪತಿ ಲೋಕೇಶ್ ನಾಪೋಕ್ಲು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ದುಷ್ಚಟಗಳಿಗೆ ಬಲಿಯಾಗದಂತೆ ಎಚ್ಚರ ವಹಿಸಿ



ವಿರಾಜಪೇಟೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಮಾದಕವಸ್ತು ವಿರೋಧಿ ಕಾರ್ಯಕ್ರಮದಲ್ಲಿ ಬೆಂಗಳೂರಿನ ರಕ್ಷ ಫೌಂಡೇಷನ್ ವ್ಯಸನ ಮುಕ್ತ ಕ್ಷೇತ್ರದ ಪದವೀಧರ ಭೀಮೇಶ್‌ಗೌಡ ಮಾತನಾಡಿದರು.

ವಿರಾಜಪೇಟೆ, ಸೆ.22–ವಿದ್ಯಾರ್ಥಿಗಳು ದುಷ್ಚಟಗಳಿಗೆ ಬಲಿಯಾಗದಂತೆ ಪೋಷಕರು ಎಚ್ಚರ ವಹಿಸಬೇಕು ಎಂದು ಬೆಂಗಳೂರಿನ ರಕ್ಷ ಫೌಂಡೇಷನ್ ವ್ಯಸನ ಮುಕ್ತ ಕ್ಷೇತ್ರದ ಪದವೀಧರ ಭೀಮೇಶ್ ಗೌಡ ಹೇಳಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲಿ ರೋಟರಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಮಾದಕ ವಸ್ತು ವಿರೋಧಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಗಾಂಜಾ ಹಾಗೂ ಮದ್ಯಪಾನದಿಂದ ದೂರವಿದ್ದು ಭವಿಷ್ಯದ ಕಡೆಗೆ ಗಮನಹರಿಸಬೇಕು. ಮದ್ಯಪಾನ ಮನುಷ್ಯನ ಬುದ್ಧಿ ಶಕ್ತಿಯನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ದುಷ್ಚಟಗಳಿಂದ ದೂರವಿದ್ದು, ಶಿಕ್ಷಣದ ಕಡೆಗೆ ಗಮನಹರಿಸಿ ದೇಶದ ಉತ್ತಮ ಪ್ರಜೆಗಳಾಗಬೇಕು ಎಂದರು.

ವಿರಾಜಪೇಟೆ ರೋಟರಿ ಸಂಸ್ಥೆಯ ಅಧ್ಯಕ್ಷ ಪ್ರಣವ್ ಚಿತ್ರಭಾನು ಮಾತನಾಡಿ, ವಿದ್ಯಾಥಿಗಳ ಜೀವನ ಮಹತ್ವವಾಗಿದೆ. ಯಾವುದೇ ಕಾರಣಕ್ಕೂ ಮಾದಕ ವಸ್ತುಗಳನ್ನು ಸೇವಿಸಬಾರದು. ಮನಸ್ಸನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕು. ಮಕ್ಕಳು ವಿದ್ಯೆ ಕಲಿತು ಉನ್ನತ ಹುದ್ದೆ ಪಡೆಯುವಂತೆ ಪೋಷಕರು ಆಸೆಗಳನ್ನು ಇಟ್ಟುಕೊಳ್ಳುತ್ತಾರೆ. ಪೋಷಕರ ಆಸೆ ಈಡೇರಿಸುವುದು ವಿದ್ಯಾರ್ಥಿಗಳ ಕರ್ತವ್ಯ. ಆದ್ದರಿಂದ ಛಲದಿಂದ ಶಿಕ್ಷಣ ಕಲಿತು ತಮ್ಮ ಗುರಿಮುಟ್ಟುವಂತಾಗಬೇಕು ಎಂದು ತಿಳಿಸಿದರು.

ಮೈಸೂರಿನ ಸೆರೆನಿಟಿ ಹಾಗೂ ಮ್ಯಾನೇಜಿಂಗ್ ಟ್ರಸ್ಟ್‌ನ ವಕೀಲ ಬಿ.ಎಂ. ಶಶಿಕಿರಣ್ ಮಾತನಾಡಿ, ಜೀವನದಲ್ಲಿ ಸಾಧನೆ ಮುಖ್ಯ ವಿದ್ಯಾರ್ಥಿಗಳು ಪೋಷಕರು, ಗುರು–ಹಿರಿಯರಿಗೆ ಗೌರವ ನೀಡುವಂತಾಗಬೇಕು. ವ್ಯಸನದಿಂದ ಮುಕ್ತರಾಗಿ ಜವಾಬ್ದಾರಿಯುತ ಜೀವನ ನಡೆಸಲು ಹೆಚ್ಚಿನ ಶಿಕ್ಷಣ ಪಡೆಯಬೇಕು. ಆಗಮಾತ್ರ ನವಜೀವನ ಪ್ರಾರಂಭಿಸಲು ಸಾಧ್ಯ ಎಂದು ಹೇಳಿದರು.

ವಿರಾಜಪೇಟೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಎನ್.ಕೆ.ಜೋತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರೋಟರಿ ಸಂಸ್ಥೆ ಕಾರ್ಯದರ್ಶಿ ಬಿ.ಬಿ. ಮಾದಪ್ಪ ಹಾಗೂ ಬೆಂಗಳೂರಿನ ವಿನಯ್ ಮತ್ತಿತರರು ಉಪಸ್ಥಿತರಿದ್ದರು.

ಸಂಘದ ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡ್



ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘದ ವಾರ್ಷಿಕ ಸಭೆ ಅಧ್ಯಕ್ಷ ಸೂದನ ಎಸ್.ಈರಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು.

ಮಡಿಕೇರಿ: ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಅಧ್ಯಕ್ಷ ಸೂದನ ಎಸ್.ಈರಪ್ಪ ಅಧ್ಯಕ್ಷತೆಯಲ್ಲಿ ನಗರದ ಕೊಡವ ಸಮಾಜದಲ್ಲಿ ನಡೆಯಿತು.

ಸಭೆಯಲ್ಲಿ ಸೂದನ ಎಸ್.ಈರಪ್ಪ ಮಾತನಾಡಿ, ಸಂಘ 23,43,150 ರೂ. ವ್ಯಾಪರ ಹಾಗೂ 12,25,760 ರೂ. ನಿವ್ವಳ ಲಾಭ ಗಳಿಸಿದೆ. ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡ್ ನೀಡಲಾಗುತ್ತಿದೆ. ಕಳೆದ 39 ವರ್ಷಗಳಿಂದ ಸ್ಥಗಿತಗೊಂಡಿದ್ದ ಏಲಕ್ಕಿ ಖರೀದಿ ಮತ್ತು ಮುಂಗಡ ಠೇವಣಿ ವ್ಯವಸ್ಥೆಯನ್ನು ಕಳೆದ 2 ವರ್ಷಗಳಿಂದ ಆರಂಭಿಸಲಾಗಿದ್ದು, ಸಂಘದ ಸದಸ್ಯರು ಹಾಗೂ ಏಲಕ್ಕಿ ಬೆಳೆಗಾರರು ಇದರ ಸದುಪಯೋಗ ಮತ್ತು ಫಸಲಿಗೆ ಯೋಗ್ಯ ಬೆಲೆ ಪಡೆಯಬೇಕು ಎಂದು ತಿಳಿಸಿದರು.

ಎರಡು ವರ್ಷಗಳ ಹಿಂದೆ ಮಡಿಕೇರಿ ನಗರದಲ್ಲಿ ಆರಂಭವಾದ 'ಉತ್ಪತ್ತಿ' (ಸ್ಪೈಸಸ್) ಮಳಿಗೆ ರೈತರ ಹಾಗೂ ಗ್ರಾಹಕರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದೆ. ರೈತರಿಗೆ ನಾವು ಉತ್ತಮ ದರ ನೀಡಲಾಗುವುದು. ಗ್ರಾಹಕರಿಗೂ ತೃಪ್ತಿಯಾಗುವಂತೆ ಸಾಂಬಾರ ಸಾಮಗ್ರಿಗಳನ್ನು ಪೂರೈಸಲಾಗುವುದು. ಮುಂದಿನ ಸಭೆಯಲ್ಲಿ ಅತೀ ಹೆಚ್ಚು ವ್ಯವಹಾರ ನಡೆಸಿದ ಮೂವರು ಸದಸ್ಯರನ್ನು ಸಂಘದ ವತಿಯಿಂದ ಸನ್ಮಾನಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಸಂಘದ ನಿರ್ದೇಶಕರಾದ ಕೋಳುಮುಡಿಯನ ಆರ್.ಅನಂತ ಕುಮಾರ್, ಮಂದ್ರೀರ ಜಿ.ಮೋಹನ್ ದಾಸ್, ಬಿ.ಈ.ಬೋಪಯ್ಯ, ಶಿವಾಚಾರರ ಎಸ್.ಸುರೇಶ್, ಬಿ.ಸಿ.ಚೆನ್ನಪ್ಪ, ಕುಂಭುಗೌಡನ ವಿನೋದ ಕುಮಾರ್, ಸಿ.ಪಿ. ವಿಜಯ್ ಕುಮಾರ್, ಪೇರಿಯನ ಕೆ. ಉದಯಕುಮಾರ್, ಪೆಮ್ಮಂಡ ಟಿ.ಬೋಪಣ್ಣ, ಪರಿವಾರ ಎಸ್.ಕವಿತಾ, ಸದಸ್ಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಜಿಲ್ಲಾಡಳಿತ ಭವನ ಎದುರು ಬಸವೇಶ್ವರ ಪ್ರತಿಮೆ ಸ್ಥಾಪನೆ

ಉದ್ಘಾಟನೆ ದಿನಾಂಕ ನಿಗದಿಗೆ ಜಿಲ್ಲಾಡಳಿತ ಸಿದ್ಧತೆ

ಚಾಮರಾಜನಗರ, ಸೆ.22–ನಗರದ ಜಿಲ್ಲಾಡಳಿತ ಭವನ ಆವರಣದಲ್ಲಿ ಕರ್ನಾಟಕ ಸಾಂಸ್ಕೃತಿಕ ನಾಯಕ ಬಸವೇಶ್ವರರ ಪ್ರತಿಮೆ ಸ್ಥಾಪಿಸಲಾಗಿದೆ.

ಆದರೆ, ಕಾಮಗಾರಿ ಸಂಪೂರ್ಣಗೊಳ್ಳಬೇಕಿರುವ ಹಿನ್ನೆಲೆಯಲ್ಲಿ ಪ್ರತಿಮೆ ಉದ್ಘಾಟನೆಗೆ ದಿನಾಂಕ ಇನ್ನೂ ನಿಗದಿಗೊಳಿಸಿಲ್ಲ. ಈ ಸಂಬಂಧ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಇಲಾಖೆ ಸಿದ್ಧತೆ ಕೈಗೊಳ್ಳಲಾಗುತ್ತಿದ್ದು, ಶೀಘ್ರ ಅಶ್ವಾರೂಢ ಬಸವೇಶ್ವರರ ಪ್ರತಿಮೆ ಉದ್ಘಾಟನೆಯಾಗಲಿದೆ.

ಸ್ಥಳ ನಿಗದಿ ಗೊಂದಲಕ್ಕೆ ತೆರೆ: ಬಸವೇಶ್ವರರ ಪ್ರತಿಮೆ ಸ್ಥಾಪನೆಯಿಂದ ಸ್ಥಳ ನಿಗದಿ ಗೊಂದಲಕ್ಕೆ ತೆರೆ ಬಿದ್ದಿದೆ. ಮೊದಲು ಜಿಲ್ಲಾಡಳಿತ ಭವನದ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಪಕ್ಕದಲ್ಲೇ ಬಸವೇಶ್ವರರ ಪ್ರತಿಮೆ ಸ್ಥಾಪಿಸಲಾಗುವುದು ಎನ್ನಲಾಗುತ್ತಿತ್ತು. ನಂತರ ಡಾ.ರಾಜ್‌ಕುಮಾರ್ ಜಿಲ್ಲಾ ಕಲಾಮಂದಿರದ ಮುಂಭಾಗ ಸ್ಥಾಪಿಸುವಂತೆ ಕೆಲವರು ಸಲಹೆ ನೀಡಿದ್ದರು.

ಈ ಸಂಬಂಧ ಅಂದು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ ಭೂಮಿಪೂಜೆ ನೆರವೇರಿಸಿದ್ದರು. ಆದರೆ, ಅಂತಿಮವಾಗಿ ಪ್ರತಿಮೆಯನ್ನು ಜಿಲ್ಲಾಡಳಿತ ಭವನದ ಬಲಭಾಗದ ಉದ್ಯಾನ ಆವರಣದಲ್ಲಿ ಸ್ಥಾಪಿಸಲಾಗಿದೆ.

ಅಶ್ವಾರೂಢ ಆಶೀರ್ವಾದ ವಿನ್ಯಾಸ: ಜಿಲ್ಲಾಡಳಿತ ಭವನದ ಬಲಭಾಗ ಆವರಣದಲ್ಲಿ ಪ್ರತಿಮೆ ಸ್ಥಾಪಿಸಲಾಗಿದ್ದು, ಸುಮಾರು 9 ಅಡಿ ಎತ್ತರದ ಬಸವೇಶ್ವರರ ಪ್ರತಿಮೆ ಆಕರ್ಷಣೀಯವಾಗಿದೆ. ಕುದುರೆ ಮೇಲೆ ಸವಾರಿಯೊಂದಿಗೆ ಆಶೀರ್ವಾದ ಮಾಡುತ್ತಿರುವ ವಿನ್ಯಾಸದಲ್ಲಿ ಬಸವೇಶ್ವರರ ಪ್ರತಿಮೆ ಸ್ಥಾಪಿಸಲಾಗಿದ್ದು, ಪ್ರತಿಮೆಯನ್ನು ಮಹಾರಾಷ್ಟ್ರದಲ್ಲಿ ನಿರ್ಮಿಸಲಾಗಿದೆ.

ಜಿಲ್ಲಾಡಳಿತ ಭವನ ಮುಂಭಾಗ ಬಸವೇಶ್ವರರ ಪ್ರತಿಮೆ ನಿರ್ಮಾಣ ಸಂಬಂಧ ವೀರಶೈವ ಸಮುದಾಯ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು ಹಾಗೂ ಕೆಲವು ಸಂಘ–ಸಂಸ್ಥೆಗಳು ಬೇಡಿಕೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ 2011ರಲ್ಲಿ ಅಂದಿನ ಅಬಕಾರಿ ಸಚಿವರಾಗಿದ್ದ ರೇಣುಕಾಚಾರ್ಯ ಪ್ರತಿಮೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ್ದರು.

ಜಿಲ್ಲೆಗೆ ಹೆಮ್ಮೆ: ಚಾಮರಾಜನಗರ ಜಿಲ್ಲಾಡಳಿತ ಭವನ ಮುಂಭಾಗದ ಆವರಣದಲ್ಲಿ 12ನೇ ಶತಮಾನದಲ್ಲಿ ಸಮಾನತೆ ಸಾರಿದ ಬಸವೇಶ್ವರರು ಹಾಗೂ ದೇಶಕ್ಕೆ ಸಂವಿಧಾನ ನೀಡಿದ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಮೆಗಳು ಇರುವುದು ಜಿಲ್ಲೆಗೆ ಹೆಮ್ಮೆಯ ವಿಚಾರವಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್ ತಿಳಿಸಿದರು.



ಜಿಲ್ಲಾಡಳಿತ ಭವನದ ಆವರಣದಲ್ಲಿ ಸಾಂಸ್ಕೃತಿಕ ನಾಯಕ ಬಸವೇಶ್ವರರು ಪ್ರತಿಮೆ ಸ್ಥಾಪನೆ ಮಾಡಿರುವುದು ಸಂತಸ ತಂದಿದೆ. ಶೀಘ್ರ ಜಿಲ್ಲಾಡಳಿತದೊಂದಿಗೆ ಚರ್ಚೆ ನಡೆಸಿ, ಅಶ್ವಾರೋಢ ಬಸವೇಶ್ವರರ ಪ್ರತಿಮೆ ಉದ್ಘಾಟನೆಗೆ ದಿನಾಂಕ ನಿಗದಿಗೊಳಿಸಲಾಗುವುದು ಎಂದರು.

ಇಂದು ಪ್ರಶಸ್ತಿ ಪ್ರದಾನ

ಚಾಮರಾಜನಗರ, ಸೆ.22–ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಒಟ್ಟು 14 ಶಿಕ್ಷಕರು ಆಯ್ಕೆಯಾಗಿದ್ದು, ನಗರದ ಅಂಬೇಡ್ಕರ್ ಭವನದಲ್ಲಿ ಸೆ.23ರಂದು ನಡೆಯಲಿರುವ ಶಿಕ್ಷಕರ ದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಕಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಕೃಷ್ಣಮೂರ್ತಿ (ಚಾ.ನಗರದ ಸರ್ಕಾರಿ ಕಿ.ಪ್ರಾ ಶಾಲೆ), ಎಚ್.ಸಿ. ಮಮತಾ (ಗುಂಡ್ಲುಪೇಟೆ ತಾಲೂಕಿನ ಗರಗನಹಳ್ಳಿ), ಮಣಿ (ಹನೂರು ತಾಲೂಕಿನ ಹುಣಸೇಪಾಳ್ಯ), ಎಚ್.ಮಮತಾ (ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಅಗ್ರಹಾರ), ಹಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಸಿ.ಎಸ್.ಮಹದೇವಸ್ವಾಮಿ (ಚಾ.ನಗರ ತಾಲೂಕಿನ ಯಾನಗಳ್ಳಿ), ದೊಡ್ಡಬಸವಯ್ಯ (ಗುಂಡ್ಲುಪೇಟೆ ತಾಲೂಕಿನ ಬನ್ನಿತಾಳಪುರ), ಕೆ.ಗೋವಿಂದ (ಹನೂರು ತಾಲೂಕಿನ ಹೂಗ್ಯಂ), ಮುರುಳಿರಾಜು (ಕೊಳ್ಳೇಗಾಲದ ಮುಡಿಗುಂಡ), ಆರ್. ಸುರೇಶ್‌ಕುಮಾರ್ (ಯಳಂದೂರು ತಾಲೂಕಿನ ವೈ.ಕೆ.ಮೋಳೆ) ಹಾಗೂ ಪ್ರೌಢಶಾಲಾ ವಿಭಾಗದಲ್ಲಿ ಸಿ.ಸಿದ್ದರಾಜು (ಚಾ.ನಗರ ತಾಲೂಕಿನ ಆಲೂರು), ರಂಗೇಗೌಡ, (ಗುಂಡ್ಲುಪೇಟೆ ತಾಲೂಕಿನ ಅಣ್ಣೂರುಕೇರಿ), ಎಂ.ಶಾಂತರಾಜು (ಕೊಳ್ಳೇಗಾಲ), ಮಹೇಂದ್ರ (ಗೋಪಿನಾಥಂ), ಆರ್.ಗುರುಮೂರ್ತಿ (ಯಳಂದೂರು ತಾಲೂಕಿನ ಮೆಲ್ಲಹಳ್ಳಿ) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಟಗರಪುರ ಮೋಳೆಯಲ್ಲಿ 12 ಮೇಕೆ ಸಾವು



ಕೊಳ್ಳೇಗಾಲ ತಾಲೂಕಿನ ಟಗರಪುರ ಮೋಳೆಯಲ್ಲಿ ಮೃತಪಟ್ಟ ಮೇಕೆಗಳು.

ಕೊಳ್ಳೇಗಾಲ, ಸೆ.22–ವಿಷಯುಕ್ತ ಸೊಪ್ಪನ್ನು ತಿಂದು 12 ಮೇಕೆಗಳು ಮೃತಪಟ್ಟಿರುವ ಘಟನೆ ತಾಲೂಕಿನ ಟಗರಪುರ ಮೋಳೆ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಅಣ್ಣ ಸೋಮಣ್ಣ ಹಾಗೂ ತಂಗಿ ಶಾರದಾ ಅವರಿಗೆ ಸೇರಿದ ಮೇಕೆಗಳು ಮೃತಪಟ್ಟಿವೆ. ಸೋಮಣ್ಣ ಹಾಗೂ ಶಾರದಾ ಅವರು ಸುಮಾರು 50 ಮೇಕೆಗಳನ್ನು ಸಾಗಣಿಕೆ ಮಾಡಿಕೊಂಡು ಜೀವನ ನಡೆಸುತ್ತಿದ್ದು, ಈ ಪೈಕಿ 2 ಲಕ್ಷ ರೂ. ಬೆಲೆ ಬಾಳುವ 12 ಮೇಕೆಗಳು ಮೃಪಟ್ಟಿದ್ದು, ಮೂರು ಮೇಕೆಗಳು ತೀವ್ರ ಅಸ್ವಸ್ಥಗೊಂಡಿವೆ.

ಎಂದಿನಂತೆ ಮೇಕೆಗಳನ್ನು ಜಮೀನಿನಲ್ಲಿ ಮೇಯಿಸಿಕೊಂಡು ಸಂಜೆ ಮನೆಗೆ ಬರಲಾಗಿದೆ ಆದರೆ, ಮನೆಗೆ ಬಂದಾಗ ಮೇಕೆಗಳು ಮೃತಪಟ್ಟಿವೆ. ಈ ಬಡಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಛಲವಾದಿ ಮಹಾಸಭೆ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಹಾಗೂ ವಿವಿಧ ಸಂಘ–ಸಂಸ್ಥೆಗಳು ಆಗ್ರಹಿಸಿವೆ.

ದಾಸೋಹ ಪರಿಕಲ್ಪನೆಯಡಿ ಶಿಕ್ಷಣ ಸಂಸ್ಥೆ ಆರಂಭಿಸಿದ ರಾಜೇಂದ್ರ ಶ್ರೀ

ಚಾಮರಾಜನಗರ, ಸೆ.22–ಹನ್ನೆರಡನೇ ಶತಮಾನದ ವಚನಕಾರ ಬಸವಣ್ಣನವರ ಕಾಯಕ ಮತ್ತು ದಾಸೋಹ ಪರಿಕಲ್ಪನೆಯಿಂದ ರಾಜೇಂದ್ರ ಶ್ರೀಗಳು ಪ್ರೇರಿತರಾಗಿ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು ಎಂದು ಮೈಸೂರು ವಿಶ್ವವಿದ್ಯಾನಿಲಯ ಗಣಕ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಿ.ಎಸ್.ಗುರು ಹೇಳಿದರು.

ನಗರದ ಜೆಎಸ್‌ಎಸ್ ಬಾಲಕಿಯರ ಪ್ರೌಢಶಾಲಾವರಣದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ, ಆಸ್ಪತ್ರೆ ಸಹಯೋಗದಲ್ಲಿ ಸುತ್ತೂರು ಮಹಾಸಂಸ್ಥಾನದ ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮೀಜಿ ಅವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ನುಡಿನಮನ ಸಲ್ಲಿಸಿ ಮಾತನಾಡಿದ ಅವರು, ರಾಜೇಂದ್ರ ಶ್ರೀಗಳು ಹುಟ್ಟಿನಿಂದಲೇ ಬಾಲರಾಜೇಂದ್ರ ಸ್ವಾಮಿಯಾಗಿ ಪ್ರಸಿದ್ಧರಾದವರು. ವಿಜ್ಞಾನ ಮತ್ತು ತಂತ್ರಜ್ಞಾನವಿಲ್ಲದ ಕಾಲದಲ್ಲೇ ವಿವಿಧ ಭಾಷೆ ಪ್ರೌಢಿಮೆ ಗಳಿಸಿದ್ದರು. ಕಷ್ಟದ ಅವಧಿಯಲ್ಲಿ ಶಿಕ್ಷಣ ಮುನ್ನಡೆಸಿದರು. ಊರೂರಿನಲ್ಲಿ ದವಸ–ಧಾನ್ಯ ಸಂಗ್ರಹಿಸಿ, ವಿದ್ಯಾರ್ಥಿ ನಿಲಯ ಸ್ಥಾಪಿಸಿ, ವಿದ್ಯಾರ್ಥಿಗಳ ಹಸಿವನ್ನು ನೀಗಿಸಿದರು. ಜೊತೆಗೆ ಜ್ಞಾನದ ಹಸಿವು ನೀಗಿಸಲು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು ಎಂದರು.



ಚಾಮರಾಜನಗರದ ಜೆಎಸ್‌ಎಸ್ ಬಾಲಕಿಯರ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜೇಂದ್ರಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

50 ವರ್ಷಗಳಲ್ಲಿ ಜೆಎಸ್‌ಎಸ್ ಸಂಸ್ಥೆ ಹೆಮ್ಮರವಾಗಿ ಬೆಳೆದು, ಇಂದು ವಿದೇಶಗಳಲ್ಲೂ ಶಿಕ್ಷಣ ಸಂಸ್ಥೆ ತೆರೆದು ಛಾಪು ಮೂಡಿಸಿದೆ. ಇಂತಹ ಸಾಧನೆಗೆ ಕಾರಣರಾದವರು ರಾಜೇಂದ್ರ ಶ್ರೀಗಳು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದು ಸ್ಮರಿಸಿದರು.

ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಸಾಮಾನ್ಯ ಅಭಿವೃದ್ಧಿ ವಿಭಾಗದ ಪ್ರಭಾರ ನಿರ್ದೇಶಕ ಕೆ.ಎಲ್.ರೇವಣ್ಣಸ್ವಾಮಿ, ಚಾಮರಾಜನಗರ ವಿವಿ ಕುಲಪತಿ ಡಾ.ಎಂ.ಆರ್. ಗಂಗಾಧರ್, ನಗರಸಭೆ ಅಧ್ಯಕ್ಷ ಸುರೇಶ್, ಸದಸ್ಯರಾದ ಕುಮುದಾ, ಚಿನ್ನಮ್ಮ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಪ್ರಾಂಶುಪಾಲರಾದ ಮಹದೇವಸ್ವಾಮಿ, ದೇವರಾಜಮೂರ್ತಿ, ವಿನಯ್‌ಕುಮಾರ್, ಎಚ್.ಎಂ.ಉಮೇಶ್, ಬಸವಣ್ಣ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಪಿಆರ್‌ಓ ಆರ್.ಎಂ.ಸ್ವಾಮಿ, ಮುಖ್ಯ ಶಿಕ್ಷಕರು, ಸಹಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಪಲ್ಲಕ್ಕಿ ಉತ್ಸವ: ಇದೇ ವೇಳೆ ರಾಜೇಂದ್ರ ಶ್ರೀಗಳ ಜಯಂತಿ ಮಹೋತ್ಸವ ಅಂಗವಾಗಿ ರಾಜೇಂದ್ರ ಶ್ರೀಗಳ ಭಾವಚಿತ್ರದ ಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಉತ್ಸವಕ್ಕೆ ಜೆಎಸ್‌ಎಸ್ ಮಹಿಳಾ ಕಾಲೇಜಿನ ಆವರಣದಲ್ಲಿ ಮರಿಯಾಲ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಚಾಮರಾಜನಗರ ಮಠದ ಚನ್ನಬಸವ ಸ್ವಾಮೀಜಿ, ಹರವೆ ಮಠದ ಸರ್ಪಭೂಷಣ ಸ್ವಾಮೀಜಿ ಚಾಲನೆ ನೀಡಿದರು.

19 ಗ್ರಾಮಗಳಲ್ಲಿ ಉನ್ನತ ಗ್ರಾಮ ಅಭಿಯಾನ

ಚಾಮರಾಜನಗರ, ಸೆ.22–ಪರಿಶಿಷ್ಟ ಪಂಗಡದವರು ಶೇ.50ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಜಿಲ್ಲೆಯ 11 ಗ್ರಾಮಗಳಲ್ಲಿ ಪ್ರಧಾನಮಂತ್ರಿ ಜನ್‌ಜಾತೀಯ ಉನ್ನತ ಗ್ರಾಮ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಪರಿಶಿಷ್ಟ ಪಂಗಡದ ಬುಡಕಟ್ಟು ಸಮುದಾಯದ ಜನರ ಹಳ್ಳಿಗಳ ಸಮಗ್ರ ಅಭಿವೃದ್ಧಿಗಾಗಿ 17 ಇಲಾಖೆಗಳ ಸಹಯೋಗದೊಂದಿಗೆ 25 ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಕೇಂದ್ರ ಬುಡಕಟ್ಟು ಮಂತ್ರಾಲಯದ ವತಿಯಿಂದ ಪ್ರಧಾನಮಂತ್ರಿ ಜನ್‌ಜಾತೀಯ ಉನ್ನತ ಗ್ರಾಮ ಅಭಿಯಾನ ದೇಶಾದ್ಯಂತ ಜಾರಿಗೊಳಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಬೇಡಗುಳಿ, ಕಣ್ಣೆಗಾಲ, ಯಾನಗಹಳ್ಳಿ, ಮೇಲ್‌ಮಾಳ, ತೊಂಡವಾಡಿ, ಸೋಮನಪುರ, ಮದ್ದೂರು, ಅಗರ, ಬಿಳಿಗಿರಿರಂಗನಬೆಟ್ಟ, ಡಿ.ಕಂದಹಳ್ಳಿ, ಪಾಳ್ಯ ಗ್ರಾಮಗಳು ಆಯ್ಕೆಯಾಗಿವೆ. ಕೇಂದ್ರ ಸರ್ಕಾರದ ಆದೇಶದಂತೆ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಅಭಿಯಾನ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬನ್ನಿತಾಳಪುರ ವಿದ್ಯಾರ್ಥಿನಿಯರು ವಿಭಾಗ ಮಟ್ಟಕ್ಕೆ ಆಯ್ಕೆ...



ಗುಂಡ್ಲುಪೇಟೆ ತಾಲೂಕಿನ ಬನ್ನಿತಾಳಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಯರು ಚಾಮರಾಜನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಕಬ್ಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನಗಳಿಸಿ, ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಎಸ್‌ಡಿಎಂಸಿ ಅಧ್ಯಕ್ಷರು, ಮುಖ್ಯಶಿಕ್ಷಕರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಪ್ರೇಮಮ್ಮ ನಿಧನ



ಚಾಮರಾಜನಗರ, ಸೆ.22–ತಾಲೂಕಿನ ಕುರುಬರಹುಂಡಿ ಗ್ರಾಮದ ಉದ್ಯಮಿ ದಿ.ಮಂಚೇಗೌಡ ಅವರ ಪತ್ನಿ ಪ್ರೇಮಮ್ಮ (70) ಶನಿವಾರ ನಿಧನರಾದರು.

ಮೃತರು ಉದ್ಯ ಮಿಗಳಾದ ರವಿ, ನಾಗೇಶ್ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ. ಭಾನುವಾರ ಕುರುಬರ ಹುಂಡಿಯ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸೆ.25, ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ

ಗುಂಡ್ಲುಪೇಟೆ, ಸೆ.22–ತಾಲೂಕು ಆಡಳಿತದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆಯನ್ನು ಸೆ.25ರಂದು ಬೆಳಗ್ಗೆ 10.30 ಗಂಟೆಗೆ ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಸಭೆಗೆ ತಾಲೂಕಿನ ವಿವಿಧ ಸಂಘ–ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಆಗಮಿಸುವಂತೆ ಗುಂಡ್ಲುಪೇಟೆ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನೂಪುರ ನೃತ್ಯೋತ್ಸವ'ದಲ್ಲಿ ಪ್ರಶಸ್ತಿ ಪ್ರದಾನ



'ನೂಪುರ ನೃತ್ಯೋತ್ಸವ'ದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ 'ನೂಪುರ ಕಲಾತಿಲಕ' ಪ್ರಶಸ್ತಿ ಪದಾನ ಮಾಡಲಾಯಿತು.

ಮೈಸೂರು, ಸೆ.22(ಎಸ್‌ಪಿಎನ್)– ಮೈಸೂರಿನ ಕಲಾಮಂದಿರದಲ್ಲಿ ನೂಪುರ ನೃತ್ಯಾಲಯದ ವತಿಯಿಂದ ಏರ್ಪಡಿಸಿದ್ದ 'ನೂಪುರ ನೃತ್ಯೋತ್ಸವ'ವನ್ನು ಹಿರಿಯ ಕಲಾವಿದ ಬದ್ರಿ ದಿವ್ಯಭೂಷಣ್ ಉದ್ಘಾಟಿಸಿದರು.

ನೃತ್ಯೋತ್ಸವದಲ್ಲಿ ಸಂಸ್ಥೆಯ 70 ವಿದ್ಯಾರ್ಥಿಗಳು ಪ್ರದರ್ಶನ ನೀಡಿದರು. ಸಬ್ ಜೂನಿಯರ್ ವಿಭಾಗದಲ್ಲಿ ಎಸ್.ಗೇಹಾನ (2024), ಅದಿತಿ ಎಂ.ಪಟೇಲ್ (2023), ಆದ್ಯಾ ಆನಂದ ಅರಸ್ (2022), ಜೂನಿಯರ್ ವಿಭಾಗದಲ್ಲಿ ದಿವ್ಯಾ ಸಂತೋಷ್ (2024), ಎಂ.ಡಿ.ತಾನಿಯಾ (2023), ಎ.ಎಸ್.ದುರ್ಗಾಶ್ರೀ (2022), ಸೀನಿಯರ್ ವಿಭಾಗದಲ್ಲಿ ನಾಯ್ಸಾ (2024), ಎಸ್.ಸಹನಾ (2023), ಪೂರ್ಣಿಮಾ ದುಬೇಕರ್ (2022) ಅವರಿಗೆ 'ನೂಪುರ ಕಲಾತಿಲಕ' ಪ್ರಶಸ್ತಿ ನೀಡಿ ಗೌರವಿಸಿದರು.

ನಂತರ ಮಾತನಾಡಿದ ಅವರು, ಮೈಸೂರು ಕಲೆಗಳ ತವರೂರು. ರಾಜಾಶ್ರಯದಲ್ಲಿ ಶಾಸ್ತ್ರೀಯ ಕಲೆಗಳಿಗೆ ಹೆಚ್ಚಿನ ಒತ್ತು ನೀಡಿದ್ದರಿಂದ ಇಂದು ಪ್ರಜಾಪ್ರಭುತ್ವದಲ್ಲೂ ಮೈಸೂರಿನ ಜನತೆ ಅದೇ ಪ್ರೋತ್ಸಾಹವನ್ನು ಮುಂದುವರೆಸಿದ್ದಾರೆ ಎಂದರು.

ಅತಿಥಿಗಳಾಗಿ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ನಿರ್ದೇಶಕ ಪ್ರೊ.ಕೆ.ರಾಮಮೂರ್ತಿರಾವ್, ಚಂಪಕ ಅಕಾಡೆಮಿ ಸಂಸ್ಥಾಪಕಿ ನಾಗಲಕ್ಷ್ಮಿ ನಾಗರಾಜನ್ ಭಾಗವಹಿಸಿದ್ದರು. ಸಂಸ್ಥೆಯ ಸಂಸ್ಥಾಪಕ ನಿರ್ದೇಶಕಿ ದಿವ್ಯಾ ಪ್ರಶಾಂತ್, ಕಾರ್ಯದರ್ಶಿ ಪ್ರಶಾಂತ್ ಇದ್ದರು.

ಇಂದು ರಾಜ್ಯಮಟ್ಟದ ಶಿಲ್ಪಕಲಾ ಶಿಬಿರ

ಮೈಸೂರು, ಸೆ.22(ಎಸ್‌ಪಿಎನ್)– ಮೈಸೂರು ದಸರಾ ಮಹೋತ್ಸವದ ಲಲಿತ ಕಲೆ ಮತ್ತು ಕರಕುಶಲ ಕಲೆ ಉಪಸಮಿತಿ ಹಾಗೂ ಕರ್ನಾಟಕ ಶಿಲ್ಪಕಲಾ ಶಿಬಿರ ಅಕಾಡೆಮಿ ಸಹಯೋಗದೊಂದಿಗೆ ಸೋಮವಾರ ಬೆಳಗ್ಗೆ 10 ಗಂಟೆಗೆ ಸಿದ್ದಾರ್ಥ ನಗರದಲ್ಲಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಆವರಣದಲ್ಲಿ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರ ನಡೆಯಲಿದೆ.

ಸಮಾಜ ಕಲ್ಯಾಣ ಇಲಾಖೆ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಎನ್.ಆರ್.ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದ ವಿವರ: ಸೆ.23 ರಿಂದ ಅ. 03 ರವರೆಗೆ ರಾಜ್ಯದ ಪ್ರಖ್ಯಾತ ಶಿಲ್ಪಕಲಾವಿದರಿಂದ ಚಿತ್ರಕಲಾವಿದರಿಂದ ಚಿತ್ರಕಲಾ ಶಿಬಿರ, ಅ.3 ರಂದು ಸಂಜೆ 4 ಗಂಟೆಗೆ ಲಲಿತಕಲಾ ಶಿಬಿರದಲ್ಲಿ ರಚನೆಯಾದ ಕಲಾಕೃತಿಗಳ ಪ್ರದರ್ಶನ ಹಾಗೂ ಇದರ ಜೊತೆಗೆ ರಾಜ್ಯ ಮಟ್ಟದ ವೃತ್ತಿಪರ ಮತ್ತು ಹವ್ಯಾಸಿ ಕಲಾವಿದರ ಆಹ್ವಾನಿತ ಕಲಾಕೃತಿಗಳ ಪ್ರದರ್ಶನ ಇರಲಿದೆ.

ನಂತರ ಭೋಪಾಲ್ ಇಂದಿರಾಗಾಂಧಿ ಮಾನವ ಸಂಗ್ರಹಾಲಯ ಮತ್ತು ಕರ್ನಾಟಕ ಕರಕುಶಲ ಕಲಾವಿದರ ಕಲಾಕೃತಿಗಳ ಪ್ರದರ್ಶನ, ಪ್ರಾತ್ಯಕ್ಷಿಕೆ ಮತ್ತು ಮಾರಾಟ ಮಳಿಗೆ ಉದ್ಘಾಟನೆಗೊಂಡು ಅ.7 ರವರೆಗೆ ಈ ಪ್ರದರ್ಶನ ಇರಲಿದೆ.

ಚಿತ್ರಕಲಾ ಸ್ಪರ್ಧೆ: ಅಲ್ಲದೆ, ಅ.6 ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಾಲೇಜು ಮಕ್ಕಳಿಗಾಗಿ ಸ್ಥಳದಲ್ಲಿ ವಿವಿಧ ವಿಭಾಗಗಳ ಚಿತ್ರ ಬಿಡಿಸುವ ಮತ್ತು ಮಣ್ಣಿನ ಕಲಾಕೃತಿ ರಚಿಸುವ ಸ್ಪರ್ಧೆ ಆಯೋಜನೆಗೊಳ್ಳಲಿದ್ದು, ಅ.7 ರಂದು ಸಂಜೆ 4 ಗಂಟೆಗೆ ಉಪಸಮಿತಿಯ ಸಮಾರೋಪ ಸಮಾರಂಭದಲ್ಲಿ ಚಿತ್ರಕಲಾ ಮತ್ತು ಮಣ್ಣಿನ ಕಲಾಕೃತಿಗಳ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ ಕಾರ್ಯಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಮಠಮಾನ್ಯಗಳ ಆಗ್ರಹ

ಹಾಲು ಎರೆಯುತ್ತಿತ್ತಂತೆ. ಮಾಲೀಕ ಹಸುವಿನ ಮೂಲಕ ಹುತ್ತವನ್ನು ಹೊಡೆಯಲು ಬಂದನಂತೆ. ಆಗ ಹುತ್ತದಿಂದ ಮೇಲೆ ಬಂದ ಶ್ರೀನಿವಾಸ ಮಾಲೀಕನ ಏಟಿಗೆ ಮೈಯೊಡ್ಡಿದನಂತೆ. ಹಸುವನ್ನು ರಕ್ಷಿಸಿದ ಶ್ರೀನಿವಾಸ ಎನ್ನುವುದು ಇತಿಹಾಸ. ಅಂತಹ ಶ್ರೀನಿವಾಸ ದೇವರಿಗೆ ಹಸುವಿನ ಕೊಬ್ಬಿನ ಪ್ರಸಾದ ನೀಡಿದ್ದೀರಿ. ಇದೊಂದು ಬಹುದೊಡ್ಡ ಅಪರಾಧವಾಗಿದೆ. ಹಿಂದೂಗಳ ಧಾರ್ಮಿಕ ಶ್ರದ್ಧೆಯ ಮೇಲಿನ ಹಲ್ಲೆ ಇದಾಗಿದೆ. ಮನೆಗಳಲ್ಲಿ ಕೂಡ ಇಂತಹ ತುಪ್ಪ ಬಳಸುವುದಿಲ್ಲ. ಉಪಯೋಗಕ್ಕೆ ಅನರ್ಹವಾದ ತುಪ್ಪವನ್ನು ದೇವಾಲಯಕ್ಕೆ ಬಳಸಿದ್ದೀರಿ ಎಂದು ವಾಗ್ದಾಳಿ ನಡೆಸಿದರು.

ತಿರುಪತಿಯ ಪ್ರಸಾದ ಲಡ್ಡು ತಯಾರಿಕೆಯಲ್ಲಿ ಬಳಸುವ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಬಳಸಲಾಗಿದೆ ಎಂಬ ವಿವಾದದ ಬಗ್ಗೆ ಈಶಾ ಫೌಂಡೇಶನ್ ಸಂಸ್ಥಾಪಕ, ಆಧ್ಯಾತ್ಮಿಕ ಗುರು ಜಗ್ಗಿ ವಾಸುದೇವ್ ಪ್ರತಿಕ್ರಿಯಿಸಿದ್ದಾರೆ.

ತಿರುಪತಿಯ ಪ್ರಸಾದ ಲಡ್ಡು ತಯಾರಿಸಲು ಬಳಸುವ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿರುವುದು ಅಸಹ್ಯಕರವಾಗಿದೆ. ಹಾಗಾಗಿ ದೇವಾಲಯಗಳು ಭಕ್ತರಿಂದ ನಡೆಯಬೇಕೇ ಹೊರತು ಸರ್ಕಾರದ ಆಡಳಿತದಿಂದಲ್ಲ. ಎಲ್ಲಿ ಭಕ್ತಿ ಇಲ್ಲವೋ ಅಲ್ಲಿ ಪಾವಿತ್ರ್ಯತೆ ಇರುವುದಿಲ್ಲ. ಹಿಂದೂ ದೇವಾಲಯಗಳನ್ನು ಧರ್ಮನಿಷ್ಠ ಹಿಂದೂಗಳು ನಡೆಸಬೇಕೇ ಹೊರತು ಸರ್ಕಾರದ ಆಡಳಿತದಿಂದಲ್ಲ ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಇತ್ತ ತಿರುಪತಿ ಲಡ್ಡು ವಿವಾದದ ಕುರಿತು ಪ್ರತಿಕ್ರಿಯೆ ನೀಡಿರುವ ಆಧ್ಯಾತ್ಮಿಕ ಗುರು ಶ್ರೀ ರವಿಶಂಕರ್ ಗುರೂಜಿ, ಈ ಘಟನೆಯು ಹಿಂದೂಗಳ ಮನಸ್ಸಿನಲ್ಲಿ ತೀವ್ರ ನೋವು ಹಾಗೂ ಆಕ್ರೋಶವನ್ನು ಉಂಟು ಮಾಡಿದೆ ಎಂದು ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಸ್ವ-ಹಿತಾಸಕ್ತಿಯ ಅಧಿಕಾರಿಗಳು, ನಿರ್ದಯಿ ವ್ಯಾಪಾರಸ್ಥರು ಮತ್ತು ರಾಜಕಾರಣಿಗಳ ಬದಲು ದೇವಾಲಯದ ನಿರ್ವಹಣೆಯನ್ನು ಧಾರ್ಮಿಕ ಮುಖಂಡರು ಹಾಗೂ ಭಕ್ತರಿಗೆ ವಹಿಸಿಕೊಡುವ ಸಮಯ ಬಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಆಂಧ್ರಪ್ರದೇಶದ ಪ್ರಸಿದ್ಧ ತಿರುಪತಿ ದೇವಸ್ಥಾನದಲ್ಲಿ ಲಡ್ಡು ತಯಾರಿಕೆಯಲ್ಲಿ ಪ್ರಾಣಿಗಳ ಕೊಬ್ಬನ್ನು ಬಳಸಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರವು ತಿರುಪತಿಯ ಪ್ರಸಾದ ತಯಾರಿಕೆಗೆ ಅಗ್ಗದ ಬೆಲೆಯ ಕಲಬೆರಕೆ ತುಪ್ಪವನ್ನು ಖರೀದಿಸುವ ಮೂಲಕ ಟಿಟಿಡಿಯ ಪಾವಿತ್ರ್ಯಕ್ಕೆ ಧಕ್ಕೆ ತಂದಿದೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಆರೋಪಿಸಿದ್ದರು. ಈ ವಿಷಯ ಭಾರಿ ವಿವಾದಕ್ಕೀಡಾಗಿತ್ತು.

ಅನುರಾ ಡಿಸಾನಾಯಕೆ ಶ್ರೀಲಂಕಾ ಅಧ್ಯಕ್ಷ

ಎರಡನೇ ಸ್ಥಾನ ಪಡೆದರೆ, ವಿಕ್ರಮಸಿಂಘೆ 22.99 ಲಕ್ಷ ಮತಗಳನ್ನು ಪಡೆದು ಮೂರನೇ ಸ್ಥಾನ ಪಡೆದರು. ಕೊಲಂಬೊದ ವಸಾಹತುಶಾಹಿ ಯುಗದ ಅಧ್ಯಕ್ಷೀಯ ಕಾರ್ಯದರ್ಶಿ ಕಚೇರಿಯಲ್ಲಿ ಸೋಮವಾರ ಡಿಸಾನಾಯಕೆ ಪ್ರಮಾಣ ವಚನ ಸ್ವೀಕರಿಸುವ ನಿರೀಕ್ಷೆಯಿದೆ. ಅವರ ಅಧಿಕಾರದ ಏರಿಕೆಯು ದೇಶದ ಆರ್ಥಿಕ ಕುಸಿತಕ್ಕೆ ಕಾರಣವಾದ ರಾಜಕೀಯ ಸ್ಥಾಪನೆಯ ನಿರಾಕರಣೆಯನ್ನು ಸೂಚಿಸುತ್ತದೆ. 2019 ರ ಅಧ್ಯಕ್ಷೀಯ ಚುನಾವಣೆಯಲ್ಲಿ ಕೇವಲ 3 ಪ್ರತಿಶತದಷ್ಟು ಮತಗಳನ್ನು ಪಡೆದಿದ್ದ ಜೆವಿಪಿಗೆ ಈ ಗೆಲುವು ಪ್ರಮುಖ ತಿರುವುವನ್ನು ಪ್ರತಿನಿಧಿಸುತ್ತದೆ. ಶನಿವಾರ ನಡೆದ ಚುನಾವಣೆಯಲ್ಲಿ ಶೇಕಡಾ 76 ರಷ್ಟು ಮತದಾನವಾಗಿದ್ದು, 17 ಮಿಲಿಯನ್ ಶ್ರೀಲಂಕಾದವರು ತಮ್ಮ ಮತ ಚಲಾಯಿಸಲು ಅರ್ಹರಾಗಿದ್ದರು.

ಗೇಟ್‌ಪಾಸ್ ಕೊಡಲು ಸರ್ಕಾರ ಚಿಂತನೆ

ಆಡಳಿತ ಬಿಗಿಗೊಳಿಸಲು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮುಂದಾಗಿದೆ ಎಂದು ಹೇಳಲಾಗಿದೆ. ಮುಡಾ ಪ್ರಕರಣದಲ್ಲಿ ಕಾನೂನು ಹೋರಾಟ, ರಾಜಕೀಯ ಹೋರಾಟ, ಅದರ ಪಾಡಿಗೆ ಅದು ನಡೆಯುತ್ತೆ. ಆದರೆ ಆಡಳಿತಯಂತ್ರ ಬಿಗಿಗೊಳಿಸಿ ಅನಗತ್ಯವಾಗಿರುವವರಿಗೆ ಗೇಟ್ ಪಾಸ್ ಕೊಡಬೇಕೆಂಬ ಕಟ್ಟುನಿಟ್ಟಿನ ತೀರ್ಮಾನ ಸರ್ಕಾರ ಕೈಗೊಂಡಿದೆ. ಆದ್ದರಿಂದ ಸಿಎಂ, ಸಚಿವರ ಕಚೇರಿಯಲ್ಲಿ ಅನಗತ್ಯವಾಗಿರುವ ಅಧಿಕಾರಿ, ಸಿಬ್ಬಂದಿ ವರ್ಗದವರ ಮಾಹಿತಿ ಒದಗಿಸಲು ಹಿರಿಯ ಅಧಿಕಾರಿಗಳಿಗೆ ಟಾಸ್ಕ್ ನೀಡಲಾಗಿದೆ ಎಂದು ಹೇಳಲಾಗಿದೆ. ಅಲ್ಲದೇ ಸರ್ಕಾರದ ಮಾಹಿತಿ ಸೋರಿಕೆ ಮಾಡುವವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲು ಪ್ರತ್ಯೇಕ ವರದಿ ಕೊಡುವಂತೆ ಸರ್ಕಾರ ಕೇಳಿರುವುದಾಗಿ ತಿಳಿದುಬಂದಿದೆ.

ಸೂಟ್‌ಕೇಸ್‌ನಲ್ಲಿ ಡೆಡ್ ಬಾಡಿ ಸಾಗಿಸಲು ಪ್ಲ್ಯಾನ್ ಮಾಡಿದ್ದ ಹಂತಕ

ಬೆಂಗಳೂರು, ಸೆ.22– ವೈಯಾಲಿಕಾವಲ್‌ನಲ್ಲಿ 29 ವರ್ಷದ ಯುವತಿ ಮಹಾಲಕ್ಷ್ಮೀಯನ್ನು ಕೊಲೆ ಮಾಡಿ ಆಕೆಯ ದೇಹವನ್ನು 59 ಪೀಸ್‌ಗಳನ್ನಾಗಿ ಮಾಡಿದ ಪ್ರಕರಣದಲ್ಲಿ ಒಂದೊಂದೇ ಅಪ್‌ಡೇಟ್‌ಗಳು ಹೊರಬರುತ್ತಿವೆ. ಮಹಾಲಕ್ಷ್ಮೀಯನ್ನು ಕೊಂದ ಬಳಿಕ ಹಂತಕ ಆಕೆಯ ಮೃತದೇಹವನ್ನು ಹೊರಗೆ ಸಾಗಿಸುವ ಪ್ರಯತ್ನವನ್ನೂ ಮಾಡಿದ್ದ. ಆದರೆ, ಕೊನೆಯ ಕ್ಷಣದಲ್ಲಿ ತನ್ನ ಪ್ಲ್ಯಾನ್ ಬದಲಾಯಿಸಿರುಹುದು ಅನುಮಾನ ವ್ಯಕ್ತವಾಗಿದೆ. ಅದಕ್ಕೆ ಕಾರಣ, ಫ್ರಿಜ್‌ನ ಎದುರುಗಡೆ ಇರುವ ಸೂಟ್‌ಕೇಸ್. ಭಾನುವಾರ ಮಹಾಲಕ್ಷ್ಮೀ ಕೊಲೆ ಕೇಸ್‌ನ ಪ್ರಮುಖ ವಿಡಿಯೋ ಮಾಧ್ಯಮಗಳಿಗೆ ಲಭಿಸಿದೆ. ಆಕೆಯ ತಾಯಿ ಮನೆಯ ಕೀ ತೆಗೆದು ಒಳಗೆ ಹೋಗುವ ವೇಳೆ



ಅದನ್ನು ವಿಡಿಯೋ ಮಾಡಿದ್ದಾರೆ. ಈ ವೇಳೆ ಫ್ರಿಜ್‌ನ ಎದುರು ಖಾಲಿ ಸೂಟ್‌ಕೇಸ್ ಕಂಡಿದೆ.

ಮಹಾಲಕ್ಷ್ಮಿ ದೇಹವನ್ನ ತುಂಡಾಗಿಸಿ ಹೊರಗಡೆ ಸಾಗಿಸುವುದು ಹಂತಕನ ಪ್ಲಾನ್ ಆಗಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ. ಮಹಾಲಕ್ಷ್ಮಿ ತಾಯಿ ಮನೆಗೆ ಬಂದಾಗ ಮಾಡಿದ್ದ ವಿಡಿಯೋ ನೋಡಿದರೆ, ಇಂಥ ಹಲವು ಅನುಮಾನಗಳು ಮೂಡಿದೆ. ಫ್ರಿಡ್ಜ್ ಮುಂದೆಯೇ ಕೊಲೆಗಡುಕ ಸೂಟ್‌ಕೇಸ್ ಇಟ್ಟಿದ್ದ. ದೇಹ ತುಂಡಾಗಿಸಿ ಸೂಟ್ ಕೇಸ್‌ನಲ್ಲಿ ಸಾಗಿಸೋದು ಆರೋಪಿಯ ಪ್ಲಾನ್ ಆಗಿದ್ದಿರಬಹುದು ಎಂದು ಪೊಲೀಸರೂ ಅಂದಾಜು ಮಾಡಿದ್ದಾರೆ. ಸೂಟ್‌ಕೇಸ್‌ನಲ್ಲಿ ಮೃತದೇಹ ಸಾಗಿಸುವುದು ಪ್ಲಾನ್ ಆಗಿತ್ತು. ಅದಲ್ಲದೆ, ಕೊಲೆ ಮಾಡಿ ಮನೆ ಪೂರ್ತಿ ಕ್ಲೀನ್ ಮಾಡಿ ರಕ್ತವನ್ನು ಟಾಯ್ಲೆಟ್‌ನಲ್ಲಿ ಹಾಕಿದ್ದಿರಬಹುದು ಎನ್ನಲಾಗಿದೆ.

2026ರೊಳಗೆ ಅದ್ದೂರಿ ವಿಶ್ವಕರ್ಮ ಭವನ ನಿರ್ಮಾಣ

ವಿಶ್ವಕರ್ಮ ಯುವ ಬ್ರಿಗೇಡ್ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಪ್ರಕಟ



ಪ್ರತಿಭಾ ಪುರಸ್ಕಾರ, ಗಣ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಸೆ.22– ಪಟ್ಟಣದಲ್ಲಿ 3 ಕೋಟಿ ವೆಚ್ಚದಲ್ಲಿ ಅದ್ದೂರಿ ವಿಶ್ವಕರ್ಮ ಭವನ 2026ರೊಳಗೆ ಪೂರ್ಣಗೊಳ್ಳಲಿದೆ ಎಂದು ಶಾಸಕ ಅನಿಲ್ ಭರವಸೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಕೋಟೆ, ಸರಗೂರು ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್ ವತಿಯಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ವಿಶ್ವಕರ್ಮ ಸಮಾಜಕ್ಕೆ ಆದ್ಯತೆ ನೀಡುವ ಸಲುವಾಗಿ ಪಟ್ಟಣದಲ್ಲಿ ವಿಶ್ವಕರ್ಮ ಭವನವನ್ನು ನಿರ್ಮಿಸಲಾಗುತ್ತಿದೆ. ಕಳೆದ 2 ವರ್ಷಗಳ ಹಿಂದೆ 25 ಲಕ್ಷ ರೂ.ಗಳಲ್ಲಿ ಭವನದ ಕಾಮಗಾರಿ ಪ್ರಾರಂಭಿಸಿದ್ದು, ಮತ್ತೆ ಈಗ 50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಹಂತ ಹಂತವಾಗಿ ಹಣ ಬಿಡುಗಡೆ ಮಾಡಿ 2026ರೊಳಗೆ ಭವನದ ಕಾಮಗಾರಿ ಪೂರ್ಣಗೊಳ್ಳಲಿದೆ. ಪ್ರತಿಯೊಂದು ಸಮಾಜದ ಕಾರ್ಯಕ್ರಮಗಳನ್ನು ಭವನದಲ್ಲೇ ಮಾಡಬೇಕಾಗಿದೆ ಎಂದರು.

ರಾಜ್ಯದಲ್ಲಿ ಸಮಾಜವನ್ನು ಒಗ್ಗೂಡಿಸಿ, ವಿಶ್ವಕರ್ಮ ಸಮಾಜ ಶಕ್ತಿ ಏನೆಂಬುದನ್ನು ಕೆ.ಪಿ.ನಂಜುಂಡಿ ತೋರಿಸಿದ್ದಾರೆ. ಸಮಾಜದಲ್ಲಿರುವ ಕುಲಕಸುಬು ಮೂಲಕ ಪ್ರತಿಯೊಂದು ಸಮಾಜ ತಮ್ಮ ವೃತ್ತಿಗೆ ಗೌರವ ಸಲ್ಲಿಸಬೇಕಾಗಿದೆ. ತಮ್ಮ ಮಕ್ಕಳನ್ನು ಶೈಕ್ಷಣಿಕವಾಗಿ ಮುಂದೆ ತರುವ ಕೆಲಸ ಮಾಡಬೇಕು. ತಾಲೂಕಿನಲ್ಲಿ ರಾಜಕೀಯ ಹಾಗೂ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದರು.

ರಾಜ್ಯ ಚುನಾವಣಾ ನಿವೃತ್ತ ಆಯುಕ್ತ ಶ್ರೀನಿವಾಸ್ ಆಚಾರ್ ಮಾತನಾಡಿ, ರಾಜ್ಯದಲ್ಲಿ ವಿಶ್ವಕರ್ಮ ಸಮಾಜ ಕಡಿಮೆ ಜನಸಂಖ್ಯೆ ಇದ್ದರೂ, ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿ ಸ್ಥಾನಗಳನ್ನು ಪಡೆದುಕೊಳ್ಳುವ ಅವಕಾಶ ವಂಚಿತವಾಗಿದೆ. ರಾಜಕಾರಣಿಗಳು ಸಹ ಈ ಸಮಾಜವನ್ನು ಮರೆತಿದ್ದಾರೆ ಎಂದರು.

ವಾಣಿಜ್ಯ ತೆರಿಗೆ ಇಲಾಖೆ ಜಂಟಿ ನಿವೃತ್ತ ಆಯುಕ್ತ ಮಾಳಿಗ ಆಚಾರ್ ಮಾತನಾಡಿ, ಸಮಾಜದ ಮಕ್ಕಳು ಶೈಕ್ಷಣಿಕ ಪ್ರಗತಿ ಮೂಲಕ ಗುರುತಿಸಿಕೊಂಡಾಗ ಮಾತ್ರ ಮುಂದೆ ಬರಲು ಸಾಧ್ಯ. ಪ್ರತಿಯೊಬ್ಬರೂ ವಿದ್ಯಾಭ್ಯಾಸದ ಕಡೆ ಹೆಚ್ಚು ಒತ್ತು ನೀಡಬೇಕು. ಬಡ ಮಕ್ಕಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಶನ್ ಸ್ಥಾಪಿಸಿದ್ದು, ಇದರ ಅನುಕೂಲ ಪಡೆಯಬೇಕು ಎಂದರು

ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್ ಅಧ್ಯಕ್ಷ ನಿಂಗರಾಜು ಬಿ.ಆಚಾರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತರಾದ ಅರುಣ್ ಸಿ.ಬಡಿಗೇರ್ ಹುಬ್ಬಳ್ಳಿ ಧಾರವಾಡದ ಮಹಾನಗರ ಪಾಲಿಕೆ ಮೇಯರ್ ರಾಮಪ್ಪ ಕೃಷ್ಣಪ್ಪ ಬಡಿಗೇರ್, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎನ್.ನಂದಕುಮಾರ್, ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ವೆಂಕಟೇಶ್, ತಾಲೂಕು ವಿಶ್ವಕರ್ಮ ಸೇವಾ ಸಮಾಜದ ಅಧ್ಯಕ್ಷ ಬಿ.ಡಿಮುಂಟಿ ಕೋಟಿ ಗಣೇಶ್ ರಾಜು, ವಿನಾಯಕ ಆಚಾರ್, ರಘು ತಿರುಮಲಚಾರ್, ಶೇಖರ್, ಗಣೇಶ್, ಕಾಂತರಾಜ್, ಮಹೇಶ್, ಯುವ ಬ್ರಿಗೇಡ್ ಕಾರ್ಯದರ್ಶಿ ವಿನೋದ್ ಕುಮಾರ್, ಖಜಾಂಚಿ ವಸಂತ್ ಕುಮಾರ್, ನಿರ್ದೇಶಕರಾದ ಕಿರಣ್, ದಾಸಚಾರಿ, ಲೋಕೇಶ್, ಸಿದ್ದಪ್ಪಾಜಿ, ರಾಜಚಾರಿ, ಪ್ರದೀಪ್, ಕುಮಾರ್, ರವಿ ಕುಮಾರ್, ಗೋವಿಂದರಾಜ್, ವಿಜಯ್ ಕುಮಾರ್, ನಾಗೇಂದ್ರ, ಶೇಖರ್, ನಾಗೇಶ್, ಜನಾರ್ಧನ್, ಚಂದನ್, ವೆಂಕಟೇಶ್, ಬಂಕ್ ಮುರ್ತಾಚಾರ್ ಸೇರಿದಂತೆ ಇನ್ನಿತರರಿದ್ದರು.

ಬಿಲಿಗೆರೆಹುಂಡಿ ಡೇರಿಗೆ 1.97 ಲಕ್ಷ ಲಾಭ


ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಬಿ.ಮಹದೇವಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಸೆ.22– ಬಿಲಿಗೆರೆಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘ ರೈತರ ಸಹಕಾರದಿಂದ ಉತ್ತಮ ಲಾಭಾಂಶ ಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದು ಸಂಘದ ಅಧ್ಯಕ್ಷ ಬಿ.ಮಹದೇವ ಸ್ವಾಮಿ ಹೇಳಿದರು.

ಗ್ರಾಮದ ಡೈರಿ ಆವರಣದಲ್ಲಿ ನಡೆದ 2023–24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡಿದ್ದರಿಂದ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 1,97,256 ರೂ. ನಿವ್ವಳ ಲಾಭಗಳಿಸಿದೆ ಎಂದರು.

ಸಂಘದ ಬೆಳವಣಿಗೆಯಲ್ಲಿ ಹಾಲು ಸರಬರಾಜು ಮಾಡುವ ಉತ್ಪಾದಕರ ಪಾತ್ರ ಬಹು ದೊಡ್ಡದಿದೆ. ಹಾಲು ಉತ್ಪಾದಕರು ಗುಣಮಟ್ಟದ ಹಾಲನ್ನೇ ಸರಬರಾಜು ಮಾಡುವ ಮೂಲಕ ಸಂಘದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಿದೆ ಎಂದರು.

ಸಂಘದ ಉಪಾಧ್ಯಕ್ಷ ಏಳುಮಲೆ ಮಂಜು, ಮೈಮುಲ್ ವಿಸ್ತರಣಾಧಿಕಾರಿ ಶೃತಿ ಮಾತನಾಡಿದರು. ಇದೇ ವೇಳೆ ಸಂಘಕ್ಕೆ ಹೆಚ್ಚಿನ ಹಾಲು ಸರಬರಾಜು ಮಾಡಿದ ಹಾಲು ಉತ್ಪಾದಕರನ್ನು ಸನ್ಮಾನಿಸಲಾಯಿತು. ಸಂಘದ ನಿರ್ದೇಶಕರಾದ ಎನ್.ಮಹೇಶ್, ಮಹದೇವಪ್ಪ, ಬಿ. ಸುಂದರಸ್ವಾಮಿ, ಶಂಕರ್, ನಾಗರಾಜು, ಸಿದ್ದೇಗೌಡ, ಸಣ್ಣಯ್ಯ, ಮಹದೇವ ನಾಯಕ, ಸ್ವಾಮಿ, ಪುಟ್ಟಮಲ್ಲಮ್ಮ ಸಂಘದ ಮುಖ್ಯ ಕಾರ್ಯ ನಿರ್ವಾಹಕ ಪುರುಷೋತ್ತಮ್, ಹಾಲು ಪರೀಕ್ಷಕ ಅಭಿಷೇಕ್, ಸಹಾಯಕ ರಾಜಣ್ಣ ಸೇರಿದಂತೆ ಗ್ರಾಮಸ್, ಮುಖಂಡರು ಹಾಜರಿದ್ದರು.

ಐಟಿಐ ಕಾಲೇಜಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ


ಕಾರ್ಯಕ್ರಮವನ್ನು ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ಸೆ.22– ಪಟ್ಟಣದ ದಾಸನಾಯಕರ ಬೀದಿ ಕಾರ್ಯ ಕ್ಷೇತ್ರದ ಶ್ರೀಗುರು ಚನ್ನಮಲ್ಲಿಕಾರ್ಜುನ ಐಟಿಐ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ದುಶ್ಚಟ ಮುಕ್ತ ಸಮಾಜ ನಿರ್ಮಾಣದ ಬಗ್ಗೆ ಜಾಗೃತಿ ಮೂಡಿಸಲು ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ಪ್ರಾದೇಶಿಕ ವ್ಯಾಪ್ತಿಯ ಜನಜಾಗೃತಿ ವೇದಿಕೆ ಯೋಜನಾಧಿಕಾರಿ ಮಾಧವ ನಾಯ್ಕ, ದುಶ್ಚಟದ ಬಗ್ಗೆ ಹಲವು ಉದಾಹರಣೆ ನೀಡುತ್ತಾ ಸೂಕ್ತ ಮಾಹಿತಿ, ಮಾರ್ಗದರ್ಶನ ನೀಡಿದರು.

ಸಂಸ್ಥೆ ಅಧ್ಯಕ್ಷ ಮಾದ್ರಹಳ್ಳಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ನಡೆಯಬೇಕು. ಒಳ್ಳೆಯ ಹವ್ಯಾಸ ಬೆಳೆಸಿಕೊಂಡು ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸುವಂತೆ ಸಲಹೆ ನೀಡಿದರು.

ತಾಲೂಕಿನ ಯೋಜನಾಧಿಕಾರಿ ಹನುಮಂತಪ್ಪ ಅಂಗಡಿ, ಕಾಲೇಜಿನ ಪ್ರಾಂಶುಪಾಲ ನಂಜುಂಡಸ್ವಾಮಿ, ಕಾಲೇಜಿನ ಸಹಶಿಕ್ಷಕರು, ವಲಯದ ಮೇಲ್ವಿಚಾರಕರು ಗವಿರಂಗಪ್ಪ, ಸೇವಾ ಪ್ರತಿನಿಧಿಗಳು, ವಿದ್ಯಾರ್ಥಿಗಳು ಹಾಜರಿದ್ದರು.

ರೈತ ಸಂಘದ ಗ್ರಾಮ ಘಟಕ ಉದ್ಘಾಟನೆ


ನಂಜನಗೂಡು ತಾಲೂಕಿನ ಕಾಳಿಹುಂಡಿ ಗ್ರಾಮದಲ್ಲಿ ಭಾನುವಾರ ಜಿಲ್ಲಾ ರೈತ ಸಂಘದ ಅಧ್ಯಕ್ಷ ವಿದ್ಯಾಸಾಗರ್, ರೈತ ಸಂಘದ ಗ್ರಾಮ ಘಟಕ ಉದ್ಘಾಟಿಸಿ, ಮಾತನಾಡಿದರು.

ನಂಜನಗೂಡು, ಸೆ.22– ರೈತರು ಅತಿವೃಷ್ಟಿ ಅನಾವೃಷ್ಟಿಗಳ ತಾಕಲಾಟದಲ್ಲಿ ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ದೊರಕದೆ ಮೋಸಕ್ಕೆ ಒಳಗಾಗುತ್ತಿದ್ದಾರೆ. ಸರ್ಕಾರಗಳು ರೈತರ ವಿರುದ್ಧ ಮಲತಾಯಿ ಧೋರಣೆ ಅನುಸರಿಸುತ್ತಿವೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಹೇಳಿದರು.

ತಾಲೂಕಿನ ಕಾಳಿಹುಂಡಿ ಗ್ರಾಮದಲ್ಲಿ ಭಾನುವಾರ ರೈತ ಸಂಘದ ಗ್ರಾಮಘಟಕ ಉದ್ಘಾಟಿಸಿ ಅವರು ಮಾತನಾಡಿದರು. ಬಹುರಾಷ್ಟ್ರೀಯ ಕಂಪನಿಗಳು ನೀಡಿದ ಬಿತ್ತನೆ ಬೀಜ ಫಲ ಕೊಟ್ಟ ನಂತರ ಅದರ ಬೀಜದಿಂದ ಮತ್ತೆ ಫಸಲು ಬೆಳೆಯುವುದಿಲ್ಲ, ರೈತರು ಮತ್ತೆ ಬಹುರಾಷ್ಟ್ರೀಯ ಕಂಪನಿಗಳ ಬಳಿ ಬಿತ್ತನೆ ಬೀಜಕ್ಕಾಗಿ ಕೈಒಡ್ಡಿ ನಿಲ್ಲಬೇಕಾದ ಪರಿಸ್ಥಿತಿ ಬಂದಿದೆ. ಬಹುರಾಷ್ಟ್ರೀಯ ಕಂಪನಿಗಳು ವಿತರಿಸಿದ ಬಿತ್ತನೆ ಬೀಜಗಳಿಂದ ನೆಲ ಬರಡಾಗುತ್ತಿದೆ. ಇಂದು ತಿರುಪತಿ ಲಾಡುವಿನಲ್ಲಿ ಪ್ರಾಣಿಗಳ ಕೊಬ್ಬನ್ನು ಬೆರಸಿದ ಬಗ್ಗೆ ದೊಡ್ಡ ಚರ್ಚೆ ನಡೆದಿದೆ. ಆದರೆ ಅನ್ನ ನೀಡುವ ರೈತರು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ಚರ್ಚೆ ನಡೆಯುವುದಿಲ್ಲ. ರೈತರ ಸಮಸ್ಯೆಗಳ ಬಗ್ಗೆ ಪ್ರೊ.ನಂಜುಂಡಸ್ವಾಮಿ ಹುಟ್ಟುಹಾಕಿದ ರೈತ ಸಂಘ ನಿರಂತರವಾಗಿ ಹೋರಾಟ ನಡೆಸುತ್ತಿದೆ. ರೈತ ಸಂಘದ ಹೋರಾಟಕ್ಕೆ ಜನತೆ ಬೆಂಬಲ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್‌ರಾವ್, ಮುಖಂಡರಾದ ಮಂಜುಕಿರಣ್, ಮಹದೇವು, ಅತ್ತಹಳ್ಳಿ ಶಿವಕುಮಾರ್, ಕೆಂಪಣ್ಣ, ಶಿವಣ್ಣ, ಶೈಲಜಾ, ಮೋಹನ್, ಸಿಂಧೂ ಸೇರಿದಂತೆ ರೈತರು ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಾಲು ಉತ್ಪಾದಕರೇ ಡೈರಿ ಆಧಾರ ಸ್ತಂಭ

ಮಲ್ಲುಂಡಿ, ಸೆ.22– ಹಾಲು ಉತ್ಪಾದಕರೇ ಹಾಲು ಉತ್ಪಾದಕರ ಸಹಕಾರ ಸಂಘಗಳ ಆಧಾರ ಸ್ತಂಭಗಳು ಎಂದು ಮೈಮುಲ್ ವಿಸ್ತರಣಾಧಿಕಾರಿ ಎ.ಎಸ್.ನಂಜುಂಡಸ್ವಾಮಿ ಹೇಳಿದರು.

ನಂಜನಗೂಡು ತಾಲೂಕಿನ ತರಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆಯಲ್ಲಿ ರೈತಾಪಿ ವರ್ಗ ಆಧುನಿಕತೆ ಅಳವಡಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಗುಣಮಟ್ಟದ ಹಾಲನ್ನು ಶೇಖರಣೆ ಮಾಡಿದಾಗ ಸಂಘವು ಲಾಭಾಂಶ ಕಾಣಲು ಸಾಧ್ಯ. ಈಗಾಗಲೇ ಸಂಘವು 2,26,300 ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಇದೇ ವೇಳೆ ಸಂಘದ ಸಿಇಓ ಮಹೇಶ್ 2023–24ನೇ ಸಾಲಿನ ವರದಿ ಮಂಡಿಸಿದರು. ಅಧ್ಯಕ್ಷ ಟಿ.ಎಂ.ಗುರುಲಿಂಗಪ್ಪ, ಉಪಾಧ್ಯಕ್ಷ ಸಿದ್ದನಾಯಕ, ನಿರ್ದೇಶಕರಾದ ದೊರೆಸ್ವಾಮಿ, ಶಿವಕುಮಾರ್, ನಾಗಣ್ಣ, ರೇವಣ್ಣ, ಕೆಂಪಣ್ಣ, ಜವರೇಗೌಡ, ಮಹದೇವಮ್ಮ, ಪಾಪಣ್ಣ, ಸಿಇಓ ಟಿ.ಎನ್. ಮಹೇಶ್ ಸೇರಿದಂತೆ ಇತರರಿದ್ದರು.


ಸಭೆಯಲ್ಲಿ ಮೈಮುಲ್ ವಿಸ್ತರಣಾಧಿಕಾರಿ ಎ.ಎಸ್.ನಂಜುಂಡಸ್ವಾಮಿ ಮಾತನಾಡಿದರು.

ಲಾಭದಲ್ಲಿ ಜಿನ್ನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ


ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಅಣ್ಣೇಗೌಡ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಸೆ.22– ನಮ್ಮ ಕೃಷಿ ಪತ್ತಿನ ಸಹಕಾರ ಸಂಘ 2023–24ನೇ ಸಾಲಿನಲ್ಲಿ 1.80 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಜಿನ್ನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಅಣ್ಣೇಗೌಡ ತಿಳಿಸಿದರು.

ತಾಲೂಕಿನ ಜಿನ್ನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ನಮ್ಮ ಸಂಘದಲ್ಲಿ ಹೊಸ ಸಾಲ ಅಥವಾ ರಿನಿವಲ್ ಸಾಲವನ್ನು ರೈತರಿಗೆ ಸಕಾಲದಲ್ಲಿ ನೀಡುತ್ತಿದ್ದು, ಸಾಲ ಕೇಳಿ ಬಂದ ಎಲ್ಲಾ ರೈತರಿಗೂ ತಾರತಮ್ಯ ಮಾಡದೆ ಪಕ್ಷಾತೀತವಾಗಿ ಸಾಲ ನೀಡುತ್ತಿದ್ದೇವೆ. ಇದೇ ರೀತಿಯ ಸಹಕಾರವನ್ನು ಮುಂದೆಯೂ ನಾವು ನಿರೀಕ್ಷೆ ಮಾಡುತ್ತಿದ್ದು ನಿಮ್ಮಗಳೆಲ್ಲರ ಸಹಕಾರದಿಂದ ಸ್ವಂತ ಕಟ್ಟಡವು ಪೂರ್ಣ ಹಂತದಲ್ಲಿದ್ದು ಮುಂದಿನ ವಾರ್ಷಿಕ ಸಭೆಯನ್ನು ಹೊಸ ಕಟ್ಟಡದ ಆವರಣದಲ್ಲಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಕಾರ್ಯ ನಿರ್ವಹಣಾಧಿಕಾರಿ ಗಿರೀಗೌಡ 2023/24ನೇ ಸಾಲಿನ ಆಯವ್ಯಯ ಮಂಡಿಸಿದರು. ಸಂಘವು 1 ಲಕ್ಷದ 80 ಸಾವಿರ ರೂ. ನಿವ್ವಳ ಲಾಭ ಹೊಂದಿದೆ. ಸಂಘದಲ್ಲಿ 332 ರೈತರಿಗೆ KCC SHG ಹೈನುಗಾರಿಕೆ ಹಾಗೂ ವೈಯಕ್ತಿಕ ಸಾಲಗಳನ್ನು ನೀಡಿ ಮೂರು ಕೋಟಿ 50 ಲಕ್ಷದ ವ್ಯವಹಾರ ಹೊಂದಿದ್ದೇವೆ. ಮುಂದಿನ ದಿನಗಳಲ್ಲಿ ಈ ಸಂಘದ ವತಿಯಿಂದ ಸರ್ಕಾರದ ಸಹಾಯದೊಂದಿಗೆ ಹೆಚ್ಚಿನ ರೈತರಿಗೆ ಸಾಲ ನೀಡುವುದರ ಮುಖಾಂತರ ಸುಮಾರು 5 ಕೋಟಿ ವ್ಯವಹಾರ ಮಾಡುವ ಗುರಿ ಹೊಂದಿದ್ದೇವೆ ಎಂದರು.

ಸಂಘದ ನಿರ್ದೇಶಕ ರಾಜನಾಯಕ ಮಾತನಾಡಿ, ಯಾರು ಕೂಡ ರೈತರು ಸಾಲವನ್ನು ಸುಸ್ತಿ ಮಾಡಿಕೊಳ್ಳಬಾರದು ಸುಸ್ತಿ ಮಾಡಿಕೊಂಡ ರೈತರಿಗೆ ಬಡ್ಡಿ ಜಾಸ್ತಿಯಾಗುವ ಜೊತೆಗೆ ನೀವಾಗಲಿ ನಿಮ್ಮ ಮನೆಯವರಾಗಲಿ ಯಾವುದೇ ಬ್ಯಾಂಕುಗಳಲ್ಲಿ ವ್ಯವಹಾರ ಮಾಡಲು ಬಹಳ ಕಷ್ಟವಾಗುತ್ತದೆ ಎಂದರು. ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾದ ರತ್ನಮ್ಮ ಸಿದ್ದನಾಯಕ, ನಿರ್ದೇಶಕರಾದ ಶಿವಯ್ಯ, ಕೃಷ್ಣ, ಕುಮಾರಸ್ವಾಮಿ, ಜಯರಾಮ, ಶಿವಮ್ಮ, ಶಂಕರೇಗೌಡ, ಮೋಹನ್, ಸಂಘದ ಸಿಬ್ಬಂದಿ ವರ್ಗದವರಾದ ಭೈರನಾಯಕ, ನಿರ್ದೇಶಕರು, ಸಹಕಾರಿ ರೈತರು ಹಾಜರಿದ್ದರು.

ಶಾಸಕ ಮುನಿರತ್ನ ಸದಸ್ಯತ್ವ ರದ್ದತಿಗೆ ಒತ್ತಾಯಿಸಿ ಪ್ರತಿಭಟನೆ


ಶಾಸಕ ಮುನಿರತ್ನ ವಿರುದ್ಧ ದಸಂಸ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಹುಣಸೂರು, ಸೆ.22– ಶಾಸಕ ಮುನಿರತ್ನ ಅವರ ವಿಧಾನಸಭಾ ಸದಸ್ಯತ್ವ ರದ್ದುಪಡಿಸುವಂತೆ ಒತ್ತಾಯಿಸಿ ದಸಂಸ ಕಾರ್ಯಕರ್ತರು ನಗರದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ಅವರಿಗೆ ಮನವಿ ಸಲ್ಲಿಸಿದರು.

ಮುಖಂಡ ಕೆಂಪರಾಜು ಮಾತನಾಡಿ, ಶಾಸಕ ಮುನಿರತ್ನ ಅವರು ಕೆಲವು ದಿನಗಳ ಹಿಂದೆ ದಲಿತ ಗುತ್ತಿಗೆದಾರನ ಜಾತಿ ನಿಂದನೆ ಮಾಡಿ ದೌರ್ಜನ್ಯ ಎಸಗಿದ್ದಾರೆ. ಮಹಿಳೆಗೆ ಕೆಲವು ಆಮಿಷ ತೋರಿಸಿ ತಮ್ಮ ರಾಜಕೀಯ ಪ್ರಭಾವದಿಂದ ಅತ್ಯಾಚಾರವೆಸಗಿರುವ ಆರೋಪವಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಗಳಲ್ಲಿ ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಜಾತಿ ನಿಂದನೆ ಪ್ರಕರಣದಲ್ಲಿ ಈಗಾಗಲೇ ನ್ಯಾಯಾಲಯದ ಆದೇಶದಂತೆ ಜೈಲಿಗೆ ಹೋಗಿ ಅತ್ಯಾಚಾರ ಪ್ರಕರಣದಲ್ಲಿ ಪುನಃ ಪೊಲೀಸ್‌ನವರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಜನರಿಂದ ಆಯ್ಕೆಯಾದ ಶಾಸಕ ಮುನಿರತ್ನ ಸಮಾಜಕ್ಕೆ ಮಾದರಿಯಾಗಿರುವುದನ್ನು ಬಿಟ್ಟು ಕೊಳಕು ಮನಸ್ಸಿನ ಅನಾಚಾರ ಕೆಲಸಗಳನ್ನು ಮಾಡಿರುವುದು ಸಮಾಜ ತಲೆತಗ್ಗಿಸುವ ಕೆಲಸವಾಗಿದೆ ಎಂದರು.

ಇದೇ ವೇಳೆ ಉಪ ತಹಸೀಲ್ದಾರ್ ನರಸಿಂಹಯ್ಯ ಅವರು ಮನವಿ ಪತ್ರ ಸ್ವೀಕರಿಸಿದರು.

ಪ್ರತಿಭಟನೆಯಲ್ಲಿ ದಸಂಸ ಮುಖಂಡರಾದ ನಿಂಗರಾಜ್, ದೇವೇಂದ್ರ, ಗಜೇಂದ್ರ, ಮಲ್ಲಿಕ್, ದಲಿತ ಮಹಿಳಾ ಒಕ್ಕೂಟದ ಕಮಲಾಬಾಯಿ, ಲಕ್ಷ್ಮಿಬಾಯಿ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಪಿ.ಪಟ್ಟಣ ಬಳಿ ಚಿರತೆ ಪ್ರತ್ಯಕ್ಷ

ಪಿರಿಯಾಪಟ್ಟಣ, ಸೆ.22– ತಾಲೂಕಿನ ಅಬ್ಬೂರು ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ಚಿರತೆ ಪ್ರತ್ಯಕ್ಷವಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿದೆ. ಗ್ರಾಮದ ಜಮೀನಿನಲ್ಲಿ ರೈತರು ಕೆಲಸ ಮಾಡುತ್ತಿದ್ದ ವೇಳೆ ಪ್ರತ್ಯಕ್ಷವಾದ ಚಿರತೆ ರೈತರ ಕೂಗಾಟದಿಂದ ಅಲ್ಲಿಂದ ಓಡಿ ಹೋಯಿತು ಎನ್ನಲಾಗಿದೆ. ಈ ವೇಳೆ ಕೆಲವರು ಚಿರತೆ ಜಮೀನಿನಲ್ಲಿ ಓಡಾಡುತ್ತಿರುವುದು ಮತ್ತು ಓಡಿ ಹೋಗುತ್ತಿರುವುದನ್ನು ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ, ಚಿರತೆ ಸೆರೆಗೆ ಬೋನ್ ಇಟ್ಟಿದ್ದಾರೆ ಎನ್ನಲಾಗಿದೆ.

ನಾಳೆ ಸಹಕಾರ ಸಂಘದ ವಾರ್ಷಿಕ ಸಭೆ

ಕಂಪಲಾಪುರ, ಸೆ.22– ಸಮೀಪದ ದೊಡ್ಡಬೇಲಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸೆ.24ರಂದು ಸಂಘದ ಆವರಣದಲ್ಲಿ ನಡೆಯಲಿದೆ. ಅಧ್ಯಕ್ಷ ಆರ್.ಎಸ್.ಮಹದೇವ್ ಅಧ್ಯಕ್ಷತೆ ವಹಿಸಲಿದ್ದು, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಭೆ ಯಶಸ್ವಿಗೊಳಿಸಬೇಕೆಂದು ಸಿಇಓ ರವಿ ತಿಳಿಸಿದ್ದಾರೆ.

7ನೇ ವೇತನ ಆಯೋಗ ಜಾರಿಯಾಗದೆ ನಿವೃತ್ತ ನೌಕರರು ಸಂಕಷ್ಟಕ್ಕೆ



ರಾಜ್ಯ ಮಹಾ ಪ್ರಧಾನ ಸಂಚಾಲಕ ಎಂ.ಪಿ.ಎಂ.ಷಣ್ಮುಖಯ್ಯ ಮಾತನಾಡಿದರು.

ತಿ.ನರಸೀಪುರ, ಸೆ.22– ನಿವೃತ್ತ ನೌಕರರಿಗೆ 7ನೇ ವೇತನ ಆಯೋಗ ನೀಡದ ಹಿನ್ನೆಲೆಯಲ್ಲಿ ಈ ಅವಧಿಯಲ್ಲಿ ನಿವೃತ್ತರಾದ 17,623 ನೌಕರರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ ಎಂದು ಕರ್ನಾಟಕ ನಿವೃತ್ತ ನೌಕರರ ವೇದಿಕೆ ರಾಜ್ಯ ಮಹಾ ಪ್ರಧಾನ ಸಂಚಾಲಕ ಎಂ.ಪಿ.ಎಂ.ಷಣ್ಮುಖಯ್ಯ ಹೇಳಿದ್ದಾರೆ.

ಪಟ್ಟಣದ ಸರ್ಕಾರಿ ನೌಕರರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ 7ನೇ ವೇತನ ಆಯೋಗ ಜಾರಿಗೆ ತಂದಿದೆ ಆದರೆ ಸರ್ಕಾರದ ಆದೇಶ 2022ರ ಜು.1 ರಿಂದ 2024ರ ಜು.31ರ ನಡುವೆ ನಿವೃತ್ತರಾದ ಎಲ್ಲಾ ನೌಕರರು, ಅಧಿಕಾರಿಗಳಿಗೆ ಅನ್ವಯವಾಗಿಲ್ಲ. ಈ ಅವಧಿಯಲ್ಲಿ 17,623 ಮಂದಿ ನಿವೃತ್ತರಾಗಿದ್ದು ಅವರಿಗೆ 7ನೇ ವೇತನ ಬಿಡುಗಡೆಯಾಗಿಲ್ಲ. ನಮಗೆ 6ನೇ ವೇತನಕ್ಕೆ ಸಂಬಂಧಿಸಿದಂತೆ ಮಾತ್ರವೇ ಬರಬಹುದಾದ ಸೌಲಭ್ಯ ಕೊಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ 7ನೇ ವೇತನ ಬಿಡುಗಡೆ ಮಾಡುವ ಸಂಬಂಧ ನಿವೃತ್ತ ಅಧಿಕಾರಿ ಡಾ.ಸುಧಾಕರ್ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಆಯೋಗವು ಕೂಲಂಕಷ ಪರಿಶೀಲನೆ ನಂತರ ಅಧಿಕಾರಿ ವರ್ಗ 2022ರ ಜೂ.30 ರವರೆಗೆ 6ನೇ ವೇತನ ಮುಗಿಯಲಿದ್ದು, 2022ರ ಜು.1 ರಿಂದ 7ನೇ ವೇತನ ಆಯೋಗ ಬರಲಿದ್ದು, ಎಲ್ಲ ನೌಕರರಿಗೆ 7 ನೇ ವೇತನ ಆಯೋಗದಡಿ ವೇತನ ನೀಡಬಹುದೆಂದು ಸ್ಪಷ್ಟವಾಗಿ ತಿಳಿಸಿತ್ತು. ಆದರೆ ಸರ್ಕಾರ ಕಟಾಫ್ ಡೇಟ್ ಮಾಡಿಕೊಂಡಿದ್ದು ಜು.1 ರಿಂದಲೇ 7ನೇ ಆಯೋಗದ ವೇತನ ಕೊಡುತ್ತೇವೆ. ಅದನ್ನು ಕಾಲ್ಪನಿಕವಾಗಿ ಕೊಡುತ್ತೇವೆ ಎಂದಿದೆ.

ನೌಕರರ ಸಂಘದ ರಾಜ್ಯ ಸಂಚಾಲಕ ಹೆಚ್.ಡಿ.ಮಾದಪ್ಪ, ಜಿಲ್ಲಾ ಸಂಚಾಲಕರಾದ ಮರಿಸ್ವಾಮಿ, ಶ್ರೀಕಂಠಮೂರ್ತಿ, ಕುಮಾರ್, ರಾಜೇಂದ್ರಪ್ಪ ಎನ್.ರಾಜಮ್ಮ, ಮಂಜುನಾಥ್, ಶ್ರೀಶೈಲ ಕುಂಬಾರ್, ತಾಲೂಕು ಸಂಚಾಲಕ ಹರೀಶ್, ಶಿವಕುಮಾರ್ ಹಾಜರಿದ್ದರು.

ಕುರಿಹುಂಡಿ ಗ್ರಾಪಂ ಅಧ್ಯಕ್ಷೆ ನಾಗಮಣಿ ನಿಧನ

ಮಲ್ಲುಂಡಿ, ಸೆ.22– ನಂಜನಗೂಡು ತಾಲೂಕಿನ ಕುರಿಹುಂಡಿ ಗ್ರಾಮದ ನಿವಾಸಿ,



ಗ್ರಾಪಂ ಅಧ್ಯಕ್ಷೆ ನಾಗಮಣಿ (60) ಭಾನುವಾರ ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಸಿ. ಶ್ರೀನಿವಾಸ್

ಹೆಚ್.ಡಿ.ಕೋಟೆ, ಸೆ.22– ಪಟ್ಟಣದ ಸ್ಟೇಡಿಯಂ ಬಡಾವಣೆ ನಿವಾಸಿ, ಮಾಜಿ ಶಾಸಕ ದಿ. ಹೆಚ್.ಬಿ. ಚೆಲುವಯ್ಯ ಅವರ ಪುತ್ರ ಹೆಚ್.ಸಿ.ಶ್ರೀನಿವಾಸ್ (55) ಭಾನುವಾರ ನಿಧನರಾದರು.



ಮೃತರು ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಪಟ್ಟಣದ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಜವರಯ್ಯ


ಹಿರೀಕ್ಯಾತನಹಳ್ಳಿ, ಸೆ.22– ಹಿರೀಕ್ಯಾತನಹಳ್ಳಿ ಗ್ರಾಪಂ ಮಾಜಿ ಉಪಾಧ್ಯಕ್ಷ ಸೀನಯ್ಯ ಅವರ ತಂದೆ ಜವರಯ್ಯ (88)



ಭಾನುವಾರ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯ ಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಶಿರೇನಹಳ್ಳಿಯಲ್ಲಿ ನಡೆಯಲಿದೆ.

ಹುಲಿ ದಾಳಿಗೆ ಎತ್ತು ಬಲಿ

ಹನಗೋಡು, ಸೆ.22–ನಾಗರಹೊಳೆ ನಗರ ರಾಷ್ಟ್ರೀಯ ಉದ್ಯಾನವನದ ಬಳಿಯ ಹಲಸೂರು ಗ್ರಾಮದಲ್ಲಿ ಹುಲಿ



ದಾಳಿಯಿಂದ ಎತ್ತೊಂದು ಬಲಿಯಾಗಿರುವ ಘಟನೆ ಭಾನುವಾರ ಬೆಳಗ್ಗೆ ನಡೆದಿದೆ.

ಗ್ರಾಮದ ಹುಣಸೆಕುಪ್ಪೆ ಅಣ್ಣೇಗೌಡರ ಮಗ ಮಂಜು ಎತ್ತು ಕಳೆದುಕೊಂಡವರು. ಭಾನುವಾರ ಬೆಳಗ್ಗೆ ಮೇಯಲು ಬಿಟ್ಟಿದ್ದ ವೇಳೆ ಅರಣ್ಯದಿಂದ ಹೊರ ಬಂದ ಹುಲಿ ಎತ್ತಿನ ಮೇಲೆ ದಾಳಿ ನಡೆಸಿದೆ. ಹುಲಿ ದಾಳಿಯಿಂದ ಜಾನುವಾರುಗಳು ಬೆದರಿ ಚೀರಾಟದಿಂದ ಪಕ್ಕದಲ್ಲಿ ಇದ್ದ ಮಂಜು ಅವರು ಕಣ್ಣಾರೆ ಕಂಡು ಭಯಭೀತರಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕಾಡಂಚಿನ ಪ್ರದೇಶಗಳಲ್ಲಿ ಹುಲಿ ಕಾಟ ಹೆಚ್ಚಾಗಿದ್ದು ಜನರು ಭಯಭೀತರಾಗಿದ್ದಾರೆ. ಕೂಡಲೇ ಹುಲಿಯನ್ನು ಸೆರೆ ಹಿಡಿಯಬೇಕೆಂದು ಗ್ರಾಮದ ಮುಖಂಡರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ. ಅರಣ್ಯ ಇಲಾಖೆಯವರು ಸ್ಥಳ ಮಹಜರು ನಡೆಸಿ ಎತ್ತನ್ನು ಕೊಂದ ಜಾಗದಲ್ಲಿಯೇ ಬಿಟ್ಟು ಕ್ಯಾಮರಾ ಅಳವಡಿಸಿ ಹುಲಿ ಹಿಡಿಯುವ ಪ್ರಯತ್ನ ಮಾಡುತ್ತೇವೆ ಎಂದರು.

36 ಕೋಟಿ ವೆಚ್ಚದಲ್ಲಿ ಮಿನಿ ವಿಧಾನಸೌಧ, ಕೋರ್ಟ್ ಕಟ್ಟಡ

ಶಾಸಕ ಅನಿಲ್ ಘೋಷಣೆ


ಆಶ್ರಯ ಬಡಾವಣೆ ನಿವಾಸಿಗಳಿಗೆ ಶಾಸಕ ಅನಿಲ್ ಮನೆ ಮಂಜೂರಾತಿ ಪತ್ರ ವಿತರಿಸಿದರು

ಸರಗೂರು, ಸೆ.22– 36 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಮಿನಿ ವಿಧಾನಸೌಧ ಹಾಗೂ ನ್ಯಾಯಾಲಯ ಕಟ್ಟಡ ನಿರ್ಮಾಣವಾಗಲಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಇಲ್ಲಿನ ಆಶ್ರಯ ಬಡಾವಣೆಯಲ್ಲಿ ನಡೆದ ಸಾರ್ವಜನಿಕ ಕುಂದು ಕೊರತೆ ವಿಚಾರಣೆ, ವಾರ್ಡ್‌ಗಳ ಭೇಟಿ ಹಾಗೂ ಆಶ್ರಯ ಬಡಾವಣೆ ನಿವಾಸಿಗಳಿಗೆ ಮನೆ ಮಂಜೂರಾತಿ ಆದೇಶ ಪತ್ರ ವಿತರಿಸಿ ಅವರು ಮಾತನಾಡಿ, ಕಟ್ಟಡಗಳ ನಿರ್ಮಾಣಕ್ಕೆ ಜಾಗ ಲಭ್ಯವಿಲ್ಲ. ನಿವೇಶನಗಳನ್ನು ಗುರುತಿಸಿ ಶೀಘ್ರದಲ್ಲೇ ಕಟ್ಟಡಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು ಹಾಗೆ ಸರಗೂರು ತಾಲೂಕು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ಹೇಳಿದರು.

ಹಲವಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣ ಜಾಗವನ್ನು ವೈಯಕ್ತಿಕವಾಗಿ ಹಣ ಸಂದಾಯದೊಂದಿಗೆ ಖರೀದಿಸಿ ಮಕ್ಕಳಿಗಾಗಿ ಸುಸಜ್ಜಿತ ಕ್ರೀಡಾಂಗಣ ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಆಶ್ರಯ ಬಡಾವಣೆ ನಿವಾಸಿಗಳಿಗೆ ಮನೆ ಮಂಜೂರಾತಿ ಆದೇಶ ಪತ್ರ ವಿತರಿಸಿ ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಿ ಎಸ್ಸಿ ಎಸ್ಟಿ ಫಲಾನುಭವಿಗಳಿಗೆ ಮುಂದಿನ ದಿನಗಳಲ್ಲಿ ಆದೇಶ ಪತ್ರ ವಿತರಿಸಲಾಗುವುದು, ಹಾಗೆ ಈಗಾಗಲೇ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಬಡ ಫಲಾನುಭವಿಗಳಿಗೆ ಸರ್ಕಾರಿ ಜಮೀನು ಗುರುತಿಸಿ ನಿವೇಶನ ವಿತರಿಸಲಾಗುವುದು ಎಂದರು.


ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಿ.ರವಿ ಮಾತನಾಡಿದರು. ಪಟ್ಟಣಕ್ಕೆ ಆಗಬೇಕಿರುವ ಕೆಲಸಗಳ ಬಗ್ಗೆ ಶಾಸಕರಲ್ಲಿ ಮನವಿ ಮಾಡಿದರು.


ನಂತರ ಶಾಸಕರು ಪಟ್ಟಣದ 12 ವಾರ್ಡ್‌ಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್ ಮಾತನಾಡಿದರು.

ತಹಶೀಲ್ದಾರ್ ರುಕೀಯಾ ಬೇಗಂ, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಸಣ್ಣತಾಯಮ್ಮ, ಶಿವಕುಮಾರ್, ನೂರಾಳಸ್ವಾಮಿ, ಮುಖ್ಯಾಧಿಕಾರಿ ಮಂಜುನಾಥ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಪಿ.ರವಿ, ಚಿಕ್ಕವೀರನಾಯಕ, ಭಾಗ್ಯಲಕ್ಷ್ಮಿ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಮುಖಂಡರಾದ ಶ್ರೀನಾಥ್, ರಾಮು, ಸ್ವಾಮಿ, ನವೀನ್, ರಮೇಶ್, ನಾಗರಾಜು, ರಂಗನಾಥ್, ಸತೀಶ್‌ಗೌಡ, ಪಿಎಸ್‌ಐ ನಂದೀಶ್ ಕುಮಾರ್, ನೀರಾವರಿ ಇಲಾಖೆ ಎಇ ಉಷಾ, ಅವಿನಾಶ್, ಸೆಸ್ಕ್ ಇಂಜಿನಿಯರ್ ದೀಪಕ್, ಅಶೋಕ್, ಪಟ್ಟಣ ಪಂಚಾಯಿತಿ ಸಿಬ್ಬಂದಿ ವರ್ಗದವರು, ಸಾರ್ವಜನಿಕರು ಉಪಸ್ಥಿತರಿದ್ದರು.

ಪಟ್ಟದ ಆನೆಯಾಗಿ ಕಂಜನ್, ಅರಮನೆಯ ಧಾರ್ಮಿಕ ಕಾರ್ಯದ ನಿಶಾನೆ ಆನೆಯಾಗಿ ಭೀಮ

ರಾಜವಂಶಸ್ಥರಾದ ಪ್ರಮೋದಾದೇವಿ ಅವರಿಂದ ಆನೆಗಳ ಆಯ್ಕೆ


ಪಟ್ಟದ ಆನೆಯಾಗಿ ಆಯ್ಕೆಯಾದ ಕಂಜನ್


ಪಟ್ಟದ ನಿಶಾನೆ ಆನೆಯಾಗಿ ಆಯ್ಕೆಯಾದ ಭೀಮ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಸೆ.22– ದಸರಾ ಮಹೋತ್ಸವದ ಅಂಗವಾಗಿ ನವರಾತ್ರಿ ವೇಳೆ ಅರಮನೆಯಲ್ಲಿ ರಾಜವಂಶಸ್ಥರಿಂದ ನಡೆಯುವ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳಲು ಪಟ್ಟದ ಆನೆಯಾಗಿ ಕಂಜನ್ ಹಾಗೂ ಪಟ್ಟದ ನಿಶಾನೆ ಆನೆಯಾಗಿ ಭೀಮ ಆಯ್ಕೆಯಾಗಿದೆ.

ನಾಡಹಬ್ಬ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಅರಮನೆಯಲ್ಲಿ ನವರಾತ್ರಿ ಸಂಭ್ರಮ ಮನೆ ಮಾಡಲಿದೆ. ಅ.3ರಿಂದ 12ರವರೆಗೆ ನವರಾತ್ರಿ ಮಹೋತ್ಸವ ಜರುಗಲಿದ್ದು, ಸಂಸದ, ರಾಜವಂಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ದರ್ಬಾರ್ ಹಾಲ್‌ನಲ್ಲಿ ಚಿನ್ನದ ಸಿಂಹಾಸನ ಏರಿ ದರ್ಬಾರ್ ನಡೆಸಲಿದ್ದಾರೆ. ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯದಲ್ಲಿ ಪಟ್ಟದ ಆನೆ, ಪಟ್ಟದ ಹಸು, ಒಂಟೆ, ಕಳಸ ಹೊತ್ತ ಮುತ್ತೈದೆಯರೊಂದಿಗೆ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗದಿಂದ ಅರಮನೆಯ ಕನ್ನಡಿ ತೊಟ್ಟಿವರೆಗೂ ದೇವರನ್ನು ತೆಗೆದುಕೊಂಡು ಹೋಗುವ ಪದ್ಧತಿಯಿದೆ. ಈ ಹಿನ್ನೆಲೆಯಲ್ಲಿ ಪಟ್ಟದ ಆನೆಯಾಗಿ ಈ ಬಾರಿ ಕಂಜನ್ ಹಾಗೂ ಪಟ್ಟದ ನಿಶಾನೆ ಆನೆಯಾಗಿ ಭೀಮ ಆಯ್ಕೆಯಾಗಿದೆ.

7 ಆನೆಗಳನ್ನು ಪರಿಶೀಲಿಸಿದ ರಾಜವಂಶಸ್ಥರು: ನವರಾತ್ರಿ ಮಹೋತ್ಸವಕ್ಕೆ ಅರಮನೆಯಲ್ಲಿ ಸಿದ್ಧತಾ ಕಾರ್ಯ ಬಿರುಸಾಗಿ ಸಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಭಾನುವಾರ ಪಟ್ಟದ ಆನೆ ಆಯ್ಕೆ ಮಾಡುವ ಪ್ರಕ್ರಿಯೆ ನಡೆಸಿದರು. ರಾಜವಂಶಸ್ಥರ ಕೋರಿಕೆ ಮೇರೆಗೆ ದಸರಾ ಗಜಪಡೆಯ ಗಂಡಾನೆಗಳಾದ ಭೀಮ, ಕಂಜನ್, ಸುಗ್ರೀವ, ಗೋಪಿ, ಏಕಲವ್ಯ ಹಾಗೂ ಹೆಣ್ಣಾನೆಗಳಾದ ಲಕ್ಷ್ಮೀ ಮತ್ತು ಹಿರಣ್ಯ ಆನೆಗಳನ್ನು ಅರಮನೆಯ ಕನ್ನಡಿ ತೊಟ್ಟಿ ಬಳಿ ಕರೆದೊಯ್ಯಲಾಗಿತ್ತು. 5 ಗಂಡಾನೆಗಳನ್ನು ಪರಿಶೀಲಿಸಿದ ಪ್ರಮೋದಾದೇವಿ ಒಡೆಯರ್ ಅವರು ಕಂಜನ್ ಆನೆಯನ್ನು ಪಟ್ಟದ ಆನೆಯಾಗಿಯೂ, ಭೀಮ ಆನೆಯನ್ನು ಪಟ್ಟದ ನಿಶಾನೆಯಾಗಿಯೂ ಆಯ್ಕೆ ಮಾಡಿದರು.

ಮೃದು ಸ್ವಭಾವಿ ಕಂಜನ್: ದಸರಾ ಮಹೋತ್ಸವದಲ್ಲಿ 2ನೇ ಬಾರಿಗೆ ಪಾಲ್ಗೊಳ್ಳುತ್ತಿರುವ 25 ವರ್ಷದ ಮೃದು ಸ್ವಭಾವದ ಕಂಜನ್ ಆನೆಯನ್ನು 2014ರಲ್ಲಿ ಹಾಸನ ಜಿಲ್ಲೆಯ ಎಸಳೂರು ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿದು ದುಬಾರೆ ಕ್ಯಾಂಪ್‌ನಲ್ಲಿ ಪಳಗಿಸಲಾಗಿತ್ತು. ಹುಲಿ ಮತ್ತು ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವ ಅನುಭವವಿರುವ ಕಂಜನ್ ಆನೆ 2023ರಲ್ಲಿ ಮೊದಲ ಬಾರಿಗೆ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ಗಮನ ಸೆಳೆದಿತ್ತು. ಇದೀಗ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಎರಡೇ ವರ್ಷದಲ್ಲಿ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳಲು ಪಟ್ಟದ ಆನೆಯಾಗಿ ಆಯ್ಕೆಗೊಂಡಿದೆ. ಮಾವುತ ಜೆ.ಡಿ.ವಿಜಯ್, ಕಾವಾಡಿ ಕಿರಣ್ ಕಂಜನ್‌ನನ್ನು ಆರೈಕೆ ಮಾಡುತ್ತಿದ್ದಾರೆ.

ಸೌಮ್ಯ ಸ್ವಭಾವಿ ಭೀಮ: ದಸರಾ ಮಹೋತ್ಸವದಲ್ಲಿ 3ನೇ ಬಾರಿಗೆ ಪಾಲ್ಗೊಳ್ಳುತ್ತಿರುವ ಸೌಮ್ಯ ಸ್ವಭಾವದ ಭೀಮ ಆನೆ ಅರಮನೆಯ ಧಾರ್ಮಿಕ ಕಾರ್ಯದ ಪಟ್ಟದ ನಿಶಾನೆ ಆನೆಯಾಗಿ ಆಯ್ಕೆಯಾಗಿದೆ. 24 ವರ್ಷದ ಭೀಮ, 2000ದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಭೀಮನಕಟ್ಟೆ ಅರಣ್ಯ ಪ್ರದೇಶದಲ್ಲಿ ತಾಯಿಯಿಂದ ಬೇರ್ಪಟ್ಟ ಸ್ಥಿತಿಯಲ್ಲಿ ಸಿಕ್ಕಿತ್ತು. ಮೂರು ತಿಂಗಳ ಮರಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಣೆ ಮಾಡಿ ಮತ್ತಿಗೋಡು ಶಿಬಿರದಲ್ಲಿ ಪಳಗಿಸಿದೆ. ಕೇವಲ 17 ವರ್ಷ ವಯಸ್ಸಾಗಿದ್ದಾಗ 2017ರಲ್ಲಿ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ಸಾಲಾನೆಯಾಗಿ ಭಾಗವಹಿಸಿ ಗಮನ ಸೆಳೆದಿತ್ತು. 2018ರಲ್ಲಿ ಕಾಡಾನೆ ದಾಳಿಗೆ ಒಳಗಾಗಿ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಪಡೆದು, ಚೇತರಿಸಿಕೊಂಡಿತ್ತು. ಭೀಮ ಆನೆಗೆ ಮಾವುತನಾಗಿ ಗುಂಡಣ್ಣ, ಕಾವಾಡಿಯಾಗಿ ನಂಜುಂಡಸ್ವಾಮಿ ಆರೈಕೆ ಮಾಡುತ್ತಿದ್ದಾರೆ.

ಪಟ್ಟದ ಆನೆ, ಪಟ್ಟದ ನಿಶಾನೆ ಆನೆ ಆಯ್ಕೆ ನಡೆದಿದೆ



ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು 5 ಗಂಡಾನೆ, 2 ಹೆಣ್ಣಾನೆಯನ್ನು ಇಂದು ಪರಿಶೀಲಿಸಿದರು. ಅದರಲ್ಲಿ ಪಟ್ಟದ ಆನೆಯಾಗಿ ಕಂಜನ್ ಆನೆಯನ್ನು ಹಾಗೂ ಪಟ್ಟದ ನಿಶಾನೆಯಾಗಿ ಭೀಮ ಆನೆಯನ್ನು ಆಯ್ಕೆ ಮಾಡಿದ್ದಾರೆ. ದಸರಾ ಗಜಪಡೆಯ ಎಲ್ಲಾ ಆನೆಗಳು ಉತ್ತಮವಾಗಿದ್ದು, ಜಂಬೂ ಸವಾರಿಗೆ ಸಜ್ಜುಗೊಳಿಸಲಾಗುತ್ತಿದೆ.

\- ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ವನ್ಯಜೀವಿ ವಿಭಾಗ

ದಸರಾ ಕುಸ್ತಿ ಪಂದ್ಯಾವಳಿಗೆ ಜೋಡಿ ಕಟ್ಟುವ ಕಾರ್ಯಕ್ಕೆ ಚಾಲನೆ


ದಸರಾ ನಾಡಕುಸ್ತಿ ಪಂದ್ಯಾವಳಿ ಅ.3ರಿಂದ ಆರಂಭಗೊಳ್ಳಲಿರುವ ಹಿನ್ನೆಲೆಯಲ್ಲಿ ಭಾನುವಾರ ಜೋಡಿ ಕಟ್ಟುವ ಕಾರ್ಯಕ್ರಮಕ್ಕೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು, ಸೆ.22(ಎಸ್‌ಬಿಡಿ)– ನಾಡಹಬ್ಬ ದಸರಾ ಮಹೋತ್ಸವದ ಭಾಗವಾದ ಕುಸ್ತಿ ಪಂದ್ಯಾವಳಿಯ ಚಟುವಟಿಕೆಗಳು ಆರಂಭಗೊಂಡಿವೆ.

ಕುಸ್ತಿ ಉಪ ಸಮಿತಿ ವತಿಯಿಂದ ದಸರಾ ವಸ್ತು ಪ್ರದರ್ಶನ ಆವರಣದ ಪಿ.ಕಾಳಿಂಗ ರಾವ್ ಗಾನಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ನಾಡಕುಸ್ತಿ ಜೋಡಿ ಕಟ್ಟುವ ಕಾರ್ಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು. ಬಳಿಕ ವಿವಿಧ ವಯೋಮಾನ ಹಾಗೂ ತೂಕ ವಿಭಾಗದಲ್ಲಿ ಸುಮಾರು 360ಕ್ಕೂ ಹೆಚ್ಚು ಪೈಲ್ವಾನರಿಗೆ ಜೋಡಿ ಕಟ್ಟಲಾಯಿತು.

ಈ ವೇಳೆ ಮಾತನಾಡಿದ ಅವರು, ಮೈಸೂರು ಮಹಾರಾಜರು ಕುಸ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ, ಪೋಷಿಸಿದ್ದಾರೆ. ಮೈಸೂರು ಕುಸ್ತಿಗೆ ರಾಷ್ಟ್ರ ಪ್ರಸಿದ್ಧಿ ಇದೆ. ಮೈಸೂರು ಮಣ್ಣಿನಲ್ಲಿ ಅತ್ಯಂತ ಪರಿಣತ ಕುಸ್ತಿ ಪಟುಗಳು ತಯಾರಾಗಿದ್ದಾರೆ. ಪೈಲ್ವಾನ್ ರುದ್ರ ಮೂಗ ಅವರ ಕುಸ್ತಿಗೆ ಜನ ಆಕರ್ಷಿತರಾಗಿ ಬರುತ್ತಿದ್ದರು. ನಂತರ ಬಾಲಾಜಿ, ನಂಜನಗೂಡು ನಂಜಯ್ಯ, ನಜರ್‌ಬಾದ್ ನಾರಾಯಣ್, ದಿಲ್ದಾರ್ ರಿಯಾಜ್, ಮುಕುಂದ, ಶ್ರೀಕಂಠು, ವಿಜಯೇಂದ್ರ, ಕೃಷ್ಣ, ನರಸಿಂಹಸ್ವಾಮಿ, ಆರ್.ಮಹದೇವು ಅವರಂತಹ ಅನೇಕ ಪೈಲ್ವಾನರಿದ್ದರು. ಜಿಲ್ಲೆ, ರಾಜ್ಯ ಮಟ್ಟವಲ್ಲದೆ ರಾಷ್ಟ್ರ ಮಟ್ಟದಲ್ಲೂ ಸ್ಪರ್ಧಿಸಿ, ಹೆಸರು ಮಾಡಿದ್ದರು ಎಂದು ಸ್ಮರಿಸಿಕೊಂಡರು.

ಮುನಿಕೃಷ್ಣ ಎಸ್ಪಿಯಾಗಿದ್ದಾಗ ಎಲ್ಲಾ ಕುಸ್ತಿ ಸಂಘಟನೆಯವರನ್ನು ಸೇರಿಸಿ, ಕುಸ್ತಿ ಕ್ರೀಡೆಯನ್ನು ಪೋಷಣೆ ಮಾಡುತ್ತಿದ್ದರು. ಪ್ರತಿ ಭಾನುವಾರ ಚೆನ್ನಯ್ಯ ಅಖಾಡದಲ್ಲಿ ಕುಸ್ತಿ ನಡೆಯುತ್ತಿತ್ತು. ಆಗ ನಾನು ಶಾಸಕ, ನಂತರ ಆರೋಗ್ಯ ಸಚಿವನಾಗಿದ್ದೆ ಕಾಂಪೌಂಡ್ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುತ್ತಿತ್ತು. ನಂತರ ಮುಂದುವರೆಯದ್ದಕ್ಕೆ ಕಾರಣ ತಿಳಿದಿಲ್ಲ. ಮತ್ತೊಂದು ಕಡೆ ಧ್ರುವ ಇನ್ನಿತರರು ಸೇರಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೆರವಿನೊಂದಿಗೆ ದೇವರಾಜ ಅರಸು ಹೆಸರಿನಲ್ಲಿ ಕುಸ್ತಿ ಅಖಾಡ ನಿರ್ಮಾಣ ಮಾಡಿದರು ಎಂದು ತಿಳಿಸಿದರು.

ಹಿಂದೆ ಕುಸ್ತಿ ನೋಡಲು ನಾನು ಮತ್ತು ಸಿದ್ದರಾಮಯ್ಯನವರು ಆಸಕ್ತಿಯಿಂದ ಬರುತ್ತಿದ್ದೆವು. ಕುಸ್ತಿ ಅಖಾಡದ ಪಕ್ಕದಲ್ಲಿ ಪ್ರತಿ ಭಾನುವಾರ ನಡೆಯುತ್ತಿದ್ದ ಫುಟ್ಬಾಲ್ ಪಂದ್ಯಗಳನ್ನು ನೋಡಲು ಕನಿಷ್ಠ ನಾಲ್ಕೈದು ಸಾವಿರ ಜನ ಸೇರುತ್ತಿದ್ದರು. ಕ್ರಮೇಣ ಕ್ರೀಡೆ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ. ಕ್ರೀಡೆ ಜನರನ್ನು ಒಂದುಗೂಡಿಸುತ್ತದೆ ನಾವೆಲ್ಲಾ ಒಂದೇ ಎಂಬ ಭಾವನೆಯಿಂದ ಬದುಕು ಕಟ್ಟಿಕೊಳ್ಳಲು ಕ್ರೀಡೆ ನೆರವಾಗಿದೆ. ಪ್ರಸ್ತುತ ಕ್ರೀಡೆಯನ್ನು, ಅದರಲ್ಲೂ ವಿಶೇಷವಾಗಿ ಕುಸ್ತಿಯನ್ನು ಪ್ರೋತ್ಸಾಹಿಸಬೇಕಿದೆ. ಮೈಸೂರಿನ ಹಿರಿಮೆ, ಪರಂಪರೆ ಭಾಗವಾದ ಕುಸ್ತಿ ರಾಷ್ಟ್ರಮಟ್ಟದಲ್ಲಿ ಮತ್ತೊಮ್ಮೆ ಪ್ರಖ್ಯಾತವಾಗಬೇಕಿದೆ ಎಂದು ಆಶಿಸಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ಕುಸ್ತಿ ಉಪಸಮಿತಿಯ ಉಪ ವಿಶೇಷಾಧಿಕಾರಿಯಾದ ಎಎಸ್‌ಪಿ ಎಲ್.ನಾಗೇಶ್ ಹಾಗೂ ಹಲವು ಪೈಲ್ವಾನರು ಉಪಸ್ಥಿತರಿದ್ದರು.

ಕುಸ್ತಿ ಉತ್ತೇಜನಕ್ಕೆ ಕ್ರಮ


ಕುಸ್ತಿ ಕ್ರೀಡೆಗೆ ಪರಂಪರೆ ಇದೆ. ಕುಸ್ತಿ ಪಂದ್ಯಾವಳಿ ದಸರಾಗಷ್ಟೇ ಸೀಮಿತವಾಗದೆ ನಿರಂತರವಾಗಿ ನಡೆಯುತ್ತಿರಬೇಕು. ಮೊದಲು ಗರಡಿಗಳ ಪುನಶ್ಚೇತನ ಆಗಬೇಕು. ಇದಕ್ಕೆ ತರಬೇತುದಾರರ ಸಭೆ ನಡೆಸಿ, ಚರ್ಚಿಸಬೇಕಿದೆ. ಎಲ್ಲರ ಸಮನ್ವಯತೆಯೊಂದಿಗೆ ಕುಸ್ತಿ ಕ್ರೀಡೆಯನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯಬೇಕಿದೆ. ದಸರಾ ನಂತರ ಮುಖ್ಯಮಂತ್ರಿಗಳೊಂದಿಗೆ ಕುಸ್ತಿ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೇನೆ. ಬಳಿಕ ಕುಸ್ತಿ ತರಬೇತುದಾರರು, ಪೈಲ್ವಾನರು, ಕ್ರೀಡಾಸಕ್ತರೊಂದಿಗೆ ಚರ್ಚಿಸಿ, ಕುಸ್ತಿ ಉತ್ತೇಜನಕ್ಕೆ ಕ್ರಮ ವಹಿಸಲಾಗುವುದು.

–ಡಾ.ಹೆಚ್.ಸಿ.ಮಹದೇವಪ್ಪ

ಧನಂಜಯನ ಮುಂದಾಳತ್ವದಲ್ಲಿ ನಡೆದ ತಾಲೀಮು

ಗಜಪಡೆ ನೋಡಲು ನೆರೆದಿದ್ದ ಜನ ಸಮೂಹ


ಭಾನುವಾರ ಸಂಜೆ ತಾಲೀಮಿನಲ್ಲಿ ಸಾಗಿದ ಗಜಪಡೆ.


ಗಜಪಡೆ ತಾಲೀಮು ವೇಳೆ ಆನೆಗಳನ್ನು ನೋಡಲು ಕಿಕ್ಕಿರಿದು ನೆರೆದಿದ್ದ ಜನ

ಮೈಸೂರು,ಸೆ22(ಪಿಎಂ)– ದಸರಾ ಮಹೋತ್ಸವಕ್ಕೆ ದಿನ ಗಣನೆ ಆರಂಭಗೊಂಡಿದ್ದು, ದಿನನಿತ್ಯ ಗಜಪಡೆ ಕಂಡು ಮೈಸೂರಿನ ನಾಗರಿಕರು ಹಾಗೂ ಪ್ರವಾಸಿಗರು ಸಂಭ್ರಮಿಸುತ್ತಿದ್ದಾರೆ. ತಾಲೀಮು ನಡೆಸಲು ಗಜಪಡೆ ಸಾಗುವ ಮಾರ್ಗದ ರಸ್ತೆ ಬದಿಯಲ್ಲಿ ಕಾದು ಕುಳಿತು ಸಾಲಾಗಿ ಸಾಗುವ ಆನೆಗಳನ್ನು ನೋಡುತ್ತಾ ಪುಳಕಗೊಳ್ಳುತ್ತಿದ್ದಾರೆ.

ಅಂತೆಯೇ ಭಾನುವಾರ ಸಂಜೆ ತಾಲೀಮಿನಲ್ಲಿ ಸಾಗಿದ ಗಜಪಡೆ ಕಂಡು ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಜನತೆ ರೋಮಾಂಚನಗೊಂಡರು. ಧನಂಜಯ ಆನೆಯ ಮುಂದಾಳತ್ವದಲ್ಲಿ 13 ಆನೆಗಳು ಗಾಂಭೀರ್ಯದ ಹೆಜ್ಜೆ ಹಾಕುತ್ತಿದ್ದರೆ, ರಸ್ತೆ ಬಂದಿಯಲ್ಲಿ ನಿಂತಿದ್ದ ಜನತೆ ಮೊಬೈಲ್ ಮತ್ತು ಕ್ಯಾಮರಾಗಳಲ್ಲಿ ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಶುಕ್ರವಾರ ರಾತ್ರಿ ಕಾದಾಡಿ ಆತಂಕ ಮೂಡಿಸಿದ್ದ ಧನಂಜಯ ಮತ್ತು ಕಂಜನ್, ಈಗಾಗಲೇ ಶಾಂತ ಸ್ಥಿತಿಯಲ್ಲಿದ್ದು, ಅದೇ ರೀತಿ ಇಂದು ಸಹ ಯಾವುದೇ ಗಲಿಬಿಲಿ ಇಲ್ಲದೇ ತದೇಕಚಿತ್ತದಲ್ಲಿ ಹೆಜ್ಜೆ ಹಾಕಿದವು. ಮುಂದಾಳತ್ವ ವಹಿಸಿದ್ದ ಧನಂಜಯ ಆನೆಯ ಹಿಂದೆಯೇ ಕಂಜನ್ ಅತ್ಯಂತ ಶಾಂತ ರೀತಿಯಲ್ಲಿ ಸಾಗಿತು.

ಅರಮನೆ ಆವರಣ ಹಾಗೂ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆಆರ್ ವೃತ್ತ, ಸಯ್ಯಾಜಿರಾವ್ ರಸ್ತೆಯಲ್ಲಿ ಸಾಗಿದ 13 ಆನೆಗಳು (ವರಲಕ್ಷ್ಮೀ ಹೊರತುಪಡಿಸಿ), ಅದೇ ಮಾರ್ಗದಲ್ಲಿ ಮರಳಿ, ಅರಮನೆ ತಲುಪಿದವು. ಈ ಎಲ್ಲಾ ಮಾರ್ಗದಲ್ಲೂ ಸಾರ್ವಜನಿಕರು, ಪ್ರವಾಸಿಗರು ಕಿಕ್ಕಿರಿದು ತುಂಬಿದ್ದರಲ್ಲದೆ, ಗಜಪಡೆ ಕಂಡು ಪುಳಕಿತರಾದರು. ಗಜಪಡೆ ಕ್ಯಾಪ್ಟನ್ ಅಭಿಮನ್ಯು ಎಲ್ಲಾ ಆನೆಗಳ ಹಿಂದೆ ಹೆಜ್ಜೆ ಹಾಕಿತು.

ಸಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆ ಬಳಿ ನಿಂತಿದ್ದ ಹಲವು ಸಾರ್ವಜನಿಕರು ಗಜಪಡೆಗೆ ಸೇವಂತಿಗೆ ಹೂ ನೀಡಿ ಭಕ್ತಿ ಅರ್ಪಿಸಿದರು. ಹೂಗಳನ್ನು ಸ್ವೀಕರಿಸಿದ ಮಾವುತರು ಅವುಗಳನ್ನು ಆನೆಗಳ ಹಣೆ ಮೇಲೆ ಕಟ್ಟಿದರೆ, ಇತ್ತ ಹೂ ನೀಡಿದ ಸಾರ್ವಜನಿಕರ ಮೊಗದಲ್ಲಿ ಭಕ್ತಿಭಾವ ಮೂಡಿತ್ತು.

ಟಿವಿ, ಮೊಬೈಲ್‌ಗಳಲ್ಲಿ ಆನೆಗಳನ್ನು ನೋಡಿದ್ದ ಮಕ್ಕಳು, ಇಂದು ನೈಜ ಆನೆಗಳನ್ನು ಕಾಣುವ ಕಾತುರದಲ್ಲಿ ತಮ್ಮ ಪೋಷಕರೊಂದಿಗೆ ಕಾದಿದ್ದರು. ತಮ್ಮ ಮುಂದೆ ಗಜಪಡೆ ಸಾಗುತ್ತಿದ್ದಂತೆ ಪುಟಾಣಿಗಳು ಪುಳಕಿತಗೊಂಡರು. ಆನೆಗಳ ಬೃಹತ್ ದೇಹ, ಗಂಭೀರದ ನಡಿಗೆ ನೋಡಿ ಸಂಭ್ರಮಿಸಿದರು.

ಸೆ.24ರಂದು ಮರದ ಅಂಬಾರಿ ತಾಲೀಮು ಮುಂದುವರಿಕೆ

ತಾಲೀಮು ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಉಪಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ, ಮರದ ಅಂಬಾರಿಗೆ ಬಣ್ಣ ಮಾಡಲಾಗಿದ್ದು, ಹಾಗಾಗಿ ನಾಳೆ (ಸೆ.23) ಮರದ ಅಂಬಾರಿ ತಾಲೀಮು ಇರುವುದಿಲ್ಲ. ನಾಳಿದ್ದು (ಸೆ.24) ಮರದ ಅಂಬಾರಿ ತಾಲೀಮು ಮುಂದುವರೆಯಲಿದೆ. ಅಂದು ಯಾವ ಆನೆಗೆ ಮರದ ಅಂಬಾರಿ ಕಟ್ಟಬೇಕೆಂದು ಸದ್ಯ ನಿರ್ಧಾರವಾಗಿಲ್ಲ ಎಂದು ತಿಳಿಸಿದರು. ವಲಯ ಅರಣ್ಯಾಧಿಕಾರಿ ಸಂತೋಷ್ ಹೂಗಾರ್ ಸೇರಿದಂತೆ ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಗಜಪಡೆ ನೋಡಿದ ಖುಷಿಯಲ್ಲಿ ಸಂಚಾರ ನಿರ್ಬಂಧಕ್ಕೂ ಬೇಸರಗೊಳ್ಳದ ಜನ...

ಗಜಪಡೆ ತಾಲೀಮು ವೇಳೆ ವಾಹನ ಸಂಚಾರ ಮತ್ತು ಜನ ಸಂಚಾರಕ್ಕೆ ನಿರ್ಬಂಧ ವಿಧಿಸುವುದು ಅನಿವಾರ್ಯ ಹಾಗೂ ಅತ್ಯಗತ್ಯ. ಗಮನಾರ್ಹ ಅಂಶವೆಂದರೆ, ಬಹುದೂರದವರೆಗೆ ಸಾಲಾಗಿ ವಾಹನಗಳು ನಿಲ್ಲುವಂತೆ ಆಗಿದ್ದರೂ ಬಹುತೇಕ ವಾಹನ ಸವಾರರು, ಯಾವುದೇ ಬೇಸರವಿಲ್ಲದೆ, ಗಜಪಡೆಯನ್ನು ನೋಡಿ ಸಂಭ್ರಮಿಸಿದರು. ಗಣ್ಯಾತಿಗಣ್ಯರು ಸಾಗುವಾಗ ಸಂಚಾರಕ್ಕೆ ನಿರ್ಬಂಧ ವಿಧಿಸಿದರೆ, ಬೇಸರ ವ್ಯಕ್ತಪಡಿಸುವ ಸಾರ್ವಜನಿಕರೇ ಹೆಚ್ಚು. ಆದರೆ ಗಜಪಡೆ ವಿಚಾರದಲ್ಲಿ ಬಹುತೇಕ ಜನತೆ, ಯಾವುದೇ ಬೇಸರವಿಲ್ಲದೆ, ನಿಂತಿರುವ ತಮ್ಮ ವಾಹನಗಳಿಂದಲೇ ಆನೆಗಳನ್ನು ನೋಡಿ ಖುಷಿಪಟ್ಟರು. ಅವರಲ್ಲಿ ವಾಹನ ದಟ್ಟಣೆ ಉಂಟಾಗಿದೆ ಎಂಬ ಬೇಸರವಂತೂ ಕಂಡು ಬರಲಿಲ್ಲ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೋಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯುದ್ಧ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯುದ್ಧ (ಹಿಂ)	4 ಪ್ರದರ್ಶನಗಳು
ಸಂಗಂ	
ಹಗ್ಗ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗೋಟ್ (ತ)	4 ಪ್ರದರ್ಶನಗಳು
ಪ್ರಭಾ	
ಖೈದಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟ್ರಾನ್ಸ್‌ಫಾರ್ಮರ್ಸ್ ಒನ್ (3ಡಿ) (ಇಂ): ಬೆ.11.20ಕ್ಕೆ, ರಾ.7.40ಕ್ಕೆ, ರಾ.9.55ಕ್ಕೆ, ಹಗ್ಗ (ಕ): ಮ.1.35ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.4.15ಕ್ಕೆ.
ಸ್ಕ್ರೀನ್ 2	ಲಂಗೋಟಿ ಮ್ಯಾನ್ (ಕ): ಬೆ.10.30ಕ್ಕೆ, ಲಬ್ಬರ್ ಪಾಂಡು (ತ): ಮ.1.40ಕ್ಕೆ, ನಂದನ್ (ತ): ಸಂ.4.35ಕ್ಕೆ, ಕಹಾನ್ ಶುರು ಕಹಾನ್ ಕಥಂ (ಹಿಂ): ರಾ.7.15ಕ್ಕೆ, ತುಂಬ್ಬಾಡ್ (ಹಿಂ): ರಾ.9.55ಕ್ಕೆ.
ಸ್ಕ್ರೀನ್ 3	ಉಪೇಂದ್ರ (ಕ): ಬೆ.10.50ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಮ.1.35ಕ್ಕೆ, ಅನ್ನ (ಕ): ಸಂ.4.35ಕ್ಕೆ, ಯುದ್ರ (ಹಿಂ): ರಾ.7.15ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ, ರಾ.7.10ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.4.05ಕ್ಕೆ, ಯುದ್ರ (ಹಿಂ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಧ್ರುವತಾರೆ (ಕ): ಮ.1.05ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಸಂ.4.10ಕ್ಕೆ, ಹಗ್ಗ (ಕ): ರಾ.7.05ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ರಾ.9.35ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.1.10ಕ್ಕೆ, ಲಂಗೋಟಿ ಮ್ಯಾನ್ (ಕ): ಸಂ.4.10ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7.15ಕ್ಕೆ.
ಸ್ಕ್ರೀನ್ 3	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕೋಳಿಪಣ್ಣೈ ಚೆಲ್ಲದುರೈ (ತ): ರಾ.9.40ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ರಾ.9.30ಕ್ಕೆ, ನಂದನ್ (ತ): ಸಂ.4.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.6.30ಕ್ಕೆ

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಯುವ ಸಂಭ್ರಮಕ್ಕೆ ಸಜ್ಜಾಗುತ್ತಿದೆ ಬಯಲು ರಂಗಮಂದಿರ



ಮೈಸೂರು, ಸೆ.22(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಮುನ್ನುಡಿಯಾದ 'ಯುವ ಸಂಭ್ರಮ' ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಾನಸ ಗಂಗೋತ್ರಿ ಬಯಲು ರಂಗಮಂದಿರ ಸಜ್ಜಾಗುತ್ತಿದೆ.


ವಿಶಿಷ್ಟ ದೀಪಾಲಂಕಾರದೊಂದಿಗೆ ಸೆ.24ರಿಂದ 30 ರವರೆಗೆ ಕನ್ನಡ ನಾಡು–ನುಡಿ, ಸಮಾನತೆ, ಸಂವಿಧಾನ, ಏಕತೆ, ಪ್ರಜಾಪ್ರಭುತ್ವದ ಪರಿಕಲ್ಪನೆಯೊಂದಿಗೆ ಯುವ ಸಮೂಹಕ್ಕೆ ಧೈರ್ಯ–ಸ್ಥೈರ್ಯವನ್ನು ತುಂಬುವ ಯುವ ಸಂಭ್ರಮಕ್ಕೆ ಇನ್ನೊಂದು ದಿನವಷ್ಟೇ ಬಾಕಿ ಇದ್ದು, ಸುಂದರ ವೇದಿಕೆ ಸಿದ್ಧವಾಗುತ್ತಿದೆ.

ಮಾನಸ ಗಂಗೋತ್ರಿ ಅತಿಥಿ ಗೃಹದಿಂದ ಪಡುವಾರಹಳ್ಳಿ ಸಿಗ್ನಲ್‌ವರೆಗೆ ಬೆಳಕಿನ ಚಿತ್ತಾರ ಕಣ್ಮನ ಸೆಳೆಯಲು ಅಣಿಯಾದರೆ, ಬಯಲು ರಂಗಮಂದಿರ ಸಂಗೀತ ರಸದೌತಣ ನೀಡಲು ರೆಡಿಯಾಗುತ್ತಿದೆ ಈಗಾಗಲೇ ಬಹುತೇಕ ಸಿದ್ಧತಾ ಕಾರ್ಯಗಳು ಪೂರ್ಣಗೊಂಡಿದ್ದು, ವಾಹನಗಳ ಅಚ್ಚುಕಟ್ಟು ಪಾರ್ಕಿಂಗ್ ವ್ಯವಸ್ಥೆ, ಮೊಬೈಲ್ ಶೌಚಾಲಯ, ವಸ್ತ್ರವಿನ್ಯಾಸಕ್ಕೆ ಪ್ರತ್ಯೇಕ ಕೊಠಡಿಗಳ ವ್ಯವಸ್ಥೆಗಳನ್ನು ಮಾಡಲಾಗಿದೆ.

ವಿಐಪಿಗಳು, ಕಲಾವಿದರು, ಮಾಧ್ಯಮದವರು ಹಾಗೂ ಪ್ರೇಕ್ಷಕ ಸಮೂಹ ತಮ್ಮ ತಮ್ಮ ವಾಹನಗಳನ್ನು ಯಾವ ಸ್ಥಳದಲ್ಲಿ ಪಾರ್ಕಿಂಗ್ ಮಾಡಬೇಕು ಎಂದು ಸೂಚಿಸುವ ನಾಮಫಲಕಗಳನ್ನು ಅಳವಡಿಸಲಾಗಿದೆ. ಮಳೆ ಬಂದರೂ ಕಲಾವಿದರಿಗೆ ತೊಂದರೆಯಾಗದ ರೀತಿಯಲ್ಲಿ ಶಾಮಿಯಾನ ವ್ಯವಸ್ಥೆ ಮಾಡಲಾಗಿದೆ. ವೇದಿಕೆಯ ಮೇಲೆ ಬೃಹತ್ ಎಲ್‌ಇಡಿ ಸ್ಕ್ರೀನ್ ಹಾಗೂ ಧ್ವನಿವರ್ಧಕಗಳನ್ನು ಅಳವಡಿಸುವ ಕಾರ್ಯವೂ ಚುರುಕಾಗಿ ನಡೆಯುತ್ತಿದೆ.

200ಕ್ಕೂ ಹೆಚ್ಚು ತಂಡ: ರಾಜ್ಯದಾದ್ಯಂತ ವಿವಿಧ ಕಾಲೇಜುಗಳ 200ಕ್ಕೂ ಹೆಚ್ಚು ತಂಡಗಳು ಯುವ ಸಂಭ್ರಮದಲ್ಲಿ ಭಾಗವಹಿಸಲಿದ್ದು, ಖ್ಯಾತ ನಟ ಶ್ರೀ ಮುರುಳಿ ಉದ್ಘಾಟಿಸಲಿದ್ದಾರೆ. ಪ್ರತಿನಿತ್ಯ ಸುಮಾರು 30 ತಂಡಗಳು ಪ್ರದರ್ಶನ ನೀಡಲಿವೆ ಎಂದು ಯುವ ಸಂಭ್ರಮ ಉಪ ಸಮಿತಿ ತಿಳಿಸಿದೆ.

4ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆಯಿತು ಆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ ಸದಾ ನಿಮ್ಮ ನೆನಪಿನಲ್ಲಿರುವ

ಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗ ರಾಮಕೃಷ್ಣನಗರ, ಮೈಸೂರು

ಶ್ರೀ ನಿಂಗಪ್ಪ (ಹಾಲಪ್ಪ)
ಕೆ.ಜಿ.ಕೊಪ್ಪಲು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

7ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮಮ್ಮ

ದಿವಂಗತ: ಹೋರಿ ಸುಬ್ಬೇಗೌಡರವರ ಧರ್ಮಪತ್ನಿ
ಬೂಕನಕೆರೆ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ / ಶ್ರೀ ಬಿ.ಎಸ್.ಪರಮೇಶ್, ನಿವೃತ್ತ ಡಿ.ಡಿ.ಪಿ.ಐ. ಬೂಕನಕೆರೆ.
ಶ್ರೀಮತಿ / ಶ್ರೀ ಬಿ.ಎಸ್.ಜಗದೀಶ್, ನಿವೃತ್ತ ಪ್ರಾಂಶುಪಾಲರು
ವಿಭಜಿತ ಮಹಾರಾಜ ಜೂ॥ ಕಾಲೇಜು, ಮೈಸೂರು.
ಶ್ರೀಮತಿ ಸರಸ್ವತಿ ಬೋರೇಗೌಡ,
ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಬೂಕನಕೆರೆ.
ಶ್ರೀಮತಿ / ಶ್ರೀ ಬೂಕನಕೆರೆ ವಿಜೇಂದ್ರ,
ಅಭಿವೃದ್ಧಿ ಅಧಿಕಾರಿ (ನಿ), ಭಾರತೀಯ ಜೀವ ವಿಮಾ ನಿಗಮ, ಮೈಸೂರು

ನಿಧನ



ಶ್ರೀ ಎನ್. ವೆಂಕಟರಾಮು
(ಶ್ರೀರಾಮ ಸೈಕಲ್ ಟ್ರೇಡರ್ಸ್)

ವಿಜಯನಗರ ಮೊದಲನೇ ಹಂತ ನಿವಾಸಿ ಇವರು ದಿನಾಂಕ 22.9.2024 ರಂದು ದೇವರ ಪಾದಕಮಲಗಳಿಗೆ ಸೇರಿದರು. ಇವರ ಅಂತಿಮ ವಿಧಿಗಳನ್ನು ದಿನಾಂಕ:24.9.2024 ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಮೈಸೂರಿನ ಗೋಕುಲಂ ಮುಕ್ತಿಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಪತ್ನಿ, ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಬಂಧುಮಿತ್ರರು. ಮೊ: 9342634643

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರಿ ನಿಯಮಿತ

ನಂ. 1164/1&2, ನಗರ ಪಾಲಿಕೆ ಮಳಿಗೆಗಳು, ಬಿಡಾರಂ ಕೃಷ್ಣಪ್ಪ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–24

ವಾರ್ಷಿಕ ಸಭೆ

ನಮ್ಮ ಸಹಕಾರಿಯ ಮಹಾಸಭೆಯನ್ನು ದಿನಾಂಕ 24–9–2024ರಂದು ಮಂಗಳವಾರ ಬೆಳಿಗ್ಗೆ 11ಕ್ಕೆ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಹೋಟೆಲ್ ಪ್ರೆಸಿಡೆಂಟ್, ಫುಡ್ ಲ್ಯಾಂಡ್ ಚಿತ್ರಮಂದಿರದ ಪಕ್ಕದಲ್ಲಿ, ಹಾರ್ಡಿಂಗ್ ಸರ್ಕಲ್, ಬಿ.ಎನ್. ರಸ್ತೆ, ಮೈಸೂರು, ಇಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಷೇರುದಾರ ಸದಸ್ಯರು, ಈ ಪ್ರಕಟಣೆಯನ್ನು ಆಹ್ವಾನವೆಂದು ಪರಿಗಣಿಸಿ ಸಭೆಗೆ ಹಾಜರಾಗುವಂತೆ ಕೋರಲಾಗಿದೆ. ಸಹಿ/– ಅಧ್ಯಕ್ಷರು



ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

IFT No: KMF/2024-25/IND0967 Date: 20.09.2024

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅಗತ್ಯವಿರುವ ಸಕ್ಕರೆಯನ್ನು ತ್ರೈ ಮಾಸಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ದಿನಾಂಕ:30.09.2024, ಸಂಜೆ 5.00ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (7411654265) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಶ್ರೀ ಭಾನು ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ.)

(ಬೆಂಗಳೂರು ಪ್ರಾಂತ ಮತ್ತು ಮೈಸೂರು ಪ್ರಾಂತ) ನಂ. 6, 1ನೇ ಮಹಡಿ, ಹರೀಶ್ ಕಾಂಪ್ಲೆಕ್ಸ್, ಹೆಬ್ಬಾಳು ಮುಖ್ಯ ರಸ್ತೆ, ಲೋಕನಾಯಕನಗರ, ಮೈಸೂರು–570 016

ವಾರ್ಷಿಕ ಮಹಾಸಭೆ

ದಿನಾಂಕ: 24–9–2024ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ, 2023–24ನೇ ಸಾಲಿನ 15ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಎಸ್. ಕೋಳಾಲ ಗೌಡ ರವರ ಅಧ್ಯಕ್ಷತೆಯಲ್ಲಿ ಮೈಸೂರು ನಗರದ ಜೆಎಲ್‌ಬಿ ರೋಡ್, ರೋಟರಿ ಭವನದ ದೇವೇಗೌಡ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದೇ ಇರುವ ಸದಸ್ಯರುಗಳು ಈ ಪ್ರಕಟಣೆಯನ್ನು ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ, ವಾರ್ಷಿಕ ಮಹಾಸಭೆಗೆ ತಪ್ಪದೇ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ದೂರವಾಣಿ: 7019439822, 7848950882, 9739777793

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ. ಮೊ: 9480792164



